

ಸಂಚಯ

ಸಾಂಸ್ಕೃತಿಕ ಪತ್ರಿಕೆ

ಸಂಚಿಕೆ ೨೧

ಸಂಚಯ ಗ್ಯಾಲರಿ



ಆರ್.ಎಂ. ಹಡಪದ್ ಅವರ ರೇಖಾಚಿತ್ರ

ಸಂಚಯ

ಸಾಂಸ್ಕೃತಿಕ ಪತ್ರಿಕೆ
ತ್ರೈಮಾಸಿಕ

ಸಂಪುಟ : ೧೩
ಸಂಚಿಕೆ : ೧(೬೨)
ಜನವರಿ ೨೦೦೪

ಹೊಸ ಮರದಲಿ ಹೂ ತುಂಬಿದೆ, ನೋಡು!
ಆಲಿಸು! ಜೇನಿನ ಹಬ್ಬದ ಹಾಡು!
ಜೀವನವೆಂಬುದು ಹೂವಿನ ಬೀಡು;
ಕವಿಯೆದೆ ಹೆಜ್ಜೇನಿನ ಗೂಡು!

— ಕುವೆಂಪು

ಸಂಪಾದಕ :
ಡಿ.ವಿ. ಪ್ರಹ್ಲಾದ್

ಚಂದಾವಿವರ
ವಾರ್ಷಿಕ ಚಂದಾ : ರೂ. ೧೦೦/-
ಎರಡು ವರ್ಷ : ರೂ. ೨೦೦/-
ಐದು ವರ್ಷ : ರೂ. ೫೦೦/-

ಮುಖಪುಟ ಮತ್ತು ರೇಖಾಚಿತ್ರಗಳು :
ಎಸ್. ಋತ, ಸೃಜನ್
ಗ್ಯಾಲರಿ:
ಆರ್. ಎಂ. ಹಡಪದ್ ಅವರ ಕೃತಿಗಳು



ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ. ೦೮೦ – ೬೭೯೧೨೫

ಹೊಳೆದದ್ದೆ ತಾರೆ
ಉಳಿದದ್ದು ಆಕಾಶ!


ಪ್ರಿಯ ಓದುಗರೆ,

ಹೊಸ ವರ್ಷದ ಶುಭಾಶಯಗಳು.

ಹಳೆಯ ಎಲ್ಲ ನೋವುಗಳನ್ನು ಗುಣ-ಅವಗುಣಗಳನ್ನು ತನ್ನೊಳಗೆ ಇಟ್ಟುಕೊಂಡ ಮತ್ತೊಂದು ಹೊಸ ವರ್ಷ.

ಹಿರಿಯ ಕವಿಗಳಾದ ಕೆ.ಎಸ್.ನ. ತಮ್ಮ 'ಕಡೆಯ ಮನೆಗೆ' ಹೊರಟುಬಿಟ್ಟಿದ್ದಾರೆ. ಅವರಿಗೆ ನಮಸ್ಕಾರ.

ಕುವೆಂಪು ಅವರ ಜನ್ಮ ಶತಮಾನೋತ್ಸವ ಆರಂಭವಾಗಿದೆ. ಈ ಹಿಂದೆ ಯಾವ ಲೇಖಕನ ಬಗ್ಗೆಯೂ ನಡೆಯದ ರೀತಿಯ ಶತಮಾನೋತ್ಸವದ ಆಚರಣೆಗೆ ಸರ್ಕಾರವೇ ಮುಂದಾಗಿದೆ. ತನ್ನ ಮಿತಿಯೊಳಗಿನ ಅಪ್ಪಟ ಸರ್ಕಾರಿ ಶೈಲಿಯಲ್ಲೇ ಇದರ ಆಚರಣೆಯೂ ನಡೆಯುತ್ತಿದೆ. ಕುವೆಂಪು ಅವರನ್ನು ಅವರ ಕೃತಿಗಳಿಂದ ಗುರುತಿಸುವ ಬದಲಾಗಿ ಭಜನೆ, ವಿವಾದಗಳೇ ಮೇಲೆದ್ದು ನಿಂತಿವೆ. 'ಭಾರತ ಜನನಿಯ ತನುಜಾತೆಯನ್ನ' ನಾಡಗೀತೆ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ನಮ್ಮ ಸಂಕುಚಿತತೆ ಎಡವಟ್ಟುತನಗಳೆಲ್ಲಾ ಬಯಲಾಗಿದೆ. ರಾಷ್ಟ್ರಗೀತೆಯ ಮಾದರಿಯಲ್ಲಿ ನಾಡಗೀತೆಯೊಂದನ್ನು ೧೯೨೪ರಲ್ಲಿ ಬರೆದ ಕುವೆಂಪು ಅದನ್ನು ಕಾಲಾನುಕ್ರಮದಲ್ಲಿ ಬೆಳೆಸಿ, ತಿದ್ದಿ ಬರೆದಿದ್ದಾರೆ. ಹೀಗೆ ಬರೆದಿರುವ ಹಾಡಿನಲ್ಲಿ ನಮ್ಮ ನಾಡು-ಸಂಸ್ಕೃತಿಯ ಎಲ್ಲ ಸಂಗತಿಗಳನ್ನು ಒಳಗೊಳ್ಳುವುದು ಅಸಾಧ್ಯ. ಅವತ್ತಿನ ಕನ್ನಡತನ ಕರ್ನಾಟಕತ್ವ ಇವತ್ತಿನ ನಮ್ಮ ಕನ್ನಡತನ ಕರ್ನಾಟಕತ್ವ ಬೇರೆಯದೇ ಆಗಿದೆ. ಕೊನೆಗೆ ರೆಕ್ಕೆಪುಕ್ಕ ಕತ್ತರಿಸಲ್ಪಟ್ಟು, ಸಭೆಗಳಿಗೆ ಹಾಡಬಲ್ಲ ಎರಡು ನಿಮಿಷದ ನಾಡಗೀತೆ ಸರ್ಕಾರದ ಎಲ್ಲರಿಗೂ ಒಳ್ಳೆಯವರಾಗಲೇ ಬೇಕಾದ ನೀತಿಗೆ ಅನುಗುಣವಾಗಿದೆ.



ನಮ್ಮ ಜನಕ್ಕೆ ಮತ್ತು ಸರ್ಕಾರಕ್ಕೆ ಇಂಗ್ಲಿಷ್ ಶಾಲೆಗಳು ಬೇಕು, ಕಂಪ್ಯೂಟರ್, ಕೇಬಲ್ ಟೀವಿ, ಸಿನಿಮಾ, ಅಮೆರಿಕ, ಆನ್‌ಲೈನ್ ಲಾಟರಿಗಳಂತೆ 'ಕನ್ನಡ ಮಾತೆ'ಯೂ ಒಂದು ಭಾವುಕ ನೆಲೆಯನ್ನ

ಪೂರೈಸಬೇಕು. ಅದಕ್ಕೆ ಸರ್ಕಾರ ನಮ್ಮ ಮಕ್ಕಳಿಗೆ ಕೊಡುವ ಪ್ರಾಥಮಿಕ ಶಿಕ್ಷಣವನ್ನ ಜೊತೆಗೆ ತನ್ನ ಆಡಳಿತವನ್ನ ಕನ್ನಡದಲ್ಲೇ ನಡೆಸುವಂತೆ ಕಡ್ಡಾಯ ಮಾಡ ಹೊರಡದೆ, ನಮ್ಮ ಮನಃಸ್ಥಿತಿಗೆ ತಕ್ಕ ಹಾಗೆ ನಾಡಗೀತೆಯನ್ನು ಒಪ್ಪುವ ಛಾಪು ಒತ್ತುತ್ತಿದೆ. ನಾಡಗೀತೆ ಎನ್ನುವುದು ಜನಗಳಿಂದ ಹೊಮ್ಮಬಹುದಾದ ಗೀತೆಯೇ ಹೊರತು ಸರ್ಕಾರದ ಮುದ್ರೆಯಿಂದಲ್ಲ. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ನಾಡಿನ ಏಕೀಕರಣ ಕಾಲದಲ್ಲಿ ಸ್ಫೂರ್ತಿ ತುಂಬಿದ ಗೀತೆ, ಹಾಗೆಯೇ 'ಹಚ್ಚೇವು ಕನ್ನಡದ ದೀಪ', ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಹಾಡುತ್ತಿದ್ದ ಅನೇಕ ದೇಶಭಕ್ತಿಯ ಲಾವಣಿಗಳು ನಾಡಗೀತೆಗಳೇ. ನಾವುಗಳೂ ನಮ್ಮ ಶಾಲೆಯ ದಿನಗಳಲ್ಲಿ 'ಜೈ ಭಾರತ ಜನನಿಯ' ಹಾಡನ್ನ ಮೈತುಂಬಿ ಹಾಡಿ ಅನುಭವಿಸಿದ್ದೆವು. ಇವತ್ತಿಗೂ ಅದು ಕನ್ನಡದ ಮೇಲಿನ ಶ್ರದ್ಧೆಯನ್ನು 'ನಮ್ಮತನ'ವನ್ನು ಉದ್ದೀಪಿಸುತ್ತಿದೆ. ಅದನ್ನು ಇರುವ ಹಾಗೇ ಬಿಟ್ಟು ಬೇಕಾದವರು ಬೇಕಾದ ಹಾಗೆ ಹಾಡುವ ಹಾಗಿರಬೇಕು. ಏಕರೂಪದ ನಗು ಅಳು ನಾಡಭಕ್ತಿಯ ಅಭಿವ್ಯಕ್ತಿ ಯಾವತ್ತಾದರೂ ಸಾಧ್ಯವೆ? ಈ ಅಂಗೀಕಾರ ಅವಸರದ ಕತ್ತರಿ ಪ್ರಯೋಗಗಳು ವಿವಾದಗಳಿಗೆ ಪ್ರತಿ ಜಾತಿಯೂ ತಾನೆಷ್ಟು ಬಲಶಾಲಿ ಎಂದು ತೋಳು ಮಸೆಯುವುದಕ್ಕೆ ಸಾಧನವಾಗುತ್ತಿದೆ. ನಾಡಗೀತೆ ಅನ್ನುವುದು ಆಯಾ ಕಾಲ, ಪ್ರದೇಶ, ಪರಿಸ್ಥಿತಿಗಳಿಗೆ ಅನುಗುಣವಾಗಿ ಜನರಿಂದ ಜನರ ನಡುವೆ ಉಜ್ವಲಗೊಳ್ಳುವಂಥದ್ದು. ಈ ಸಾಂಸ್ಕೃತಿಕ ಸೂಕ್ಷ್ಮ ಸರ್ಕಾರಕ್ಕೆ ಅರ್ಥ ಮಾಡಿಸುವುದು ಕಷ್ಟ.


ಇನ್ನು ಸಂಚಯ ಕುರಿತು ಕೆಲ ಮಾತು :

ಈ ಸಂಚಿಕೆಯೊಂದಿಗೆ ಹೊಸಾ ಸಂಪುಟ (೧೩) ಆರಂಭಗೊಂಡಿದೆ. ಚಂದಾ ದಾರರಿಗೆ ಪ್ರತಿ ಕ್ಯಾಲೆಂಡರ್ ವರ್ಷಕ್ಕೆ ಚಂದಾ ನವೀಕರಿಸಲು ಅನುಕೂಲವಾಗುವ ಹಾಗೆ ಜನವರಿಯಿಂದ ಡಿಸೆಂಬರ್ ಒಳಗೆ (ಜನವರಿ, ಏಪ್ರಿಲ್, ಜುಲೈ, ಅಕ್ಟೋಬರ್) ನಾಲ್ಕು ಸಂಚಿಕೆಗಳು ಪ್ರಕಟಗೊಳ್ಳಲಿದೆ. ಹಿಂದಿನ ನಾಲ್ಕು ಸಂಚಿಕೆ ಪಡೆದಿರುವವರು ದಯವಿಟ್ಟು ಚಂದಾ ನವೀಕರಿಸಿ ಸಹಕರಿಸಿ.

ಸಂಚಯ ಇನ್ನಷ್ಟು ಮೊನಚಾಗಿ, ಸಕಾಲಿಕವಾಗಿ, ಸತ್ವಯುತವಾಗಿ ಹೊರಬರುವಂತೆ ಮಾಡುವ ಉತ್ಸಾಹ ಇದೆ. ನಿಮ್ಮೆಲ್ಲರ ಬೆಂಬಲ ಅದನ್ನು ಸಾಧ್ಯವಾಗಿಸಬೇಕಿದೆ. ೬೪ನೇ ಸಂಚಿಕೆ ಕೆ.ಎಸ್.ನ. ಕುರಿತ ವಿಶೇಷಾಂಕ, ಈ ಸಂಚಿಕೆ ೨೦೦೩ರ ಸಾಹಿತ್ಯ ಸ್ಪರ್ಧೆಯ ಬಹುಮಾನಿತರ ಬರಹಗಳನ್ನು ಒಳಗೊಂಡಿದೆ, ಇದನ್ನೆಲ್ಲ ಸಾಧ್ಯವಾಗಿಸಿದ ಎಲ್ಲರಿಗೂ ಕೃತಜ್ಞತೆಗಳು.

ಮತ್ತೆ ಮುಂದಿನ ಸಂಚಿಕೆಗೆ
ನಿಮ್ಮ
ಸಂಪಾದಕ

ಈ ಸಂಚಯದಲ್ಲಿ...



ಬಹುಮಾನಿತ ಕವಿತೆಗಳು

ಅಲೆಮಾರಿ ನದಿ ಎದುರು ಮೂರು ಇರುಳು

■ ಉಗಮ ಶ್ರೀನಿವಾಸ

ಅಮಲಿನ ಇರುಳು

ದಣಿವಿಲ್ಲದೆ ಹರಿಯುವ
ನದಿಗೂ ಗುರಿಯುಂಟು
ಇಲ್ಲಿನ ಈ ಕಪ್ಪನೆಯ
ಇರುವೆಯಂತ ಇರುಳು
ಬೆನ್ನಿಗೆ ಗುಡ್ಡ

ಅಬ್ಬಾ ನದಿಗೆ
ಭಯ ಎಂಬುದೇ ಇಲ್ಲ
ಗುಪ್ತಗಾಮಿನಿಯಂತೆ
ಸುಮ್ಮನೆ ಹರಿಯುತ್ತಲೇ ಇದೆ


ನದಿಯನ್ನು ದರೋಡೆ ಮಾಡುವ
ಎದೆಗಾರಿಕೆ ಯಾರಿಗೆ ತಾನೇ ಇದೆ?
ಅಥವಾ... ನದಿಯನ್ನು ಕಾಯುವವರಾದರೂ ಯಾರು?

ಈ ಸಪ್ಪಟ್ಟು ಸಮರಾತ್ರಿಯಲ್ಲಿ
ನದಿಗಿಂತ ನದಿಯ
ಶಬ್ದ ಭಯ ಹುಟ್ಟಿಸುತ್ತಿದೆ.

ಮಾಯದ ಇರುಳು

ಒಂದಿಡಿ ಇರುಳು ನದಿ ಎದುರು
ಕೂತು ಬಂದರೆ
ಅದು ಸಾಮ್ರಾಜ್ಯ ಗೆದ್ದುದ್ದಕ್ಕಿಂತ ಹೆಚ್ಚು

ಸುಮ್ಮನೆ ಕೂರಲು
ಕಾರಣವಾದರೂ ಏನು?
ಕಣ್ಣು ಕರಗುವವರೆಗೂ ಅಳಬೇಕು–
ನದಿಗೆ ಕನ್ನಡಿಯಾಗಬೇಕು
ಅಥವಾ ಬೆತ್ತಲಾಗಬೇಕು
ನದಿಯ ನೀರಿನಂತೆ




ಈ ಮಾಯದ ಇರುಳಿನಲ್ಲಿ
ಮಾಯೆಯ ನದಿ ಎದುರು
ಸುಳ್ಳುಗಳನ್ನು ಹೇಳಬೇಕು
ಅದು ಸತ್ಯವನ್ನು ಮುಚ್ಚಿಡುತ್ತದೆ

ಮಾಗಿದ ಇರುಳು

ಈ ಇರುಳೆಂಬ ಇರುಳಲ್ಲಿ
ಈ ನದಿಯೆಂಬ ನದಿಯಲ್ಲಿ
ಯಾರೋ, ಎಂದೋ ಹಚ್ಚಿಟ್ಟ
ದೀಪ ಇನ್ನೂ
ಉರಿಯುತ್ತಲೇ ಇದೆ.

ದಾರಿ ತಪ್ಪದ ನದಿಗೆ
ಆ ದೀಪ ಬ್ಯಾಟರಿಯೇ?
ಅಥವಾ
ಮೈಯೊದ್ದೆಯಾದ ನದಿಗೆ
ಗಮಲ ಶಾಖವೇ!




ಅಬ್ಬಾ! ನಿಜಕ್ಕೂ ನದಿ–
ದ್ರವವಲ್ಲ
ಅದು ಘನವೇ!
ದೂರದ ಇರುಳು
ಕರಗುತ್ತಿದೆ
ಆದರೆ ನದಿ ಮಾತ್ರ
ಹರಿಯುತ್ತಲೇ ಇದೆ.

ವಿಳಾಸ: S/o ಲೇಟ್ ಬಿ.ಎಸ್. ನಾಗರಾಜರಾವ್,
ಐದನೇ ಮುಖ್ಯರಸ್ತೆ, ಕೆ.ಆರ್. ಬಡಾವಣೆ
ತಿಪಟೂರು - ೫೭೨೨೦೨, ತುಮಕೂರು ಜಿಲ್ಲೆ

ಕಪ್ಪು ಕೂದಲಿನ ರಾಜಕುಮಾರಿ

■ ರೋಸಿ ಶೈಲೇಶ್



ನಾನು ಕಪ್ಪು ಕೂದಲಿನ ರಾಜಕುಮಾರಿ
ತುಟಿಯಿಟ್ಟು ಚುಂಬಿಸಿದಲ್ಲೆಲ್ಲಾ
ಹಸಿರು ಚಿಮ್ಮಿಸಿದವಳು
ಮಣ್ಣ ಬಿಸುಪಿಗೆ ಕಾವು ಕೊಟ್ಟು
ಕಪ್ಪಾಂತ ಕಪ್ಪಲ್ಲಿ ಕೆಂಪಾಂತ ಕೆಂಪಲ್ಲಿ
ಬಣ್ಣವಾದ ಈ ಮಣ್ಣಿನ ಪ್ರೀತಿಯಲ್ಲಿ
ಪಿಸುಗುಟ್ಟುವವಳು
ಬೀಜ ಬೇರಾಗಿಳಿಯುವ ಸ್ಪರ್ಶಕ್ಕೆ
ಭೂಮಿ ಮುಲುಗುಟ್ಟುವಾಗ
ಕಿಲಕಿಲ ನಕ್ಕವಳು;
ನಗುವಿನ ಹನಿಹನಿಯಲ್ಲಿ
ಹೊಸ ಜೀವ ಕೊಟ್ಟವಳು
ಎಲ್ಲವನ್ನೂ ಕಳಚಿಕೊಳ್ಳುವ ನೋವಿನಲ್ಲಿ
ಸಿಡಿಲು ಜಂಝಾವಾತಗಳಲ್ಲಿ ತತ್ತರಿಸಿದವಳು
ಆ ನೋವಿನಲ್ಲಿ ಮತ್ತೆ ಅರಳಿದವಳು
ಮತ್ತೆ ಜೀವಕ್ಕೆ ಮುತ್ತಿಟ್ಟವಳು
ಕಪ್ಪು ಕೂದಲಿನ ರಾಜಕುಮಾರಿ ನಾನು
ಕಪ್ಪಲ್ಲೇ ಹಸಿರಾದವಳು.

ವಿಳಾಸ: ನಂ. ೯೩೩, ೮ನೇ ಕ್ರಾಸ್, ೧೩ನೇ ಮೇನ್
ಶ್ರೀನಿವಾಸ ನಗರ ೨ನೇ ಹಂತ, ಬೆಂಗಳೂರು - ೫೬೦೦೫೦


ಭರತದ ಭಯ ಹುಣ್ಣಿಮೆಯಲ್ಲಿ...

ಸುನಂದಾ ಪ್ರಕಾಶ ಕಡಮೆ

ಸಪಾಟು ಎದೆಯ ಮೇಲೆ ಜಾಕೀಟು
ಹೆಣೆದೆರಡು ಜಡೆ ಕಟ್ಟಿದ ರಿಬ್ಬನ್ನು
ತಣ್ಣನೆ ಗಾಳಿಗೆ ಹಾರುವ
ಸಣ್ಣ ಸ್ಕರ್ಟಿನಡಿ
ಅಮ್ಮ ಹೊಲಿದ ಬಣ್ಣ-ಬಣ್ಣದ
ಚಡ್ಡಿಗಳ ತೊಡುತ್ತಿದ್ದಾಗ
ಹುಣ್ಣಿಮೆಯ ಹುಚ್ಚಿರಲಿಲ್ಲ

ಕಂಪಾಸಿನಲ್ಲಿಯ ಗುಲಾಬಿ ರಂಗಿನ
ರಬ್ಬರುಗಳ ಮೂಸುತ್ತ
ಹುಣಸೆ- ಉಪ್ಪು ಚಪ್ಪರಿಸುವ ಬಾಯಲ್ಲಿ
ಸರ್‍ರನೆ ಹೊರ ಓಡಿ
ಎತ್ತರೆತ್ತರ ತೆಂಗು ಸೋಗೆ ಮರೆಯಲ್ಲಿ
ಮಾಯವಾಗುವ ಪುಟ್ಟ ಮೀನಾಕಾರದ
ವಿಮಾನ ಬಿಟ್ಟುಹೋದ
ಸದ್ದಷ್ಟೇ ಆಲಿಸುವಾಗ
ಭರತದ ಭಯವಿರಲಿಲ್ಲ

ಇಲ್ಲಿ ಈ ದಡದಲ್ಲಿವೆ ಈಗ
ಸಾಲು ಸಾಲು ಸಂಸಾರ ಹೂಡಿ ಕೂತ
ಅಡ್ಡಿಗಳು!



ಇದೋ ಇಲ್ಲಿ
ತಲೆಶೂಲೆಯೆಂದರೆ
ಅಮೃತಾಂಜನ ಹಚ್ಚುವ
ಸಂಗಾತಿ

ಶಾಲೆಯಲ್ಲಿ ಆಡಿ ಬಂದ ಮಗುವಿನ
ಮುದ್ದು ಮಂಡಿಯ ಗಾಯಕ್ಕೆ
ಡೆಟಾಲಿನ ಹತ್ತಿ

ಈಗಷ್ಟೇ
ಆವರಿಸಿದಂತಿರುವ ಈ
ಹುಣ್ಣಿಮೆಯ ಹುಚ್ಚು ಮತ್ತು
ಭರತದ ಭಯ
ಕರಗುತ್ತಿರಲಿ ನದಿಯಾಳದಲ್ಲೇ.


ವಿಳಾಸ: ನಂ. ೯೦, ನಾಗಸುಧೆ, ಕಾಳಿದಾಸನಗರ
ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ - ೫೮೦ ೦೩೧

ಅವರು

■ ವಿಭಾ

ಭೋರೆಂದು ಸುರಿದ ಮಳೆ
ಯಾಕೋ ಅಕ್ಷರಗಳೆಲ್ಲ ಒದ್ದೆ
ಅವರು, ಎಂದೋ ಇಲ್ಲೆಲ್ಲ
ಬೀಜ ಬಿತ್ತಿದವರು
ಹಗಲಿರುಳು ಹಸಿ ನೆಲದ
ಕನಸ ಕಂಡವರು
ಹಿತವಾದ ಬಿಸಿಲ ಬಯಸಿ
ರೋಮಾಂಚಗೊಂಡವರು
ಪ್ರತಿ ಕ್ಷಣದಲ್ಲೂ ಈ ಮನೆಯ
ಬಯಲ ತುಂಬಿಕೊಂಡವರು
ಈಗಲೂ ಈ ಮಾಸಲು ಪುಟಗಳ
ಘಾಟು ವಾಸನೆಯಲ್ಲಿ
ಜೀವಂತವಾಗಿದ್ದಾರೆ!

ಅವರಂಥವರೇ ಇಂದೂ,
ಥೇಟ್ ಅವರ ಹಾಗೆಯೆ
ನೆಂದ ಗೋಡೆಯಡಿ ಸಿಕ್ಕು
ಉಸಿರುಗಟ್ಟಿ ಪ್ರಾಣಬಿಟ್ಟರು
ಈ ನಿರ್ವಿಕಾರ ಮಳೆಗೆ
ಸಮಯದ ಖಬರಿಲ್ಲ
ನೆಲದ ಸಂಯಮದ ಪರಿವೆಯಿಲ್ಲ!
ಆದರೆ,
ಸಕಲ ಜೀವಿಗಳ ಪೊರೆವ
ಆ ಪರವರ್‌ದಿಗಾರ
ಯಾವ ಬೆಚ್ಚನೆಯ ಗೂಡಲ್ಲಿ,
ಫಲ-ಪುಷ್ಪಗಳ ಹುತ್ತದ ನಡುವೆ
ತಪಕ್ಕೆ ಕೂತಿದ್ದನೋ ಯಾರು ಬಲ್ಲರು?



ನಂಬಿ,
ಅವರು ಎಂದೋ ಆ ಗೋಡೆಯಡಿ ಸಿಕ್ಕು
ಉಸಿರುಗಟ್ಟಿ ಪ್ರಾಣಬಿಟ್ಟಿರಬಹುದು;
ಇಲ್ಲಿ, ಈ ಅಕ್ಷರಗಳ ನಡುವೆ
ನವಿಲುಗರಿಯಾಗಿ, ನೀಲಿ, ಕೆಂಪು,
ಕಪ್ಪು ಬಣ್ಣಗಳಾಗಿ. ಪ್ರತಿ ಪುಟಗಳ
ನಡುವೆ, ಎಂಥದೋ ಚಿತ್ರ ಮೂಡಿಸಿ
ಮಾಯವಾಗಿರಬಹುದು.

ನಿಜದಲ್ಲಿ ಅವರು,
ಪುಟ ತೆರೆದ ಎಲ್ಲರೆದೆಯ
ಖಾಲಿ–ಕಾಗದದೊಳಗೆ
ಬೇರೆ-ಬೇರೆ ಅಕ್ಷರಗಳಾಗಿ
ಮೂಡತೊಡಗಿದ್ದಾರೆ!

ವಿಳಾಸ: ಕಛೇರಿ ಸಹಾಯಕಿ,
ವಿಭಾಗೀಯ ಅಂಚೆ ಕಛೇರಿ, ಬಾಗಲಕೋಟೆ

ಶರಧಿ

ವಸಂತ ಹುದೆಂಗಜೆ

ಒಳಲೊಳಗಿನ ಕಸವನ್ನು
ಮರಳ ದಂಡೆಗೆ ಚೆಲ್ಲಿ
ಮರಳುತ್ತವೆ
ಅಲೆಗಳು ಮೌನವಾಗಿ

ಸಾಲು ಹಿಡಿದು ಸಾಗುವ
ನೊರೆ ನೊರೆ ತೆರೆಗಳಲ್ಲಿ
ಏಕಮುಖತೆಯ ಸುಳಿವಿಲ್ಲ
ಭೀಕರ ಗಂಭೀರ ಶಾಂತ ಅವಿಶ್ರಾಂತ

ಶಶಿಯ ನೋಟಕೆ ಉಕ್ಕುವ
ರವಿಯ ಸ್ಪರ್ಶಕೆ ಬಿಕ್ಕುವ ಶರಧಿ
ಇರುಳಲ್ಲಿಮಲಗುವುದಿಲ್ಲ
ಮರುಗುವುದಿಲ್ಲಕೊರಗುವುದಿಲ್ಲ
ಬಿಸಿಲಿನ ಝಳಕ್ಕೆ ಆವಿಯಾಗುವುದಿಲ್ಲ
ಕಾಲದೊಂದಿಗೆ ಬದಲಾಗುವ ಸಿದ್ಧಾಂತವನ್ನು
ರುದ್ರ ಸಮುದ್ರ ಒಪ್ಪುವುದಿಲ್ಲ

ಎಲ್ಲೆ ಮೀರದ ಅನಂತ ಚಲನೆಯಲ್ಲಿ
ನಿರಂತರ ಗೇಯತೆಯಿದೆ
ಕ್ಷಣದ ಸ್ತಬ್ಧತೆಯಿದೆ.

ವಿಳಾಸ: 'ಮಂಜುವಾಣಿ' ಕಾರ್ಯಾಲಯ
ಅಂಚೆ : ಉಜಿರೆ – ೫೭೪ ೨೪೦
ಬೆಳ್ತಂಗಡಿ ತಾಲೂಕು, ದ.ಕ.

ಹರಿದ್ವರ್ಣ

■ ಜ್ಯೋತಿ ಗುರುಪ್ರಸಾದ್

ಬರೀ ಹಸಿರನ್ನು ಕಂಡು
ಗಿಡವೆನ್ನಲಾಗದು
ಚಿಗುರೊಡೆಯದೆ

ಗಿಡದಿಂದ ಬಣ್ಣವೇ
ಹೊರತು
ಬಣ್ಣದಿಂದ ಗಿಡವಲ್ಲ

ಹಸಿರು ಬಣ್ಣ ಬಳಿದ
ಹೂಗಳನ್ನು
ಹೂದಾನಿಯಲ್ಲಿ ಇಡಬಹುದು

ಬಾಡುವುದಿಲ್ಲ
ನೋಯುವುದಿಲ್ಲ
ರೆಪ್ಪೆ ಮುಚ್ಚುವುದಿಲ್ಲ
ದೇವತೆಗಳಂತೆ!

ಬೇರಿಂದ ಟಿಸಿಲೊಡೆದು
ಬೆಳೆಯುತ್ತ ಬೆಳೆಯುತ್ತ
ನಾಳಗಳಲ್ಲಿ ತುಂಬಿಕೊಳ್ಳುವ
ಹರಿದ್ವರ್ಣದ ಮಾತೇ ಬೇರೆ!
ಅದು ಹೂವು, ಹಣ್ಣಿನ ಭರವಸೆ
ಇದು...



ವಿಳಾಸ: ಕಾವೇರಿ, ತೆಳ್ಳಾರು ರಸ್ತೆ
ಹದಿನಾರನೇ ತಿರುವು, ಕಾರ್ಕಳ - ೫೭೪ ೧೦೪

ನಾಗುಂದಿ ನೆನಪು

ಮನೋಹರ ಜನ್ನು



ಆ ದಿನಗಳ ಮುಚುಮುಚು ನೆನಪುಗಳು
ಬಯಸಿದ್ದು ಬರೀ ಬೆಳದಿಂಗಳ ಹಾಲು ಜಗಿತ
ಅದಕ್ಕೂ ನನ್ನಪ್ಪನ ಸಣ್ಣಾಕೆಯಿಂದ
ಆತಂಕ ಬಂದಾಗ, ಜೀತದಲಿ ನೆಗೆತ

ಕೋಪಗೊಂಡು ಹಚ್ಚಿದ ಬೆಂಕಿ
ಕೆನ್ನಾಲಿಗೆ ಚಾಚಿ ಚಾಚಿಕೊಂಡಿದ್ದು
ಮನೆಯಲ್ಲ: ಬದುಕು

ಸುಟ್ಟ ಗಾಯಗಳಿಂದ ಕಪ್ಪಾದ ಹಾಲು ನಗೆ
ಬದುಕಿನ ತುಂಬೆಲ್ಲ ಹರಿಸಿದ್ದು
ರಕ್ತದ ಹೊಳೆ

ಬೆಳಕನ್ನು ಅರಸಿ ಹೋದ ಕಣ್ಣೀರ ಹನಿಗಳಿಗೆ
ಹನಿಯಾಗದ ಹಾಗೆ, ಕತ್ತಲೆಯ
ವಿಕಾರ ಕಾಲುಗಳಿಂದ ಒದ್ದಿದ್ದು ನೆನಪು

ಗೆರಟೆಯಲಿತ್ತ ಚಾಯನ್ನು ಗುಟುಕರಿಸಿ
ಬಾವಿಕಟ್ಟೆಯ ಮಾರುದೂರದಿ ಕುಳಿತು
ಕಿತ್ತ ಕಾಯಿಗಳ ರಾಶಿ ಮಧ್ಯೆ, ಗರಿಹಾಸಿ
ತಳ್ಳಬಳ್ಳಿ, ಸೊಂಟದ ಮಧ್ಯ ಕತ್ತಿ ಎತ್ತಲಾಗದೇ...

ಹಸಿದಾಗ ಉಪ್ಪಿನಕಾಯಿ ಒಂದಿಷ್ಟು ನಂಜಿ
ಕುಡಿದ ಅಂಬಲಿ ತಿಳಿನೀರು ಗಂಜಿ
ಬಳಲಿ ಸಂಜೆಯಲಿ ಗುಟುಕರಿಸಿ ದಾರು
ಬಸವಳಿದ ಜೀವಕ್ಕೆ ದೊರಕದೇ ನೀರು

ಹೊಡೆದ ಬರೆಗಳ ಮೇಲೆ ಒಂದಿಷ್ಟು ಉಪ್ಪು;
ಸರ್ಕಾರಿ ಆಶ್ವಾಸನೆಗಳು ಕೇಳಿದ್ದೇ ತಪ್ಪು!
ಬಲಬಂದು ನುಡಿದ ಒಂದೊಂದು ಮಾತುಗಳು
ನಾಲೆಯಲಿ ನಾಲಿಗೆ ಚಾಚಿ ನರಳಿದಂತೆ ಗೋಳು.

ನಾಗುಂದಿಯ ಮೇಲಿಟ್ಟ ಹತ್ತು ದಶಕದ ಪತ್ರ
ನಾಗದೇವತೆಯಂತೆ ಕಾಡುವದು ವಿಚಿತ್ರ
ಅನಾಥವಾದರೆ ದಶಕದಲಿ ಸರ್ಕಾರಿ ಸ್ವಾಮ್ಯ
ಆ ಪತ್ರ ವಾ(ಕಾ)ಯಿದೆ ಮಾತ್ರ ಇಂದಿಗೂ ಮಾನ್ಯ!?


ವಿಳಾಸ: ಈ.ಡಬ್ಲು ಎಸ್.–೩೦೮, ಅಂಬೇವಾಡಿ,
ದಾಂಡೇಲಿ, ಉ.ಕ.–೫೮೧ ೨೩೫

ಮಳೆಗೆ – ಅಪ್ಪನ ಮಾಡು

■ ರಾಧಕೃಷ್ಣ.ಎ

ಅಪ್ಪ ಕಟ್ಟಿದ ಮನೆಯ ಮಾಡು
ತೂತು ಬಿದ್ದು
ಮುಂಗಾರು ಮಳೆಗೆ ಸೋರುತಿರೆ
ಅಪ್ಪ ಚೆಂಬು, ತಪಲೆ ತಂದು
ನೀರ ತುಂಬಿಸುತ್ತಿದ್ದ
ಜಾರುವ ಕಂಬಳಿಯ ಮರು ಹೊದ್ದು
ತುಂಡು ಚಂಡಿ ಬೀಡಿಯ ಮತ್ತೆ ಎಳೆದು
ಕೆಮ್ಮುತ್ತಿದ್ದ

ಮೌನವಾಗಿದ್ದ ಅಮ್ಮನ ಕಂಡು
ಸಿಡಿಮಿಡಿಗೊಳ್ಳುತ್ತಿದ್ದ
ಇನ್ನೂ ಒಂದು ಚೆಂಬು ತಾ
ಅಲ್ಲೊಂದು ತಪಲೆ ಇಡು
ಮೌನವಾಗಿದ್ದ ಅಮ್ಮನಿಗೆ ಅದೇ ಕೆಲಸ



ಸೋರಬಹುದು ಮಾಡು
ಹೊದಿಸಬೇಕು ಮುಳಿ ಹುಲ್ಲು
ಎಂದು ಗೊತ್ತಿರದ ಆತ
ಸೋನೆ ಮಳೆಯನ್ನೇ ಬೈಯುತ್ತಿದ್ದಾನೆ
ಮತ್ತೆ ಜಾರುವ ಕಂಬಳಿಯ ಮರುಹೊದ್ದು
ಅಲ್ಲಿಟ್ಟ ಚೆಂಬ ನೀರ ಖಾಲಿ ಮಾಡಿ
ಮತ್ತೆ ಯಥಾ ಸ್ಥಾನದಲ್ಲಿರಿಸುತ್ತಿದ್ದ

ಮತ್ತೆ ಹೊಗೆ ಏಳುತ್ತಿತ್ತು
ಒಲೆಯದಲ್ಲ
ತುಂಡು ಬೀಡಿಯದ್ದು.

ವಿಳಾಸ: ಆನೆಗುಂಡಿ, ಕೈರಂಗಳ, ಬಂಟ್ವಾಳ - ೫೭೪೧೫೩

ವಿಳಾಸ: ಆನೆಗುಂದಿ, ಕೈರಂಗಳ, ಬಂಟ್ವಾಳ - ೫೭೪೧೫೩

ಜಗತ್ತಿನ ನೋವು; ಕಾವ್ಯಕ್ಕೆ ಕೇಂದ್ರ

ಪೋಲಿಶ್ ಕವಿ ಚೆಸ್ಲಾವ್ ಮೀಲೋಷ್‌ರವರೊಡನೆ ಹಿಂದಿಯ ಪ್ರಸಿದ್ಧ ಕವಿಗಳಾದ ಅಶೋಕ್ ವಾಜಪೇಯಿಯವರ ಮಾತುಕತೆ


ಅನು: *ಸಿ.ವಿ. ಶೇಷಾದ್ರಿ ಹೊಳವನಹಳ್ಳಿ*

ಚೆಸ್ಲಾವ್ ಮಿಲೋಷ್‌ರವರಿಗೆ ತಮ್ಮ ಮಾತೃಭಾಷೆಯೇ ಮಾತೃಭೂಮಿಯಂತೆ ಆಗಿದೆ. ಏಕೆಂದರೆ ಲಿಥುವೇನಿಯಾದಲ್ಲಿ ಹುಟ್ಟಿದ ಅವರಿಗೆ ತಮ್ಮ ಜೀವನದ ಬಹುಭಾಗವನ್ನು ಮೊದಲು ಫ್ರಾನ್ಸ್‌ನಲ್ಲಿ ನಂತರ ಅಮೆರಿಕದಲ್ಲಿ ಕಳೆಯಬೇಕಾಗಿ ಬಂತು. ಈಗವರಿಗೆ ೯೨ ವರ್ಷ. ಈಗವರು ಪೋಲೆಂಡಿನ ಸಾಂಸ್ಕೃತಿಕ ರಾಜಧಾನಿ ಕ್ರಾಕೋವ್‌ನಲ್ಲಿ ವಾಸಿಸುತ್ತಿದ್ದಾರೆ. ಸಾವಿರಾರು ಕವಿತೆಗಳನ್ನು ಅವರು ತಮ್ಮ ಮಾತೃಭಾಷೆ ಪೋಲಿಷ್‌ನಲ್ಲಿಯೇ ಬರೆದಿದ್ದಾರೆ.

ಮಾನವೀಯ ಯಾತನೆ ಹಾಗೂ ಮಹತ್ವದ ಇತಿಹಾಸದ ವಿಡಂಬನೆ, ಸ್ಮೃತಿ ಹಾಗೂ ವಿಸ್ಮೃತಿಗಳ ದ್ವಂದ್ವಗಳ ಈ ಹಿರಿಯ ಕವಿಯ ವಸ್ತುವಿನ ಹಾಸು ವಿಶಾಲ, ಜಟಿಲ ಹಾಗೂ ವಿಪುಲವಾಗಿದೆ. ೨೦ನೇ ಶತಮಾನದ ಉತ್ತರಾರ್ಧದಲ್ಲಿ ವಿಶ್ವಕವಿತೆಯ ನಭದಲ್ಲಿ ಅತ್ಯಂತ ಉಜ್ವಲವಾದ ಹಾಗೂ ಜ್ವಲಂತವೆಂದು ಕರೆಸಿಕೊಳ್ಳುವ ಮಿಲೋಷ್‌ರವರಿಗೆ ೧೯೮೦ರಲ್ಲಿ ನೊಬೆಲ್ ಪುರಸ್ಕಾರ ಸಿಕ್ಕಿದಾಗ ಅವರು ನಮ್ಮ ಕಾಲಕ್ಕೆ ಕವಿ ಸಾಕ್ಷಿಯಾಗಲು ಒತ್ತು ನೀಡಿದ್ದರು.

ನಾಝಿ ಹಾಗೂ ಸಾಮ್ಯವಾದಿ ನಿರಂಕುಶ ಪ್ರಭುತ್ವಗಳ ನಿಯಮಗಳಿಂದ ಪೆಟ್ಟುತಿಂದ ಹಾಗೂ ಘಾಸಿಗೊಂಡ ಮೀಲೋಷರು ಕವಿತೆಯನ್ನು ತಮ್ಮ ಪ್ರೀತಿಯ ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಳ್ಳುವುದನ್ನು ಎಂದೂ ಬಿಡಲಿಲ್ಲ. ಮತ್ತೊಂದು ಕಡೆ ಅವರು ಕಾವ್ಯದ ಮಹಿಮೆಯ ವ್ಯರ್ಥ ಮಂಡನೆಯನ್ನು ಕೂಡ ಮಾಡಲಿಲ್ಲ. ಇಲ್ಲಿ ಪ್ರಸಿದ್ಧ ಹಿಂದೀ ಕವಿಗಳಾದ ಅಶೋಕ್ ವಾಜಪೇಯಿ ಮೀಲೋಷ್‌ರನ್ನು ಮಾತಾಡಿಸಿದ್ದಾರೆ.

ಅಶೋಕ್ ವಾಜಪೇಯಿ : ಇವತ್ತು ಕವಿಗಳಲ್ಲೆಲ್ಲ ತುಂಬ ಹಿರಿಯರು ಎಂದು ನಾನು ತಮ್ಮನ್ನು ಭಾವಿಸಿದ್ದೇನೆ. ಇಪ್ಪತ್ತನೇ ಶತಮಾನದ ಕವಿತೆಯ ಯಾತ್ರೆಯ ಬಗ್ಗೆ ನಿಮ್ಮ ಸ್ವಂತ ಹಾಗೂ ಸಾಮಾನ್ಯವಾದ ಅಭಿಪ್ರಾಯವನ್ನು ಸಂಕ್ಷೇಪವಾಗಿ ಹೇಳುವಿರಾ...?



ಚೆಸ್ಲಾವ್ ಮೀಲೋಷ್ : ನಾವು ಅನೇಕ ಪ್ರಯೋಗಾತ್ಮಕ ಚಳುವಳಿಗಳನ್ನು ನೋಡಿದೆವು. ಉದಾ: ಅವಾನ್‌ಗಾರ್ಡ್ ಆಂದೋಲನ ಇತ್ಯಾದಿ. ಆದರೆ ಭವಿಷ್ಯದಲ್ಲಿ ಈ ಎಲ್ಲ ಕಿರುಚಾಟಗಳು, ಘೋಷಣೆಗಳು ಬದುಕಿರೋದಿಲ್ಲ. ಯಾರ ಕೊಡುಗೆ ಬಾಳಿಕೆ ಬರುವಂತಾಗಿರುತ್ತೋ ಆ ವ್ಯಕ್ತಿಗಳು ಮಾತ್ರ ಉಳಿಯುತ್ತಾರೆ.

- **ತಾವು ಯೋಚಿಸುವ ರೀತಿಯಲ್ಲಿ ಬದುಕಿ ಉಳಿದಿರುವ ಕೆಲವು ವ್ಯಕ್ತಿಗಳ ಹೆಸರು ಹೇಳುವಿರಾ?**

— ಇತ್ತೀಚೆಗಷ್ಟೇ ಕ್ರಾಕೂವ್‌ನ ಒಬ್ಬ ಪ್ರಕಾಶಕರು ಟಿ.ಎಸ್. ಎಲಿಯಟ್‌ನ ದೀರ್ಘ ಕವಿತೆ 'ದ ವೇಸ್ಟ್ ಲ್ಯಾಂಡ್' ಮತ್ತು ಡಬ್ಲ್ಯೂ. ಬಿ. ಯೇಟ್ಸ್‌ನ ಎರಡು ಕವಿತೆ 'ದ ಟವರ್' ಹಾಗೂ 'ಸೇಲಿಂಗ್ ಟೂ ಬೈಜಾಂಟಿಯಮ್' ಎಂದು ನಾನು ಮಾಡಿದ ಅನುವಾದಗಳನ್ನು ಹೊಸ ಸಂಗ್ರಹದಲ್ಲಿ ತಂದಿದ್ದಾರೆ. ಈ ಕವಿತೆಗಳನ್ನು ನಾನು ವಿಶ್ವ ಸಾಹಿತ್ಯದ ಸಂಪತ್ತಿನಲ್ಲಿ ಉಳಿಯುವಂತಹ ಕೊಡುಗೆಗಳು ಎಂದು ತಿಳಿಯುತ್ತೇನೆ

- **ಇತರೆ ಯೂರೋಪೀಯ ಭಾಷೆಗಳಲ್ಲಿ... ಉದಾ: ಪೋಲಿಶ್, ರಷ್ಯನ್ ಹಾಗೂ ಫ್ರೆಂಚ್‌ಗಳಲ್ಲಿ?**

— ಇರಲಿ, ಪೋಲೀಶ್‌ನ ಮಾತು ಬೇರೆ. ಬೇರೆ ಭಾಷೆಗಳಲ್ಲಿ ನನ್ನ ಪ್ರಕಾರ, ಫ್ರಾನ್ಸಿನಿಂದ ಬ್ಲೇಜ್ ಸೈಂಡ್ರಾರ್ ಹಾಗೂ ರಷ್ಯಾದಿಂದ ಆಸಿಫ್ ಮೈಂಡಲ್ ಸ್ಟಾಮ್‌ರನ್ನು ಆರಿಸುತ್ತೇನೆ.

- **ಇಪ್ಪತ್ತನೇ ಶತಮಾನದಂತಹ ಕ್ರೂರ ಶತಮಾನದಲ್ಲಿ ಕವಿತೆ ಹೇಗೆ ಉಳಿದಿರಬಹುದು?**

— ನನಗನ್ನಿಸುವುದೆಂದರೆ ಸಾವಿನ ವಿರುದ್ಧ ಸೆಣಸಲು ಬದುಕೆಂಬ ಕಟ್ಟಡಕ್ಕೆ ಪಾಯದ ರೀತಿಯಲ್ಲಿ ಕಾವ್ಯ ಇದೆ. ಕವಿತೆಯು ಸದಾ ಕಾಲಕ್ಕೂ ಬದುಕು ಮತ್ತು ಭರವಸೆಗಳ ಜೊತೆ ಸೇರಿಕೊಂಡಿದೆ

- **ಈ ಪರಿವರ್ತನೆಯಲ್ಲಿ ಕವಿತೆಯು ತನ್ನ ಮಾನವೀಯತೆಯ ಹಾಗೂ ಮಾನವೀಯ ಶ್ರೇಷ್ಠತೆಯ ತನ್ನ ಬೋಧನೆಯಿಂದ 'ಅನಶ್ವರತೆಯ ಸಂಕೇತಗಳನ್ನು' ಕಳೆದುಕೊಂಡಿದೆಯೆ?**

ಇಪ್ಪತ್ತನೇ ಶತಮಾನದಲ್ಲಿ ನಾವು ನಿರಾಶೆಯ ವಿರುದ್ಧ ಒಂದೇ ಸಮ ನಡೆದ ಯುದ್ಧವನ್ನು ನೋಡಿದ್ದೇವೆ. ಈ ಪರಿವರ್ತನೆಯಲ್ಲಿ ಕಾವ್ಯವು ಪ್ರಪಂಚದ ಸೌಂದರ್ಯದ ಕೆಲವು ತತ್ವಗಳನ್ನು ಕಳೆದುಕೊಂಡಿದೆ. ಕೆಲವು ಮೌಲ್ಯಗಳನ್ನು ಉಳಿಸುವುದಕ್ಕೋಸ್ಕರ ಪ್ರಪಂಚದ ಸೌಂದರ್ಯವನ್ನು ಹೆಚ್ಚಿಸುವಂತಹ ಕೆಲವು ತತ್ವಗಳಿಗೆ ಅದು ತಿಲಾಂಜಲಿ ನೀಡಬೇಕಾಗಿ ಬಂತು. ತಾವು ರೋಜೇವಿಚ್‌ರ ಅನುವಾದಗಳನ್ನು ಮಾಡಿರುವಂತಹವರು. ನಾನು ಏನನ್ನು ಹೇಳಲು ಪ್ರಯತ್ನ ಮಾಡುತ್ತಿರುವೆ ಎಂದು ತಮಗೂ ಗೊತ್ತಾಗಿರಬಹುದು.

- **ಕವಿತೆಗಳ ಮೂಲಕ ಕೇಡು ಮತ್ತು ಯಾತನೆ ಇವೆರಡರಿಂದಲೂ ಮುಕ್ತಿ ಪಡೆಯಲು ಬಯಸಿದ್ದೀರ ಎಂಬ ಮಾತನ್ನು ತಮ್ಮ ಬಗ್ಗೆ ಹೇಳಲಾಗಿದೆ.**

— ನನ್ನ ಕವಿತೆ ಹಾಗೂ ವಿಶ್ವ ದೃಷ್ಟಿಯ ಕೇಂದ್ರದಲ್ಲಿ ನನಗೆ ಯಾತನೆ (ನೋವು) ಇರುವುದು ಕಾಣಬರುತ್ತದೆ. ಆದರೆ ನಾನು ಕೇವಲ ಮಾನವೀಯ ಯಾತನೆ ಬಗ್ಗೆ ಮಾತ್ರ ಚಿಂತಿಸಲು ಇಚ್ಛಿಸುವುದಿಲ್ಲ, ನನ್ನೊಳಗೆ ಕೆಲವು ಪೂರ್ವ ತತ್ವಗಳು ಇವೆ ಎಂದು ನನಗನ್ನಿಸುತ್ತೆ. ನಾನು ಯಾತನೆಯನ್ನು ಎಲ್ಲ ಪ್ರಾಣಿಗಳೊಂದಿಗೆ ಜೋಡಿಸಲು ಬಯಸುತ್ತೇನೆ.

- **ಅನೇಕ ದಶಕಗಳಿಂದ ತಾವು ದೇಶದಿಂದ ಹೊರಗೆ ಇರುವಿರಿ...!**

— ಹೌದು... ನಾನು ನಲವತ್ತು ವರ್ಷ ಬರ್ಕಲ್‌ನಲ್ಲಿದ್ದೆ.

- **ಈ ಇಳಿವಯಸ್ಸಿನ ಸ್ಥಿತಿಯಲ್ಲಿ ಕೊನೆಯಲ್ಲಿ ತಮಗೆ ನಿರಂಕುಶ ಪ್ರಭುತ್ವ ಮತ್ತು ಉದಾರವಾದ ಲೋಕತಂತ್ರವನ್ನು ಅಲ್ಲದೆ ಸರ್ವಾಧಿಕಾರದ ಕೆಡಕು ಹಾಗೂ ಆಧ್ಯಾತ್ಮಿಕ ಖಾಲಿತನವನ್ನು ಒಂದು ಮುಖ್ಯವಾದ ಬಿಂದುವಿನಿಂದ ನೋಡುವ, ಹುಡುಕುವ ಹಾಗೂ ಪ್ರಶ್ನಿಸುವ ಅವಕಾಶ ಸಿಕ್ಕಿದೆಯೆ?**

— ಒಂದು ಕಾಲದಲ್ಲಿ ನಾನು ಪ್ಯಾರಿಸ್ ಹಾಗೂ ಫ್ರಾನ್ಸ್‌ನಲ್ಲಿದ್ದೆ. ನನ್ನ ಕವಿತೆಯನ್ನು ಪ್ರಕಟಿಸುವುದಕ್ಕೂ ಕೂಡ ಅಸಮರ್ಥನಾಗಿದ್ದೆ. ಆಗ ಬಲವಂತವಾಗಿ ನಾನು ಗದ್ಯದ ಕಡೆ ಹೊರಳಿದೆ. ಈ ವಿಷಯ ತಮಗೂ ಗೊತ್ತಿದೆ. ಆಗ ನಾನು ಸರ್ವಾಧಿಕಾರದ ವಿರುದ್ಧ ಒಂದು ಪುಸ್ತಕ ಬರೆದೆ— 'ದ ಕ್ಯಾಪ್ಟಿವ್ ಮೈಂಡ್' ಎಂದು. ನಿರಂಕುಶ ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ನಾನು ಏನನ್ನಾದರೂ ಹೇಳಬೇಕಿತ್ತು. ಆ ಪುಸ್ತಕ ನನ್ನ ಕೊಡುಗೆಯಾಗಿತ್ತು. ಯುದ್ಧದ ನಂತರ ನಾಝೀ ವಿರೋಧಿಯಾದ ಒಂದು ಸಂಕಲನವನ್ನೂ ಸಂಪಾದಿಸಿದೆ. ಅದೂ ಕೂಡ ಅದೇ ರೀತಿಯದ್ದೇ. ಇಪ್ಪತ್ತನೇ ಶತಮಾನದ ಕ್ರಾಂತಿಯಲ್ಲೂ ಕೂಡ ಭಾಗವಹಿಸಲು ಪ್ರಯತ್ನಿಸಿದ್ದೇನೆ. ಇದರ ಅರ್ಥ ಇದು ನನ್ನ ರಚನಾತ್ಮಕ ಕಾರ್ಯದ ಬಹಳ ಮುಖ್ಯವಾದ ಭಾಗ ಎಂದಲ್ಲ. ನನ್ನನ್ನು ಆವರಿಸಿಕೊಂಡಿದ್ದ ಘಟನೆಗಳಿಂದ ನಾನು ಉದಾಸೀನನಾಗಿರಲಿಲ್ಲ ಎಂದು ಆ ಪ್ರಯತ್ನ ಸಾಬೀತುಪಡಿಸುತ್ತದೆ.

✦ **ಯಾಕಂದ್ರೆ, ತಾವು ತಮ್ಮ ಭಾಷೆಯ ದೇಶದಿಂದ ದೂರವಾದ ದೇಶದಲ್ಲಿ ಇದ್ರಿ. ಈ ದೂರವು ಯಾವುದಾದರೂ ಸಮಸ್ಯೆಯನ್ನು ಹುಟ್ಟು ಹಾಕಿತೆ? ಅಥವಾ ವಸ್ತುವನ್ನು ಸ್ವಲ್ಪ ದೂರದಿಂದ ನೋಡುವಂತಹ ಒಂದು ರೀತಿಯ ಅನುಕೂಲತೆ ನೀಡಿತೆ?**

ತುಂಬಾ ಭಯಂಕರವಾದ ಸಮಸ್ಯೆಗಳು...! ಆದರೆ ವಿಚಿತ್ರ ಅಂದರೆ ಭಾಷೆಗೆ ಸಂಬಂಧಿಸಿದಂತೆ ನನಗಾವ ಸಮಸ್ಯೆಯೂ ಆಗಲಿಲ್ಲ. ನಾನು ನನ್ನ ಭಾಷೆಯಲ್ಲಿ ಪ್ರತಿಷ್ಠಿತ ಹಾಗೂ ಒಳ್ಳೆಯ ಸ್ಥಾನದಲ್ಲಿದ್ದೆ. ಆದ್ದರಿಂದ ನನಗಾಗ ಬೇರೆ ಯಾವ ಭಾಷೆಯಲ್ಲಿಯೂ ಬರೆಯುವ ಪ್ರಶ್ನೆ ಎದುರಾಗಲಿಲ್ಲ. ಆದಾಗ್ಯೂ ತಾಂತ್ರಿಕ ರೀತಿಯಲ್ಲಿ ನಾನು ಫ್ರೆಂಚ್ ಅಥವಾ ಇಂಗ್ಲಿಷಿನಲ್ಲಿ ಬರೆಯಬಹುದಿತ್ತು. ಆದರೆ ನಾನು ನನ್ನ ಭಾಷೆಯ ಜೊತೆಗೇ ಬಂದೆ.

✦ **ಮೌಲ್ಯಗಳ ಬಗ್ಗೆ ತುಂಬ ಅಸ್ಥಿರತೆ ಇರುವ ಇಂತಹ ಯುಗದಲ್ಲಿ ಮುಕ್ತವಾದ, ಪರಸ್ಪರ ಸಂಬಂಧವಿರುವಂತಹ ಹಾಗೂ ಮೌಲ್ಯಗಳಿಗೆ ಮಹತ್ವವಿರುವಂತಹ ಸ್ಥಾನವನ್ನು ಕವಿತೆ ಹೇಗೆ ಕಟ್ಟಿಕೊಡುತ್ತದೆ?**

ನೋಡಿ, ಎಲ್ಲ ಮೌಲ್ಯಗಳೂ ಅಸ್ಥಿರತೆಯಿಂದ ಕೂಡಿವೆ ಎಂದು ನಾನು ಒಪ್ಪುವುದಿಲ್ಲ. ಆಧುನಿಕತೆಯ ಬಗ್ಗೆ ನಾನು ಸಹಾನುಭೂತಿಯನ್ನೂ ಕೂಡ ಹೊಂದಿಲ್ಲ. ಮೌಲ್ಯಗಳ ಚಂಚಲತೆ, ಅಸ್ಥಿರತೆ ಇವೆಲ್ಲ ನನ್ನ ಪ್ರಕಾರ ಇಂದು ಸವೆದುಹೋದ ನಾಣ್ಣುಡಿಗಳು. ಇದರ ಬಗ್ಗೆ ನಾನು ಎಚ್ಚರವಾಗಿರಲು ಬಯಸುತ್ತೇನೆ.

✦ **ಅಮಾನವೀಯ ವಿಚಾರಧಾರೆಯಿಂದ ಓದುಗರಿಗೆ ಭರವಸೆ ನೀಡುವಂತಹ ದುರಾಸೆಯನ್ನು ತಮ್ಮ ಪ್ರತಿಭೆಯು ಎಂದಾದರೂ ಹೊಂದಿತ್ತೆ?**

ಹೌದು. ಕವಿಗಳಿಗೆ ಈ ರೀತಿಯ ದುರಾಸೆ ಇರುತ್ತೆ. ಸಾಮಾನ್ಯವಾಗಿ ಈ ದುರಾಸೆಯು ಆಸೆಬುರುಕುತನದ ರೂಪವನ್ನು ಕೂಡ ಧರಿಸುತ್ತದೆ. ನನ್ನ ಬಗ್ಗೆ ಜನ ಏನೆಂದು ಭಾವಿಸುತ್ತಾರೋ ಎಂಬ ಯುವ ಕವಿಯು ಸಂವೇದನಶೀಲನಾಗುತ್ತಾನೆ. ಸ್ವತಃ ನನಗಿದರ ಅನುಭವ ಇದೆ. ನಾನು ಯುವಕನಾಗಿದ್ದಾಗ ಕೆಲವು ಕ್ರಾಂತಿಕಾರಿ ಕವಿತೆಗಳನ್ನು ಬರೆದೆ. ಅವುಗಳ ರಚನೆಯೂ ಸಹ ಸುಲಭವಾಗಿತ್ತು. ಅವುಗಳ ಬಗ್ಗೆ ಪ್ರಶಂಸೆಯೂ ಬಂತು. ಗೌರವಕ್ಕೋಸ್ಕರ ಅವುಗಳ ವಸ್ತುಗಳನ್ನು ಆಯ್ದುಕೊಂಡಿದ್ದೆ. ನಂತರ ನನಗೆ ಅರಿವಾಯಿತು, ನಾಚಿಕೆ ಬಂತು. ಆಮೇಲೆ ನಾನು ಯಾವತ್ತೂ ಆ ರೀತಿಯ ಆಸೆಗೆ ಬಲಿಯಾಗಲಿಲ್ಲ.

- **ವೈಚಾರಿಕತೆಯ ನೋಟದಿಂದ ನೋಡಿದಾಗ ತಾವು ಹೆಗೆಲ್‌ವಾದ ಹಾಗೂ ಮಾರ್ಕ್ಸ್‌ವಾದಗಳ ಜೊತೆಗೆ ಸೆಣಸಿದ್ದೀರಿ ಎಂದು ಅರಿವಾಗುತ್ತೆ. ತಮ್ಮ ಲೇಖನಗಳು ಹೆಗೆಲ್ ಹಾಗೂ ಮಾರ್ಕ್ಸ್ ಇವರಿಬ್ಬರೊಡನೆ ಚರ್ಚೆಯಂತೆ ಇವೆ ಎಂದು ಕೂಡ ಹೇಳಲಾಗುತ್ತದೆ. ಇದಕ್ಕೆ ತಮ್ಮ ಸಹಮತವಿದೆಯೆ? ಸ್ಪಷ್ಟಪಡಿಸುವಿರ...?**

ನಾನು ವಾಮಪಂಥೀಯ ವಿಚಾರಗಳಿಂದ ವಿಕ್ಷುಬ್ಧಗೊಂಡೆ. ದಕ್ಷಿಣದ ವಿಚಾರಧಾರೆಯಿಂದಲ್ಲ. ಕೆಲವು ವೇಳೆ ನನಗೆ ಮಾರ್ಕ್ಸ್‌ಗಿಂತ ಹೆಚ್ಚಾಗಿ ಹೆಗೆಲ್ ಆಕರ್ಷಿತರಾದರು. ಮತ್ತೆ ಕೆಲವು ವೇಳೆ ವಿಕ್ಷುಬ್ಧಗೊಳಿಸಿದರು. ಒಮ್ಮೆಯಂತೂ ಹೆಗೆಲ್‌ನ ವಿಚಾರಗಳು ನನ್ನನ್ನು ತೀವ್ರವಾಗಿ ಸೆಳದವು. ಎಲ್ಲಿಯವರೆಗೆ ಅಂದರೆ ನಾನು ನನ್ನ ಬಾಲ್ಯದ ಬಗ್ಗೆ ಕಾದಂಬರಿ ಬರೆಯುವವರೆಗೆ. ಇದರಲ್ಲಿ ವಿಚಾರಧಾರೆಯೊಡನೆ ಯಾವುದೇ ಸಂಬಂಧವಿಲ್ಲ.

- **ಭೂಮಿಯ ಪ್ರಾಕೃತಿಕ ಆಶ್ಚರ್ಯಗಳ ಸಾಕ್ಷಿ ಹಾಗೂ ಇಪ್ಪತ್ತನೇ ಶತಮಾನದ ಇತಿಹಾಸದ ರಾಕ್ಷಸೀ ಕೃತ್ಯಗಳಿಗೆ ಸಾಕ್ಷಿ ಎಂದು ಕರೆಸಿಕೊಂಡಿರುವ ತಮ್ಮ ಕವಿತೆ ಆಳವಾದ ಹಾಗೂ ವಿಚಲಿತಗೊಳಿಸುವಂತಹ ಅರ್ಥದಲ್ಲಿ ಅವುಗಳ ಭಾಗ ಹಾಗೂ ಪಾಲುದಾರ ಕೂಡ ಆಗಿದೆಯೆ?**

ಇಲ್ಲಿ ನಾನೇ ನಿಮಗೆ ಹೇಳಬೇಕಾಗಿದೆ. ತೀರ ಬೇರೆಯಾದ ಹಿಂದೂ ಪರಂಪರೆಯಿಂದ ಬಂದ ಕವಿ ನೀವು. ಆ ಪರಂಪರೆಯು ರಾಕ್ಷಸೀ ಕೃತ್ಯಗಳನ್ನು ಬಹುಶಃ ಬೇರೆ ರೀತಿಯೇ ನೋಡುತ್ತದೆ. ಸಾವಿರಾರು ವರ್ಷಗಳಿಂದ ಈ ಪ್ರಕೃತಿ ರಾಕ್ಷಸೀ ಶಕ್ತಿಗಳ ಬೇಟೆಗೆ ಈಡಾಗುತ್ತಾ ಬಂದಿರುವುದು ತಮಗೂ ಗೊತ್ತು. ನಮ್ಮ ಶತಶತಮಾನಗಳ ರಾಕ್ಷಸೀ ವಿದ್ಯೆ ಹಾಗೂ ಈಚಿನ ಸಾವಿರ ವರ್ಷಗಳಿಂದ ನಡೆದುಬರುತ್ತಿರುವ ರಾಕ್ಷಸೀ ವಿದ್ಯೆ ಇವುಗಳ ನಡುವೆ ಹೆಚ್ಚಿನ ಅಂತರವೇನೂ ಇಲ್ಲ.

- **ತಮ್ಮಲ್ಲಿ ಭಾರತವು ವಿಶೇಷವಾದ ಅರ್ಥವನ್ನು ಪಡೆದೆಯೆ? 'ರಾಜಾರಾವ್‌ರನ್ನು ಕುರಿತು' ಎಂಬ ಹೆಸರಿನ ತಮ್ಮ ಪದ್ಯದಲ್ಲಿ ಅತ್ಯಂತ ಮಾರ್ಮಿಕವಾಗಿ ತಾವು ತಮ್ಮ ಅಂತರವನ್ನು ವ್ಯಕ್ತಪಡಿಸಿದ್ದೀರ. ಹೆಚ್ಚಾಗಿ ಬೌದ್ಧರ ಬಗ್ಗೆ ತಮ್ಮ ಕವಿತೆಗಳಲ್ಲಿ ಕೆಲವು ಬಿಂಬಗಳು ಇವೆ. ಭಾರತದ ಸಂಬಂಧದ ಬಗ್ಗೆ ಏನು ಹೇಳಲು ಬಯಸುವಿರಿ?**

ಇದರ ಬಗ್ಗೆ ಹೇಳಬೇಕೆಂದರೆ ಕಬೀರರ ಕೆಲವು ದೋಹೆಗಳನ್ನು ನಾನು ಅನುವಾದ ಮಾಡಿದ್ದೇನೆ. ಇದೊಳ್ಳೆ ವಿಚಿತ್ರವಾಗಿದೆ. ಇಂಗ್ಲಿಷಿನ ಅನುವಾದಗಳಲ್ಲಿ ನನಗೆ ಕಬೀರರ ಕೆಲವು ರಚನೆಗಳು ಸಿಕ್ಕವು. ನಂತರ ನಾನು ರವೀಂದ್ರನಾಥ ಠಾಗೋರರು ಮಾಡಿರುವ ಕಬೀರರ ಅನುವಾದಗಳನ್ನು ನೋಡಿದೆ. ಬೇರೆಯ ಪ್ರಾಮಾಣಿಕ ಇಂಗ್ಲಿಷ್ ಅನುವಾದಗಳನ್ನು ನೋಡಿದರೆ ರವೀಂದ್ರರ ಇಂಗ್ಲಿಷು ಕೆಟ್ಟದಾಗಿ ಕಾಣುತ್ತೆ. ನಾನು ಇಂಗ್ಲಿಷಿನಿಂದ ಕಬೀರರನ್ನು ಅನುವಾದಿಸುವಾಗ ರವೀಂದ್ರರ ಅನುವಾದಗಳಿಂದ ಕೂಡ ಸಹಾಯ ಪಡೆದಿರುವೆ. ಅಂದಾಜಿನಿಂದ ನಾನು ಪೋಲೀಶ್‌ನಲ್ಲಿ ಅನುವಾದ ಮಾಡಿದೆ. ಏಕೆಂದರೆ ಇಂಗ್ಲಿಷ್ ಮೂಲಕ ಮಾಡುತ್ತಿದ್ದೇನಲ್ಲ...!

ಆದರೆ ಕಬೀರರು ಮಾತ್ರ ಒಂದು ವಿಶಿಷ್ಟವಾದ ಪರಂಪರೆಯ ಕವಿಗಳು. ತುಂಬ ವಿಶಿಷ್ಟ ಪರಂಪರೆ ಅದು. ಅವರನ್ನು ಪ್ರತಿನಿಧಿ ಎಂದು ಹೇಳಲಾಗುವುದಿಲ್ಲ. ಕಬೀರರ ಭಾರತದ ಜೊತೆ ನನ್ನ ಸಂಬಂಧವಿದೆ. ಇದನ್ನು ಬಿಟ್ಟರೆ ಭಾರತ ನನಗೆ ಎಲ್ಲ ಪ್ರಾಣಿ, ವಸ್ತುಗಳ ನೋವಿನಲ್ಲಿ ಏಕತೆಯನ್ನು ಕಾಣುವ ಪರಂಪರೆಗಳಾದ ಹಿಂದೂ ಹಾಗೂ ಬೌದ್ಧರ ನಾಡಾಗಿ ಕಾಣುತ್ತದೆ. ಹೀಗಿದೆ ನೋಡಿ ನನ್ನ ಹಾಗೂ ಭಾರತದ ಸಂಬಂಧ. ಈ ನೆಂಟಸ್ತಿಕೆ ನನ್ನ ಜೀವನ ಪರ್ಯಂತ

ಇರುತ್ತಾ ಬಂದಿದೆ. ಇದು ಕೇವಲ ಮೇಲ್ಮೈ ಸಂಬಂಧವಲ್ಲ... ಬಹಳ ಆಳವಾದ, ಗಾಢವಾದ ಸಂಬಂಧವಾಗಿದೆ.

✦ **''ನನ್ನ ಕವಿತೆ ಒಂದು ಆಳವಾದ ಸ್ತರದಲ್ಲಿ ತುಂಬಾ ತಿಳುವಳಿಕೆಯ ಹಾಗೂ ಅಂಕೆಗೆ ಒಳಪಟ್ಟದ್ದಾಗಿದೆ ಮತ್ತು ಒಂದು ಕತ್ತಲಯುಗದಲ್ಲಿ ಶಾಂತಿ, ನ್ಯಾಯದಿಂದ ಕೂಡಿರುವ ರಾಜ್ಯ ಆಕಾಂಕ್ಷೆಯನ್ನೂ ವ್ಯಕ್ತಪಡಿಸುತ್ತದೆ'' ಎಂದು ತಮ್ಮ ನೊಬೆಲ್ ವ್ಯಾಖ್ಯಾನದಲ್ಲಿ ತಾವು ಅಭಿಪ್ರಾಯ ಪಟ್ಟದ್ದೀರಿ. ಇಪ್ಪತ್ತು ವರ್ಷಗಳ ನಂತರ ಈ ಆಕಾಂಕ್ಷೆಯು ಹಾಗೆಯೇ ಅತೃಪ್ತ ವಾಗಿದೆಯೆ? ಅಥವಾ ತಾವು ಕವಿತೆಗಳ ಮೂಲಕ ಅದನ್ನು ಪೂರ್ತಿ ಮಾಡಲಾಗಿಲ್ಲವೇ?**

ನಾನು ಎರಡು ನಿರಂಕುಶ ಪ್ರಭುತ್ವಗಳಲ್ಲಿ ಇದ್ದೆ ಎಂದು ತಮಗೆ ಗೊತ್ತಿದೆ. ಆರು ವರ್ಷದವನಾಗಿದ್ದಾಗಲೇ ನಾನು ರಷ್ಯಾದ ಕ್ರಾಂತಿಯನ್ನು ನೋಡಿದ್ದೆ. ನಾನು ವಯಸ್ಕನಾದಾಗ ಅಂದರೆ, ೧೯೩೩ರಲ್ಲಿ ನಾಜೀ ವ್ಯವಸ್ಥೆಯ ಆರಂಭವನ್ನು ನೋಡಿದ್ದೆ. ಈ ಎರಡೂ ವ್ಯವಸ್ಥೆಗಳ ಸರ್ವನಾಶದ ಸಾಕ್ಷಿ ನಾನು. ನಾನು ಆಶಾವಾದಿಯಾಗಲು ಇವೇ ಬೇಕಾದಷ್ಟಾಯಿತು.

✦ **ಕವಿತೆಯು ಆನಂದ ಹಾಗೂ ಶಿಕ್ಷಣ ಎರಡನ್ನೂ ಕೊಡುತ್ತದೆ ಎಂಬ ಪ್ರಾಚೀನ ಅಪೇಕ್ಷೆ ಯಂತೆ ತಮ್ಮ ಕವಿತೆ ಅನುವಾದದಲ್ಲೂ ಕೂಡ ಆನಂದ ಹಾಗೂ ಶಿಕ್ಷಣ ಎರಡನ್ನೂ ಕೊಡುತ್ತದೆ ಎಂದು 'ಸೀಮಸ್ ಹೋನೀ' ಹೇಳಿದ್ದಾರೆ. ಹೀಗೆ ಆನಂದ ಹಾಗೂ ಶಿಕ್ಷಣ ಎರಡನ್ನೂ ನೀಡುವಲ್ಲಿ ನನ್ನ ಕವಿತೆ ಸಫಲವಾಗಬೇಕು ಎಂದು ತಾವು ಸದಾಕಾಲ ಎಚ್ಚರವಿದ್ದಿರೋ...? ಅಥವಾ ಹಾಗಂತ ತೀರ್ಮಾನ ಮಾಡಿದ್ದೀರೋ...?**

ಸೀಮಸ್ ಹೋನಿಯವರು ನನ್ನ ಒಳ್ಳೆಯ ಮಿತ್ರರು. ಅವರಿಗೆ ಬೇಕಾದುದು ಕವಿತೆಯಲ್ಲಿ ಸಿಕ್ಕಿದೆ. ಉತ್ತರ ಆಯಿರ್‌ಲೆಂಡಿನಲ್ಲಿ ಅವರು ಯುದ್ಧದ ಸಮಸ್ಯೆ ವಿರುದ್ಧ ಸೆಣಸುತ್ತಿದ್ದಾರೆ. ನನ್ನ ಕವಿತೆಯಲ್ಲಿ, ಅಷ್ಟೇಕೆ ಇಡೀ ಪೋಲೀಶ್ ಕವಿತೆಯಲ್ಲಿ ಆ ದುರಂತಮಯ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ. ಆಯರಿಶ್ ಸಮಸ್ಯೆಗಳನ್ನು ಎದುರಿಸುವಂತಹ ಸಹಾಯವನ್ನು ಅವರು ನಮ್ಮ ಕವಿತೆಗಳಿಂದ ಪಡೆದಿರಬಹುದು. ನೈತಿಕ ಶಿಕ್ಷಣವನ್ನು ಕೊಡಲು ಬಯಸುತ್ತೇನೆ ಅಂತ ಅಲ್ಲ, ಬಹುಶಃ ಇದೊಂದು ರೀತಿಯ ಶ್ರೇಣೀಕರಣದ ಫಲವಿರಬಹುದು. ಈ ಪ್ರಶ್ನೆ ಹಾಗೂ ಉತ್ತರಗಳ ಶ್ರೇಣೀಕರಣವು ನಮ್ಮ ಐತಿಹಾಸಿಕ ಅನುಭವವನ್ನು ಉತ್ತೇಜನಗೊಳಿಸುತ್ತದೆ.

✦ **ಮಾನವೀಯ ಶ್ರೇಷ್ಠತೆ ಹಾಗೂ ಶ್ರೇಷ್ಠ ಜೀವನಕ್ಕೆ ಸಾಂಸ್ಕೃತಿಕ ಸ್ಮೃತಿ ತುಂಬ ಅವಶ್ಯಕ ಎಂಬ ತಾತ್ಪರ್ಯವು ತಮ್ಮ ಕೃತಿಗಳಲ್ಲಿದೆ ಎಂದು ಸೀಮಸ್ ಹೋನೀಯವರು ಹೇಳಿದ್ದಾರೆ. ತಮಗಿದು ಒಪ್ಪಿಗೆಯೆ?**

ತುಂಬಾ ವಿಶಾಲವಾಗಿ ನಾನಿದನ್ನು ಅನುಭವಿಸುತ್ತೇನೆ. ಹಲವು ವರ್ಷಗಳ ಕಾಲ ನಾನು ದೇಶ ತೊರೆದಿದ್ದೆ. ವಿಶಿಷ್ಟವಾದ ಪರಂಪರೆಯಲ್ಲಿ ನನ್ನ ಬೇರುಗಳಿರುವುದು ನನಗರಿವಾಗಿತ್ತು. ನನ್ನ ಶಕ್ತಿ ಲುಥುಆನಿಯಾ ಎಂಬ ಸಣ್ಣ ಜಿಲ್ಲೆಯಿಂದ ಬರುತ್ತದೆ ಎಂದು ಅನ್ನಿಸುತ್ತಿತ್ತು. ನನ್ನ ಪೂರ್ವಜರು, ಅವರ ಸಮಾಧಿಗಳು, ಅವರ ಪರಂಪರೆ ಇವತ್ತಿಗೂ ನನಗೆ ಸತ್ಯವಾಗಿ ಗೋಚರಿಸುತ್ತಿವೆ. ನಿಜವಾಗಿಯೂ ಪರಂಪರೆಗೆ ಬದ್ಧವಾಗಿರುವುದು ಎಂದರೆ ಇದು...! ಇದೊಂದು ಸಣ್ಣ ಜಿಲ್ಲೆಯ ಪರಂಪರೆ. ಈ ಪರಂಪರೆಯೇ ನನ್ನನ್ನು ಆವರಿಸಿ ನನ್ನಲ್ಲಿ ನನ್ನತನವನ್ನು ಉಳಿಸಿರುವುದು. ಆ ಫ್ಯಾಶನ್ನು ಹಾಗೂ ಆ... ವಿಚಾರಧಾರೆಗಳಿಗೆ ನನ್ನನ್ನು ಶರಣಾಗಲು ಬಿಡದೆ ತಡೆದಿರುವುದು.


ಕುವೆಂಪು ವಿಚಾರ ಸಾಹಿತ್ಯ ನೆಲೆ; ಬೆಲೆ

ಜಿ.ಬಿ. ಹರೀಶ

ಕುವೆಂಪು (೧೯೦೪ರ ಡಿಸೆಂಬರ್ ೨೯ ರಿಂದ ೧೯೯೪ರ ನವೆಂಬರ್ ೧೦) ಅವರು ಕನ್ನಡದ ನವೋದಯದಲ್ಲಿ ಜನಿಸಿ, ಆ ಸಾಹಿತ್ಯ ಪಂಥಕ್ಕೆ ನೀರೆರೆದವರು. ನಂತರ ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಪಂಥಗಳ ಏಳು-ಬೀಳುಗಳನ್ನು ಕಾಣುತ್ತಲೇ ಬಾಳಿ, ಬದುಕಿದವರು. ಅವರ ಕೃತಿಪ್ರಪಂಚ ತುಂಬಾ ದೊಡ್ಡದು. ಒಟ್ಟು ೮೩ ಗ್ರಂಥ/ಕೃತಿ/ಕಿರುಹೊತ್ತಿಗೆ ಕುವೆಂಪು ರಚಿಸಿದ್ದಾರೆ.

ಇದರಲ್ಲಿ 'ಅಗ್ನಿಹಂಸ'ದಿಂದ 'ಹೊನ್ನ ಹೊತ್ತಾರೆ'ಯ ವರೆಗೆ ೩೧ ಕವನ ಸಂಕಲನಗಳು; 'ಕಾನೀನ'ದಿಂದ 'ಶ್ಮಶಾನ ಕುರುಕ್ಷೇತ್ರ'ದವರೆಗೆ ೧೨ ನಾಟಕಗಳು; 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಸೇರಿದಂತೆ ಒಟ್ಟು ೫ ಕಥೆ, ಕಾದಂಬರಿ, ಮಲೆನಾಡ ಚಿತ್ರಗಳು; 'ನನ್ನ ಗೋಪಾಲ'ದಿಂದ 'ಮೋಡಣ್ಣನ ತಮ್ಮ'ದವರೆಗೆ ೭ ಶಿಶು ಸಾಹಿತ್ಯ ಕೃತಿಗಳು; ಕುವೆಂಪು ಅವರನ್ನು ಕವಿ, ಕಾದಂಬರಿಕಾರ, ನಾಟಕಕಾರ ಎಂದೇ ಕನ್ನಡ ವಿಮರ್ಶೆ ಗುರುತಿಸುತ್ತ ಬಂದಿದೆ. ಆದರೆ ಅವರು ಒಟ್ಟು ಬರೆದಿರುವ ೧೯ ಕೃತಿಗಳು ವಿಮರ್ಶೆ, ಪ್ರಬಂಧ, ಭಾಷಣ, ಇತ್ಯಾದಿ ಎಂಬ ಪ್ರಭೇದಕ್ಕೆ ಸೇರಿಬಿಟ್ಟಿವೆ. ಇದರೊಂದಿಗೆ 'ಗುರುವಿನೊಡನೆ ದೇವರಡಿಗೆ', 'ಜನಪ್ರಿಯ ವಾಲ್ಮೀಕಿ ರಾಮಾಯಣ', 'ವೇದಾಂತ', 'ಶ್ರೀರಾಮಕೃಷ್ಣ ಪರಮಹಂಸ', 'ಸ್ವಾಮಿ ವಿವೇಕಾನಂದ' ಎಂಬ ಐದು ಕೃತಿಗಳೂ ಸೇರಿವೆ. ಒಟ್ಟಿನಲ್ಲಿ ಕುವೆಂಪು ಬರೆದಿರುವ ಕೃತಿಗಳು ೭೯. ಇದರಲ್ಲಿ ೧೯ ಕೃತಿಗಳು ಸಮಾಜ – ವರ್ಣ + ಜಾತಿ ವ್ಯವಸ್ಥೆಯ ಕ್ರೂರತನ, ನಾಡಿನ ಶಿಕ್ಷಣ ಚಿಂತನೆ, ಹೊಸ ರೀತಿಯ ವೈಚಾರಿಕ ವಿವಾಹದ ಸೂತ್ರಗಳಲ್ಲದೆ ಕೃತಿ ವಿಮರ್ಶೆ, ಕಾವ್ಯ ಮೀಮಾಂಸೆ, ಕಾವ್ಯಸ್ವರೂಪದ ಚರ್ಚೆಗಳನ್ನೂ ಒಳಗೊಂಡಿವೆ.

'ಮಲೆನಾಡಿನ ಚಿತ್ರಗಳು' ಮುಂತಾದ ಚಿತ್ರವತ್ತಾದ ಪ್ರಬಂಧಗಳಲ್ಲಿ ಮಲೆನಾಡಿನ ನವುರಾದ ಜೀವನ ಚಿತ್ರಣವಿದ್ದರೆ, ಈ ೧೯ ಕೃತಿಗಳಲ್ಲಿ ಕುವೆಂಪು ಅವರು ಕಂಡುಂಡ ಇಪ್ಪತ್ತನೆಯ ಶತಮಾನದ ಕನ್ನಡದ ಮಣ್ಣಿನಲ್ಲಿ ನಡೆದ ಸಾಂಸ್ಕೃತಿಕ ಪಲ್ಲಟಗಳ ಚೆದುರಿದ ಚಿತ್ರವಿದೆ. ಇದೇ ಕುವೆಂಪು ಅವರ ಮುಖ್ಯ ವಿಚಾರ ಸಾಹಿತ್ಯ ಪ್ರಪಂಚದ ಎಳೆಗಳು.



ಆರ್.ಎಸ್. ನಾಯ್ಡು ಅವರ ಕೃತಿ

ಕುವೆಂಪು ಅವರ ಚರ್ಚಿತ ವಿಚಾರ ಸಾಹಿತ್ಯ

ಚರ್ಚಿತ ಹಾಗೂ ಈಗ ಚರ್ಚೆಗೆ ತೆಗೆದುಕೊಳ್ಳುತ್ತಿರುವ ಕುವೆಂಪು ವಿಚಾರ ಸಾಹಿತ್ಯದ ವಿಮರ್ಶಾತ್ಮಕ ಅಧ್ಯಯನಕ್ಕೂ ಮುನ್ನ ಕುವೆಂಪು ಅವರನ್ನು ಮತ್ತು ಆ ಕಾಲದ ಇನ್ನಿತರ ಸಾಹಿತಿಗಳನ್ನು ಪ್ರಭಾವಿಸಿದ ವಿವಿಧ ಐಡಿಯಾಲಜಿಗಳ ಸ್ಥೂಲ ವಿಶ್ಲೇಷಣೆ ಮಾಡುವುದು ಒಳ್ಳೆಯದು.

ಕುವೆಂಪು, ಬೇಂದ್ರೆ, ದೇವುಡು, ಕಾರಂತ, ಶ್ರೀರಂಗ, ಮಾಸ್ತಿ ಇವರೆಲ್ಲರೂ ಮೇಲ್ನೋಟಕ್ಕೆ ಒಂದೇ ಅಖಂಡ ಸಂಸ್ಕೃತಿಯಿಂದ ಚಿಮ್ಮಿ ಬಂದವರು ಎನಿಸಬಹುದು. ಆದರೆ ಭಾಷೆ, ಪರಿಸರ, ನಂಬಿದ/ಪ್ರಭಾವಿತರಾದ ಸಿದ್ಧಾಂತಗಳ ಆಧಾರಗಳನ್ನು ನೋಡಿದರೆ ಇಲ್ಲೆಲ್ಲ ಅನೇಕ ಸೂಕ್ಷ್ಮ-ಪ್ರಮುಖ ವ್ಯತ್ಯಾಸಗಳಿರುವುದು ತೋರುತ್ತದೆ.

ಬೇಂದ್ರೆಯವರ ಮನೆಮಾತು ಮರಾಠಿ. ಇವರ ವಂಶಸ್ಥರು ವೈದಿಕ ವೃತ್ತಿ ಅನುಸರಿಸಿದವರು. 'ಬ್ರಾಹ್ಮಣ' ಎಂಬ ಪದಕ್ಕಿರುವ ವಿವಿಧ ಅರ್ಥವಲಯಗಳ ಸಮೀಪಕ್ಕೆ ಬೇಂದ್ರೆ ಪರಿಸರವನ್ನು ಅಳವಡಿಸಲು ಬರುತ್ತದೆ. ಬಡತನದ ಅನುಭವ, ದೈವದ ಕೃಪೆಯ ಅನುಭವದ ನಡುವೆ ಬೇಂದ್ರೆ ಬದುಕಿನ ಬಂಡಿ ಸಾಗಿ ಬಂದಿದೆ. ಗೀತೆ, ಉಪನಿಷತ್ತುಗಳೊಂದಿಗೆ ಆ ಕಾಲದಲ್ಲಿ ಹೆಚ್ಚು ಹೆಚ್ಚು ವೇದ ಸಾಹಿತ್ಯದ ಸಂಪರ್ಕಕ್ಕೆ ಬಂದ ಬೇಂದ್ರೆಯವರ ವೈಚಾರಿಕ, ಪ್ರಜ್ಞಾಪಾತಳಿ ವೇದಮಾರ್ಗದಲ್ಲೇ ಸಾಗುತ್ತದೆ. ಇದೇ ಪರಿಸರದಲ್ಲಿ ಬಂದರೂ ಭಿನ್ನ ವೈಚಾರಿಕ ಪಾತಳಿ ತುಳಿದ ಶಂ.ಬಾ. ಜೋಶಿಯವರ ಪ್ರಜ್ಞೆ ಹಿಂದೂ ಧರ್ಮವನ್ನು 'ಪ್ರವಾಹಪತಿತರ ಕರ್ಮ, ಹಿಂದೂ ಎಂಬ ಧರ್ಮ' ಎಂದು ವಿವರಿಸುತ್ತದೆ. ಈ ಅರ್ಥದಲ್ಲಿ ಬೇಂದ್ರೆ ಮತ್ತು ಶಂ.ಬಾ. ನಡುವಿನ ವಿಚಾರವಂತಿಕೆಯ ಜಗಳಕ್ಕೆ ಒಂದು ಹೊಳಪಿದೆ. ದೇವುಡು ಅವರ ಮನೆಮಾತು ತೆಲುಗು. ಆಸ್ಥಾನ ವಿದ್ವಾಂಸರ ಗೌರವವಿದ್ದೂ ಬಡತನದ ನಡುವೆ ಬಾಳಿದ ದೇವುಡು ಅವರು ವೇದ, ಪುರಾಣ ಸಾಹಿತ್ಯದ ನಡುವೆಯೇ ಇವರು ನಹುಷ, ವಿಶ್ವಾಮಿತ್ರ, ಯಾಜ್ಞವಲ್ಕ್ಯರಲ್ಲಿರುವ ಮಹಾಮಾನವತೆಯ, ಮನುಷ್ಯನ ಘನತೆಯ ಮಟ್ಟದ ರುಚಿ ಅನುಭವಿಸಿದವರು. ಸಾಮಾಜಿಕ ಕಾಳಜಿ, ಶಿಕ್ಷಣದ ಸುಧಾರಣೆ ಇವರ ಆಸಕ್ತಿ ಕ್ಷೇತ್ರ.

ಮಾಸ್ತಿ ಕಾರಂತ, ಶ್ರೀರಂಗರು – ಬೇಂದ್ರೆ, ಶಂ.ಬಾ., ದೇವುಡು ಅವರಿಗಿಂತ ಸಾಕಷ್ಟು ಭಿನ್ನ ಪ್ರಜ್ಞಾಸ್ತರದವರು. ಮಾಸ್ತಿಯವರಲ್ಲಿ ಪ್ರಾಚೀನ ಸಂಸ್ಕೃತಿಯ ಸತ್ವ ಹೀರಬೇಕೆಂಬ ಕಳಕಳಿಯಿದೆ. ಜೊತೆಗೆ ಪಾಶ್ಚಾತ್ಯ ದೇಶದ ಸಾಧುಗಳು (ಉದಾ: ಹಳೆ ಬೈಬಲ್ಲಿನ ಡೇವಿಡ ಮಹಾರಾಜನ ಸಂಕೀರ್ತನೆಗಳು), ಅಲ್ಲಿನ ತತ್ವಜ್ಞಾನಿಗಳು (ಉದಾ: ಅರಿಲಿಯಸ್, ಆಗಸ್ಟಿನ್), ಕವಿಗಳು ಕಂಡ ಕಾವ್ಯಚಿಂತನೆ (ಉದಾ: ಹಾಫಿಸ್ ಕವಿ ವಿಚಾರ, ಗಯಟೆ ಕವಿಯ ಕಾವ್ಯ ಮೀಮಾಂಸೆ) ಇವುಗಳ ಅನುಸಂಧಾನ ಕನ್ನಡಕ್ಕೆ ಬೇಕೆಂಬ ನಮ್ರ ತಿಳುವಳಿಕೆಯೂ ಇದೆ. ಇಷ್ಟಾಗಿ ಮಾಸ್ತಿ ಕೂಡ ಭಾರತೀಯ ಸಮಾಜದ ಕಂದಾಚಾರ, ವರ್ಣವ್ಯವಸ್ಥೆ ಇವುಗಳ ಕಡುವಿರೋಧಿ ಆಗಿರಲಿಲ್ಲ ಎಂಬುದು ಕುತೂಹಲಕಾರಿ. ಆದರೆ ಅವರ ಬಹುಪಾಲು ಸಾಮಾಜಿಕ ನಡವಳಿಕೆ ತೀರಾ ಮುಕ್ತವೂ, ನಿರ್ಮಲವೂ ಆಗಿತ್ತೆಂಬುದರಲ್ಲಿ ಸಂಶಯವಿಲ್ಲ.

ಶಿವರಾಮಕಾರಂತರು ಅನೇಕ ವಿಚಾರಗಳಲ್ಲಿ ನಾಸ್ತಿಕ ಎಂಬ ಯೂರೋಪ್ ಪ್ರಣೀತ ಚಿಂತನೆಯ ಮಂಡಲದಲ್ಲಿ ಸ್ಥಾಪಿತರಾಗುತ್ತಾರಾದರೂ, ಭಾರತದ ಸಾಮಾನ್ಯ ವ್ಯಕ್ತಿಗಳ

ಜೀವನದ ಶ್ರದ್ಧೆ ಕರ್ಮ, ಪುನರ್ಜನ್ಮ ಇತ್ಯಾದಿ ಅಂಶಗಳಿಗೆ ಅವರ ಕಾದಂಬರಿ ಸಾಮ್ರಾಜ್ಯದಲ್ಲಿ ಧಂಡಿಯಾಗಿ ಗೌರವಾಸ್ಪದವಾದ ಸ್ಥಾನವಿದೆ. ಕಾರಂತರು ವಿಜ್ಞಾನ, ವೈಚಾರಿಕತೆ ಮತ್ತು ಬದುಕಿನಲ್ಲಿ ಅದರ ಅಳವಡಿಕೆಯ ಬಗ್ಗೆ ಪ್ರಯೋಗಶೀಲರಾದದ್ದು ಅವರ ವ್ಯಕ್ತಿತ್ವದ ಬಹುಮುಖ್ಯ ಆಯಾಮವಾಗಿದೆ. ಶ್ರೀರಂಗರು ಆದ್ಯ ರಂಗಾಚಾರ್ಯರ ಹಂತದಿಂದ ಜಹಾಗೀರದಾರರ ಮತ್ತು ಶ್ರೀರಂಗರ ಹಂತಕ್ಕೆ ಬಂದವರು. ತೀಕ್ಷ್ಣತೆ, ವೈಚಾರಿಕತೆಗಳು ಅವರ ದ್ರವ್ಯವಾದರೂ ಕೂಡ ವೈದಿಕ ಧರ್ಮದ ಮೌಲ್ಯವ್ಯವಸ್ಥೆ ಮತ್ತು ಆಧುನಿಕ ಭಾರತದಲ್ಲಿ ಅದರ ಅಗತ್ಯತೆ ಬಗ್ಗೆ ತೀರಾ ಖಚಿತ, ದೃಢ ನಿರ್ಧಾರ ಅವರದ್ದಾಗಿರಲಿಲ್ಲವೆನಿಸುತ್ತದೆ. ಇಷ್ಟಾಗಿಯೂ ಅವರ ಗೀತಾವ್ಯಾಖ್ಯಾನ, 'ಹರಿಜನ್ವಾರ', 'ಶೋಕಚಕ್ರ' ನಾಟಕಗಳಲ್ಲಿ, 'ನಾಟ್ಯಶಾಸ್ತ್ರ' ಅನುವಾದದಲ್ಲಿ ಹಳತು, ಹೊಸತರ ಸಂಘರ್ಷವಂತೂ ಚೆನ್ನಾಗಿ ಕಾಣಿಸುತ್ತದೆ.

ಕುವೆಂಪು ಅವರನ್ನೂ ಸೇರಿದಂತೆ ೨೦ನೇ ಶತಮಾನದ ಈ ಮೊದಲ ಮತ್ತು ಎರಡನೆಯ ಪೀಳಿಗೆಯ ಬರಹಗಾರರು ಪೂರ್ವ-ಪಶ್ಚಿಮದ ನಡುವಿನ ತಿಕ್ಕಾಟಕ್ಕೆ ಸಾಕ್ಷಿಯಾಗಿದ್ದರು. ಮೆಕಾಲೆ ಶಿಕ್ಷಣ ವ್ಯವಸ್ಥೆಯ ರೂಢಿ, ಹೊಸ ಕಾನೂನುಗಳು, ಬಾಲ್ಯ ವಿವಾಹ, ಸತಿಪದ್ಧತಿಯ ರದ್ದತಿಯಂತಹ ಕೆಲಸಗಳಲ್ಲಿ ಬ್ರಿಟಿಷರ ಕೊಡುಗೆ ಗಣನೀಯವಾದರೂ, ಒಟ್ಟಂದದಲ್ಲಿ ಬ್ರಿಟಿಷ್ V/s ಭಾರತ ಎಂಬ ಮಾದರಿಯ ಸಾಂಸ್ಕೃತಿ ಕೊಡು-ಕೊಳು ಅಸ್ತಿತ್ವದಲ್ಲಿತ್ತೇ ಎಂಬ ಬಗ್ಗೆ ತೀರಾ ಭಿನ್ನಾಭಿಪ್ರಾಯಗಳಿವೆ. ಕೆ.ವಿ ಸುಬ್ಬಣ್ಣನವರು ಇದನ್ನು 'ಮಿಥುನ' ಮತ್ತು 'ಸಂಘರ್ಷ' ಎಂಬ ಎರಡು ಹಂತಗಳಲ್ಲಿ ವಿವರಿಸ ಹೊರಟರೆ ಪುಣೇಕರ ಶಂಕರ ಮೊಕಾಶಿಯವರು Cultural Conflict ಪದದ ಬಳಕೆ ಶುದ್ಧಾಂಗ ತಪ್ಪು, ಏಕೆಂದರೆ— (ಅವರ ಪ್ರಕಾರ) "ಮುಖಾಮುಖಿಯಲ್ಲಿ ತುಸುವಾದರೂ ಸಾಂಸ್ಕೃತಿಕ ಕೊಡುಕೊಳ್ಳು ಇರುತ್ತದೆ. ಆದರೆ ಇತಿಹಾಸದ ಈ ನೂರು ವರ್ಷಗಳು ಏಕಮುಖಿಗತಿ (One way Traffic)ಯಾದುದು ದುರ್ದೈವ. ಭಾರತದ ಐರೋಪ್ಯೀಕರಣ ಈ ಅವಧಿಯ ಪರಿಣಾಮವೇ ಹೊರತು ಇಂಗ್ಲೆಂಡದ ಭಾರತೀಕರಣವಲ್ಲ..." (೧೯೮೧, ಪುಟ.೯) ಎಂದು ಉದ್ಗಾರ ತೆಗೆದಿದ್ದಾರೆ.

ಕುವೆಂಪು ಅವರ ವಿಚಾರ ಸಾಹಿತ್ಯ ರಾಶಿ ಹೊಮ್ಮಿಬಂದ ಈ ಬಗೆಯ ಚಾರಿತ್ರಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನದಲ್ಲಿರಿಸಿಕೊಂಡು ಈಗ ಕುವೆಂಪು ಅವರ ವಿಚಾರ ಸಾಹಿತ್ಯ ಕೃತಿಗಳ ಕಿರುಪರಿಚಯ ಮತ್ತು ವಿಮರ್ಶೆಯನ್ನು ಒಟ್ಟಿಗೆ ಸಾಗಿಸೋಣ. ಅವರ ವಿಚಾರ ಸಾಹಿತ್ಯವನ್ನು ಅಧ್ಯಯನ ಅನುಕೂಲಕ್ಕಾಗಿ —

೧. ಕಾವ್ಯ ಮೀಮಾಂಸೆ ಸಂಬಂಧಿತ ಬರಹಗಳು ೨. ಸಾಮಾಜಿಕ ವಿಮರ್ಶಾ ಸಾಹಿತ್ಯ, ೩. ಇತರ ಸಾಹಿತ್ಯ — ಎಂದು ವಿಂಗಡಿಸಬಹುದು.

1. ಕಾವ್ಯ ಮೀಮಾಂಸೆ ಸಂಬಂಧಿತ ಬರಹಗಳು

ಕುವೆಂಪು ಅವರು 'ರಸೋವೈಸಃ', 'ದ್ರೌಪತಿಯ ಶ್ರೀ ಮುಡಿ', 'ಇತ್ಯಾದಿ' ಮುಂತಾದ ಕಾವ್ಯ ಮೀಮಾಂಸೆ ಸಂಬಂಧಿತ ಬರಹಗಳನ್ನು ರಚಿಸಿದ್ದಾರೆ. ಇವರ ಕಾವ್ಯಮೀಮಾಂಸೆ ಚಿಂತನೆಯನ್ನು ವಿಚಾರ ಸಾಹಿತ್ಯ ಎಂದು ಕರೆಯಲು ಕಾರಣವೆಂದರೆ, ಭಾರತದಲ್ಲಿ ಕಾವ್ಯ ಮೀಮಾಂಸೆ ಹುಟ್ಟಿದ್ದು ಕಾಮಶಾಸ್ತ್ರ ಅಗ್ನಿಪುರಾಣ ಮತ್ತು ವೇದಾಂಗದಲ್ಲಿ ಒಂದೆನಿಸಿರುವ ವ್ಯಾಕರಣ ದರ್ಶನದ ಮೂಲಕ. ಕುವೆಂಪು ಅವರು ಭರತ, ಭಾಮಹ, ವಾಮನ,

ಆನಂದವರ್ಧನ, ಕುಂತಕ, ಅಭಿನವಗುಪ್ತ ಮುಂತಾದ ಒಬ್ಬೊಬ್ಬ ದಾರ್ಶನಿಕನಿಗೂ ವಿಶಿಷ್ಟವಾದ ತಾತ್ತ್ವಿಕ ಹಿನ್ನೆಲೆ – ದರ್ಶನ ಶಾಸ್ತ್ರದ ಪ್ರಕ್ರಿಯೆಯಿದೆ ಎಂದು ಭಾವಿಸಿದ್ದರು. ಒಮ್ಮೆ ತೇಜಸ್ವಿಯವರೊಡನೆ ಮಾತನಾಡುವಾಗ, ದರ್ಶನ ಪ್ರಕ್ರಿಯೆ ಅರಿಯದೇ ಭಾರತೀಯ ಕಾವ್ಯಮೀಮಾಂಸೆ ಅರಿಯಲು ಸಾಧ್ಯವಿಲ್ಲ ಎಂದು ತಿಳಿಸಿದ್ದರು(ಅಣ್ಣನ ನೆನಪು).

ಕಾವ್ಯ ಮೀಮಾಂಸೆಗೆ ಸಂಬಂಧಿಸಿದಂತೆ ಕುವೆಂಪು ರಸಧ್ವನಿ ವಿಚಾರದವರು. ಜೊತೆಗೆ ಭೂಮಾನುಭೂತಿ (Sublime), 'ಕವಿಕೃತಿಯ ಅನನ್ಯ ಪರತಂತ್ರತೆ'ಗಳನ್ನು ರಸಧ್ವನಿಗೆ ಪೂರಕವಾಗಿ ಸೇರಿಸುತ್ತಾರೆ.

ಕುವೆಂಪು ಅವರ ಈ ಬಗೆಯ ವೈಚಾರಿಕತೆಯ ಅನೇಕ ಬಗೆಯ ಗೊಂದಲಗಳಿವೆ. ಉದಾ: ಕೋಲ್‌ರಿಜ್ ಮುಂತಾದ ಶ್ರೇಷ್ಠ ಪ್ರತಿಭಾವಂತರಂತೆ ಕುವೆಂಪು ಕೂಡ ವಿಮರ್ಶೆಯಲ್ಲಿ ಖಚಿತವಲ್ಲದ, ರೆಟರಿಕ್ ಎನ್ನುವ ಭಾಷೆ ಬಳಸುತ್ತಾರೆ. ಇದರಿಂದ ಕಾವ್ಯ ಚಿಂತನೆ ಹಿಂದಾಗಿ, ಕುವೆಂಪು ಭಾಷೆಯೇ ಪ್ರಜ್ವಲಿಸುತ್ತದೆ. ರಸ, ಧ್ವನಿ ಸಿದ್ಧಾಂತಗಳು ಮೂಲತಃ ರೂಪನಿಷ್ಠ-ಆಕೃತಿ ಬದ್ಧ ಕಾವ್ಯಮೀಮಾಂಸಾ ತತ್ತ್ವಗಳು. ಅದಕ್ಕೆ ಸಾಮಾಜಿಕ ವಾಸ್ತವದ ಅರಿವಿಲ್ಲವೆಂದು ಹೇಳುವುದಕ್ಕೆ ಆಗದಿದ್ದರೂ ಸದ್ಯಕ್ಕೆ ಅದೆಲ್ಲ ಅಪ್ರಸ್ತುತ ಎಂಬ ನೆಲೆಯಲ್ಲಿ ಸಾಗುತ್ತದೆ. ಆದರೆ ಒಂದು ಕಡೆ ಕಠೋರ ಸಾಮಾಜಿಕ ವಿಮರ್ಶೆಗೆ ಇಳಿಯುವ ಕುವೆಂಪು, 'ಭಾರತೀಯ' ಕಾವ್ಯಮೀಮಾಂಸೆಯು ವೈದಿಕ ಮೂಲಕ್ಕೆ ಅಂಟಿಕೊಂಡು — ಆತ್ಮವಾದಿ ನೆಲೆಯಲ್ಲೇ ವಿಹರಿಸಿ, ಸಾಮಾಜಿಕತೆಗೆ ಬೆನ್ನುಹಾಕಿರುವುದನ್ನು ಮರೆತು ಅದರ ಪ್ರತಿಪಾದನೆಯಲ್ಲಿ ತೊಡಗುತ್ತಾರೆ. 'ಕನ್ನಡ ಕಾವ್ಯ ಮೀಮಾಂಸೆ'ಯೊಂದು ಬೇಕು ಎಂಬಂತೆ ಅವರು ತೀ.ನಂ.ಶ್ರೀ. ಅವರ ಕಾವ್ಯಮೀಮಾಂಸೆಗೆ ಬರೆದ ಮುನ್ನುಡಿಯಲ್ಲಿ ಹೇಳಿದರೂ ಸಾಹಿತ್ಯ ಚರ್ಚೆಗಳಲ್ಲಿ ಕಡೆಗೂ ಅವರು ಭಾರತೀಯ (=ಸಂಸ್ಕೃತ) ಕಾವ್ಯಮೀಮಾಂಸೆಯ ಹಂತದಲ್ಲೇ ನಿಂತುಬಿಡುತ್ತಾರೆ. ಪಶ್ಚಿಮದ ವಿಜ್ಞಾನ, ತತ್ತ್ವಜ್ಞಾನ ಕುವೆಂಪು ಅವರನ್ನು ಆಕರ್ಷಿಸಿದಷ್ಟು ಆಧುನಿಕ ವಿಮರ್ಶಾ ಪ್ರಸ್ಥಾನಗಳ ಪ್ರಭಾವ ಅವರ ಮೇಲೆ ಆಗಿಲ್ಲ(ಆಗಬೇಕಿತ್ತು ಎಂದು ಅಭಿಪ್ರಾಯವಲ್ಲ).

2. ಸಾಮಾಜಿಕ ವಿಮರ್ಶಾ ಸಾಹಿತ್ಯ

ಕುವೆಂಪು ಅವರು 'ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ', 'ನಿರಂಕುಶ ಮತಿಗಳಾಗಿ', 'ಮನುಜಮತ ವಿಶ್ವಪಥ', 'ವಿಚಾರಕ್ರಾಂತಿಗೆ ಆಹ್ವಾನ'... ಇತ್ಯಾದಿ ಸಾಮಾಜಿಕ ವಿಮರ್ಶಾ ಸಾಹಿತ್ಯ ರಚಿಸಿದ್ದಾರೆ. ಸಮಾಜ ವಿಮುಖವಾದ ರಸ ಮೀಮಾಂಸೆ ಪ್ರತಿಪಾದಿಸುವ ಕುವೆಂಪು — ಇಲ್ಲಿ ಮಾತ್ರ ಜಾತಿ, ವರ್ಣವ್ಯವಸ್ಥೆ ಪುರೋಹಿತಶಾಹಿಗಳನ್ನು ಕಟುವಾಗಿ ಖಂಡಿಸುತ್ತಾರೆ. ಕುವೆಂಪು ಅವರ ಈ ಬಗೆಯ ಚಿಂತನೆಯಲ್ಲಿರುವ ದ್ವಿವಿಧತೆಯನ್ನು ಹಿಡಿದು ವಿಮರ್ಶಕ ಪ್ರೊ. ಜಿ.ಹೆಚ್. ನಾಯಕರು ವಿಸ್ತಾರವಾಗಿ ಚರ್ಚಿಸಿದ್ದಾರೆ (ಕನ್ನಡ ಅಧ್ಯಯನ, ಮಳೆ ಸಂಚಿಕೆ,).

ಕುವೆಂಪು ಅವರು ವೈಚಾರಿಕ ಸ್ತರದಲ್ಲಿ ಜಾತಿ-ವರ್ಣ ವ್ಯವಸ್ಥೆ ವಿರೋಧದಲ್ಲಿ ಬೇಂದ್ರೆ, ಮಾಸ್ತಿ, ಶ್ರೀರಂಗ, ದೇವುಡು ಅವರಿಗಿಂತ ಹೆಚ್ಚು ಪ್ರಗತಿಶೀಲರು. ಅವರು ತಮ್ಮ ಕಾಲ–ಸಂದರ್ಭದಲ್ಲಿ 'ಶೂದ್ರತಪಸ್ವಿ' ನಾಟಕದ ಮೂಲಕ ಹಾಗೂ ಮೇಲೆ ಹೇಳಿದ ವೈಚಾರಿಕ ಗದ್ಯ ಕೃತಿಗಳ ಮೂಲಕ ಹೇಳಿದ ಸಂಗತಿಗಳನ್ನು ಓದಿದರೆ, ಆ ಕಾಲದಲ್ಲಿ ಇಷ್ಟು ಬರೆಯಲು ನಿಜಕ್ಕೂ ಪ್ರಾಂಜಲ ಮನಸ್ಸು ತೀಕ್ಷ್ಣ ಬುದ್ಧಿಶಕ್ತಿ ಎಲ್ಲಕ್ಕೂ ಹೆಚ್ಚಾಗಿ ಎದೆಗಾರಿಕೆ ಬೇಕಿತ್ತು ಎಂದು ಖಂಡಿತಾ ಅನುಭವಕ್ಕೆ ಬರುತ್ತದೆ.

3. ಇತರ ಸಾಹಿತ್ಯ

ಕುವೆಂಪು ಅವರ ವಿಚಾರ ಸಾಹಿತ್ಯದಲ್ಲಿ ಇತರ ಸಾಹಿತ್ಯದ ಗಾತ್ರ ಕಮ್ಮಿ ಮಟ್ಟದ್ದು. ಆದರೆ ಅದರ ಸಾಂಸ್ಕೃತಿಕ ಮಹತ್ವ ಗಂಭೀರ ಸ್ವರೂಪದ್ದು. ಇದರಲ್ಲಿ ಮುಖ್ಯವಾಗಿ ಕೋ. ಚನ್ನಬಸಪ್ಪನವರು ಸಂಪಾದಿಸಿರುವ 'ಶ್ರೀ ಕುವೆಂಪು ಭಾಷಣಗಳು ಬಿನ್ನವತ್ತಳೆಗಳು', 'ವಿಶ್ವವಿದ್ಯಾನಿಲಯ ಪ್ರಸಾರಾಂಗ' ಮತ್ತು ದೇಜಗೌ ಅವರು ಸಂಪಾದಿಸಿರುವ 'ರಾಷ್ಟ್ರಕವಿ ಭಾಷಣಗಳು' ಕೃತಿಗಳು ಸೇರಿವೆ. ಕುವೆಂಪು ಸಾಹಿತ್ಯ ರಾಶಿ ನವ್ಯೋತ್ತರದ ತರುಣ ಸಾಹಿತಿಗಳ ಪಡೆ-ಪೀಳಿಗೆಗೆ ಒಂದರ್ಥದಲ್ಲಿ ಅನಗತ್ಯವಾಗುತ್ತ, ಇನ್ನೊಂದು ರೀತಿಯಲ್ಲಿ ಕುವೆಂಪು ಅವರ ಸಾಮಾಜಿಕ ಚಿಂತನೆ, ಅಂತರ್ಜಾತೀಯ – ಸರಳ ವಿವಾಹಗಳು('ಮಂತ್ರ ಮಾಂಗಲ್ಯ') ಪ್ರಸ್ತುತವಾಗುತ್ತಾ ಹೋದ ಕಾಲದ ಬಗ್ಗೆ ತೇಜಸ್ವಿ 'ಅಣ್ಣನ ನೆನಪು' ಪುಸ್ತಕದಲ್ಲಿ ತೀವ್ರವಾಗಿ ಚರ್ಚಿಸಿದ್ದಾರೆ.

ಇದೇ ಕಾಲದಲ್ಲಿ ಕುವೆಂಪು ಅವರ ಕೃತಿ ಮತ್ತು ವ್ಯಕ್ತಿತ್ವದಲ್ಲಿ ಅಭಿನ್ನತೆಯನ್ನು ಏರ್ಪಡಿಸಿ, ಅವರ ಬಗ್ಗೆ ತೀರಾ ಅವಿಮರ್ಶಾತ್ಮಕವಾಗಿ ಹೊಗಳುವಿಕೆ ಸಹ ಶುರುವಾಯಿತು. ಇಲ್ಲಿನ ಚರ್ಚೆ ಕುವೆಂಪು ಕವಿಯೋ ಅಲ್ಲವೋ ಎಂಬ ಪ್ರಶ್ನೆಯನ್ನು ಮೀರಿದ್ದು. ಏಕೆಂದರೆ, ನವ್ಯದ ಉದ್ಘಾಟಕ ಕವಿ ಅಡಿಗರು, ಜಿ.ಸಿ. ರಾಮಚಂದ್ರಶರ್ಮರಿಗೆ ನೀಡಿರುವ ಸಂದರ್ಶನದಲ್ಲಿ ಕುವೆಂಪು ಅವರು ಕವಿಯಾದರೆ ತಾವು ಕವಿಯೇ ಅಲ್ಲ ಎಂದು ಅಬ್ಬರಿಸಿದ್ದರು. ಆದರೆ ಇಂದಿಗೂ ಕನ್ನಡ ಕಾವ್ಯದ ಗಂಭೀರ ಜಿಜ್ಞಾಸುಗಳು ಬೇಂದ್ರೆಯವರೊಂದಿಗೆ ಕುವೆಂಪು, ಅಡಿಗರನ್ನೂ, ಮುಂದುವರೆದು ಕಂಬಾರ, ಪು.ತಿ.ನ., ನರಸಿಂಹಸ್ವಾಮಿ, ಶಿವರುದ್ರಪ್ಪ, ಕಣವಿಯವರನ್ನೂ, ಇತ್ತೀಚಿನ ಶಿವಪ್ರಕಾಶ್, ಆನಂದ ಝುಂಜರವಾಡರನ್ನೂ ಒಟ್ಟೊಟ್ಟಿಗೆ ಓದುತ್ತ ಬರುತ್ತಿದ್ದಾರೆ. 'ಕವಿಗೆ ಕವಿ ಮುನಿವಂ' ಎಂಬ ಮಾತು ಮೂಕ ಕವಿಗಳಾದ ಸಹೃದಯರಿಗೆ ಅನ್ವಯಿಸುವುದಿಲ್ಲ!

ಆದರೆ ನವ್ಯದ ಅಬ್ಬರ ಒಂದು ಕಡೆಯಾದರೆ, ಮೈಸೂರಿನ ಬುದ್ಧಿಜೀವಿಗಳಾದ ಡಾ|| ಹಾ.ಮಾ.ನಾ., ಡಾ|| ದೇಜಗೌ, ಇವರುಗಳು ಕುವೆಂಪುಮತ ನಿರ್ಮಿಸಿಕೊಂಡದ್ದು ಕುವೆಂಪು ವಿಚಾರ ಸಾಹಿತ್ಯದ ಮೂರನೇ ಮಜಲಿನ ಅವಿಭಾಜ್ಯ ಅಂಗ, ನಾಡಿನ ವೈಚಾರಿಕತೆಯ ದುರವಸ್ಥೆಗೆ ಸಾಕ್ಷಿ. ಏಕೆಂದರೆ ಇಲ್ಲಿ ಕುವೆಂಪು ಪ್ರತಿಪಾದಿಸಿದ, ನಂಬಿದ್ದ ಮೌಲ್ಯಗಳು ಹಿಂದಾಗಿ ಕುವೆಂಪು ಕನ್ನಡ ನಾಡಿನ ಮಹಾನಾಯಕ ಎಂಬ ಪ್ರತಿಮೆಯೇ ಉತ್ಸವಮೂರ್ತಿಯಾಯಿತು. ವ್ಯಕ್ತಿ ಮುಂದಾಗಿ ವ್ಯಕ್ತಿತ್ವ–ವಿಚಾರಶಕ್ತಿ ಹಿಮ್ಮೆಟ್ಟುವ ಪ್ರಕ್ರಿಯೆ ಅರಿಯಲು ಕುವೆಂಪು ಅವರನ್ನು ಮರೀಯಗೊಳಿಸಿದ ಪ್ರಕ್ರಿಯೆಯ ಅಧ್ಯಯನ ಪ್ರಯೋಜನಕಾರಿ. ಕುವೆಂಪು ಅವರಿಗೆ ಸಾಹಿತಿಯಾಗಿ ಶಕ್ತಿ ಪ್ರತಿಭೆ ಇದ್ದಂತೆಯೇ ವಿಮರ್ಶಕರಾಗಿ ಅನೇಕ ಮಿತಿಗಳಿದ್ದವು. ಉದಾ:

೧. ಕರ್ಮ ಸಿದ್ಧಾಂತ, ಪುನರ್ಜನ್ಮಗಳಂಥ Para normal ಸಂಗತಿಗಳನ್ನು ದೃಢವಾಗಿ ನೆಚ್ಚಿದ್ದರು. ಪುರೋಹಿತಶಾಹಿಯ ಪ್ರಾಬಲ್ಯಕ್ಕೆ ಮತ್ತು ದಲಿತ–ದೀನರ ಸ್ಥಿತಿಗೆ ಈ ಕರ್ಮ ಸಿದ್ಧಾಂತವೇ ಕಾರಣ ಎಂದು ನಂಬಿ, ಅದನ್ನು ವಿರೋಧಿಸುವ ಕುವೆಂಪು ಕೂಡ — ಅದೇ ತತ್ವ ಏಕೆ ಬೆಂಬಲಿಸುತ್ತಿದ್ದರು?

೨. 'All types of beliefs are blind beliefs' ಎಂಬ ಮಾತಿನಂತೆ, ಮಲೆಮಾದೇಶ್ವರ, ಅಯ್ಯಪ್ಪನಿಗೆ, ತಿರುಪತಿ, ಧರ್ಮಸ್ಥಳಕ್ಕೆ ಹೋಗುವುದು ತಪ್ಪಾದರೆ (ಕುವೆಂಪು ಪ್ರಕಾರ) ರಾಮಕೃಷ್ಣಾಶ್ರಮಕ್ಕೆ ಹೋಗಿ ಧ್ಯಾನ ಮಾಡುವುದು, ರಾಮಕೃಷ್ಣ ಪರಮಹಂಸ, ಶಾರದಾಮಾತೆ ಚಿತ್ರಕ್ಕೆ ಊದುಬತ್ತಿ

ಉರಿಸುವುದೂ ಕೂಡ ಒಂದು 'ಮೂಢನಂಬಿಕೆ'ಯೇ ಅಲ್ಲವೆ?

ಕುವೆಂಪು ಅವರ ಚಿಂತನೆಯಲ್ಲಿ ಮಿತಿಗಳಿವೆ. ಆದರೆ ಯಾರ ಚಿಂತೆಯಲ್ಲಿ ಮಿತಿಗಳಿಲ್ಲ. 'ಶ್ರೀರಾಮಾಯಣ ದರ್ಶನಂ'ಗೆ ಜ್ಞಾನಪೀಠ ಬಂದ ನಂತರದ ಒಂದು ಭಾಷಣದಲ್ಲಿ ಕುವೆಂಪು ಅವರು ತಾವು ವಾಲ್ಮೀಕಿ ರಾಮಾಯಣಕ್ಕೆ ಕೃತಜ್ಞರಾಗಿರುವುದಾಗಿ ತಿಳಿಸಿದ್ದರು. ಆದರೆ ಕುವೆಂಪು. ಅವರ ಪರಿಸರ — ಕಾಲ ದೇಶಗಳ ಮೂಲಕ ಬಂದಿರುವ ಮನುಷ್ಯ ಸಹಜಮಿತಿಗಳ ನಡುವೆಯೇ ನಿಜಕ್ಕೂ ಸಿಡಿಲಿನಂತಹ ಚಿಂತಕರು. ಅವರ ಇತಿಮಿತಿಗಳ ನಡುವೆ ಸ್ವಚ್ಛ ಸಾರ್ವಜನಿಕ ಜೀವನ, ಗೃಹಸ್ಥ ಜೀವನ, ಲೇಖನ ವ್ಯವಸಾಯ ಇದರ ನಡುವೆ ಬದುಕಿ, ನಾಡಿನ ಹಲವು ಪೀಳಿಗೆಗೆ ದಾರಿ ತೋರಿದವರು. ಸಮಗ್ರವಾದ ನೋಟ ಬೀರಿ, ಕುವೆಂಪು ಸಾಹಿತ್ಯ ಅವಲೋಕಿಸಿದರೆ ಏಕಕಾಲಕ್ಕೆ ಭಾರತೀಯ ಸಮಾಜದ ಜ್ಞಾನಕಾಂಡದ ಬಗ್ಗೆ ಆದರ (ಉದಾ: ತಪಸ್ಸು ಪೂಜೆ, ನಿರಾಕಾರ-ಸಾಕಾರ ಭಕ್ತಿ...), ಅದೇ ಕಾಲಕ್ಕೆ ಕರ್ಮಕಾಂಡ, ಜಾತಿ, ವರ್ಣ, ಮನುಸ್ಮೃತಿ, ಪುರೋಹಿತಶಾಹಿ ಇವುಗಳ ಬಗ್ಗೆ ವಿರೋಧ ಕಂಡುಬರುತ್ತದೆ. ಕುವೆಂಪು ಅವರ ವಿಚಾರಸಾಹಿತ್ಯ 'ವೇದಾಂತವನ್ನೇ ವಿಜ್ಞಾನ'ವಾಗಿ ಕಂಡುಬಿಟ್ಟಿದೆ(ಪ್ರೊ. ಕೆ.ಜಿ. ನಾಗರಾಜಪ್ಪನವರ ಮಾತು), ದೈತ್ಯ ಓದು. ಮನನದ ಮೂಲಕ ಭಾರತದ ಜ್ಞಾನ ಪರಂಪರೆಗೆ ಇನ್ನಷ್ಟು ಸವಾಲು. ಜಿಜ್ಞಾಸೆ ಒಡ್ಡುವ ಶಕ್ತಿ ಅವರಿಗೆ ಇದ್ದಿರಬಹುದೆ? ಎಂಬ ಅನುಮಾನ ಹುಟ್ಟುವುದರಿಂದ, ಅವರ ವಿಚಾರ ಸಾಹಿತ್ಯದಲ್ಲಿ ಇಂತಹ ಅನೇಕ ಬಿರುಕುಗಳು ಕಾಣುತ್ತವೆ.

ಇಪ್ಪತ್ತೊಂದನೆ ಶತಮಾನದ ಆರಂಭದಲ್ಲಿ ಜಾತಿ ಮತ್ತೆ ಮಡುಗಟ್ಟಿ, ಉಪಜಾತಿಗಳು ತೀವ್ರ ಚಟುವಟಿಕೆಗಳಲ್ಲಿ ತೊಡಗಿರುವಾಗ ಹಿಂದಿರುಗಿ ನೋಡಿದರೆ, ಕುವೆಂಪು ಕೂಡ 'ಸಾಂಸ್ಕೃತೀಕರಣ'ಗೊಳ್ಳುತ್ತಲೇ ಅವರ ಪರಿಸರ – ಕಾಲ–ದೇಶದ ಮಿತಿಯಲ್ಲಿ 'ಬ್ರಾಹ್ಮಣೀಕರಣ'ಗೊಂಡರು ಎನಿಸುತ್ತದೆ.

ಕುವೆಂಪು ವಿಚಾರ ಸಾಹಿತ್ಯದ ನೆಲೆಯ ಬೆಲೆ ಅರಿಯಲು ಅವರನ್ನು ಶಾಂತರಸರಿಂದ ಮೊದಲ್ಗೊಂಡು ಲಂಕೇಶ್, ಡಿ.ಆರ್. ನಾಗರಾಜರ ತನಕ ಹರಡಿರುವ ಕನ್ನಡ ವೈಚಾರಿಕತೆಯ ಮಡಿಲಲ್ಲಿ ಇಡಬೇಕು. ಕಾವ್ಯದಲ್ಲಿ ಬೇಂದ್ರೆ ಪ್ರತಿಭೆ ಇಂದಿಗೂ ಹೊಸ ಸವಾಲು ಎಸೆದರೂ, ಸಾಮಾಜಿಕವಾಗಿ ಬೇಂದ್ರೆ ಗಟ್ಟಿ ಚಿಂತಕರು ಎನಿಸುತ್ತಿಲ್ಲ. ಅವರ ಸಾಹಿತ್ಯ ರಾಶಿ ವೇದದ ಓಂನಾಮಕ್ಕೆ ಬರೆದ ಭಾಷ್ಯದಂತಾಗಿದೆ. ಕಾರಂತರ ವಿಚಾರದಲ್ಲಿ ಅವರು ಅರಗಿಸಿಕೊಂಡದ್ದೆಷ್ಟು, ಹಾಗೆ ವಿಚಾರದ ಕನಲಿಕೆ ನಡೆಸಿದ್ದೆಷ್ಟು ಎಂಬ ಯಕ್ಷ ಪ್ರಶ್ನೆ ಉಳಿದಿದೇ ಇದೆ.

ಉಳಿದಂತೆ ಎಷ್ಟೋ ಸಾಹಿತಿಗಳನ್ನು ಸಾಹಿತ್ಯದ ವಲಯದ ಒಳಗೆ ಮಾತ್ರ ಚರ್ಚಿಸಲು ಅವರ ಸಾಂಸ್ಕೃತಿಕ ವ್ಯಕ್ತಿತ್ವದ ಮಿತಿಯೇ ಕಾರಣವಾಗಿದೆ. ಆಧುನಿಕತೆಯ ಹೊಸ ಮಜಲಿನಲ್ಲಿಯೇ ಕುವೆಂಪು ಅವರು ತಮ್ಮ ವಿಚಾರ ಸಾಹಿತ್ಯದ (ಕಾದಂಬರಿ, ಕಾವ್ಯ ಸೇರಿದಂತೆ) ಮೂಲಕ ಇಪ್ಪತ್ತನೆಯ ಶತಮಾನ ಕಂಡ ನಮ್ಮ ನೆಲದ ದೈತ್ಯ ಸಾಂಸ್ಕೃತಿಕ ವ್ಯಕ್ತಿತ್ವವಾಗಿ ನಮ್ಮೊಳಗಿನ ಸಾಂಸ್ಕೃತಿಕ ಪ್ರಶ್ನೆಗಳಿಗೆ ಮತ್ತೆ ಮತ್ತೆ ತಿದಿ ಒತ್ತುತ್ತಿದ್ದಾರೆ.


ಇಪ್ಪತ್ತನೆಯ ಶತಮಾನದ ಬಿ.ಎಂ.ಶ್ರೀ, ಬೇಂದ್ರೆ, ಮಾಸ್ತಿ ಶಂ.ಬಾ, ಕಾರಂತ, ಲಂಕೇಶ್, ಅನಂತಮೂರ್ತಿ ಇವರ ವೈಚಾರಿಕ ನೆಲೆಯನ್ನು ಮರು ಓದಿಗೆ ಒಳಪಡಿಸಲೇಬೇಕಿದೆ.

ವಿಳಾಸ : ನಂ. ೪೫, ೩ನೇ ಮೇನ್, ೨ನೇ ಕ್ರಾಸ್
ಶ್ರೀನಿವಾಸ ನಗರ, ಬೆಂಗಳೂರು - ೫೬೦ ೦೫೦

ಕುವೆಂಪು ಅವರ ಗದ್ಯ : ಕೆಲವು ಆಯಾಮಗಳು

ಎಸ್. ಶ್ರೀನಿವಾಸ ಉಡುಪ

ಭಾಷೆ ಎಂಬುದೊಂದು ಬೆರಗು. ಜೀವಿಗಳಲ್ಲಿ ಮನುಷ್ಯ ಮಾತ್ರ ಭಾಷೆಯ ಮೂಲಕ ತನ್ನ ಅಂತರತಮ ಭಾವನೆಗಳನ್ನು ಹೊರಗಿನ ಪ್ರಪಂಚಕ್ಕೆ ಸಾಕಷ್ಟು ಪರಿಣಾಮಕಾರಿಯಾಗಿ ಪ್ರಕಟಿಸಬಲ್ಲ. ವ್ಯಾವಹಾರಿಕ ಪ್ರಪಂಚದಲ್ಲಿ 'ಲೋಕೋಪಯೋಗಿ'ಯಾಗಿ ಹೊರ ಹೊಮ್ಮುವ ಭಾಷೆ, ವ್ಯಕ್ತಿಯ ಅಂತರಂಗದ ಅನಿಸಿಕೆಗಳನ್ನೂ, ಆಶೆ-ನಿರಾಶೆ, ನೋವು-ನಲಿವು, ಬಯಕೆ, ಆಕಾಂಕ್ಷೆ, ಸ್ನೇಹ-ಪ್ರೀತಿ, ಇತ್ಯಾದಿಗಳನ್ನು ವ್ಯಕ್ತಪಡಿಸುವಾಗ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅವತಾರಗಳನ್ನು ಪಡೆದು 'ಭಾವೋಪಯೋಗಿ' ಸ್ವರೂಪವನ್ನು ಪಡೆಯುತ್ತದೆ. ಇಷ್ಟಾದರೂ ಭಾಷೆಗೆ ಬೆರಗಿನ ಮುಖದ ಜೊತೆಗೆ ಕೊರಗಿನ ಮುಖವೂ ಇದೆ. ಏಕೆಂದರೆ, ಬಹಳಷ್ಟು ಸಂದರ್ಭದಲ್ಲಿ ನಮ್ಮೊಳಗಿನ ನವಿರಾದ ಭಾವನೆಗಳನ್ನೂ, ಆಳವಾದ ಚಿಂತನೆಗಳನ್ನೂ ಇನ್ನೊಬ್ಬರಿಗೆ ತಲುಪಿಸಬೇಕಾದ ಸಂದರ್ಭದಲ್ಲಿ ಭಾಷೆ ಸೋತು ಹೋಗುತ್ತದೆ. ಆದ್ದರಿಂದಲೇ ಸೃಜನಶೀಲ ಲೇಖಕನಾದವನು ಭಾಷೆಯೊಂದಿಗೆ ಹೋರಾಡಿ, ಅದನ್ನು ಪಳಗಿಸಿಕೊಳ್ಳುತ್ತಾನೆ; ಅದಕ್ಕೆ ಹೊಸ ಹೊಸ ರಾಗಚ್ಛಾಯೆಗಳನ್ನೂ, ಅರ್ಥವಲಯಗಳನ್ನೂ ಕಸಿ ಮಾಡಿ, ಹೊಸ ಹೊಸ ಪದಗಳನ್ನೂ, ನುಡಿಗಟ್ಟುಗಳನ್ನೂ ಸೃಷ್ಟಿಸಿ, ಭಾಷೆಯ ಸಂವಹನ ಕ್ಷಮತೆಯನ್ನೂ, ಅಭಿವ್ಯಕ್ತಿ ಸಾಮರ್ಥ್ಯವನ್ನೂ ಹೆಚ್ಚಿಸುತ್ತಾನೆ. ಇಂಥ ಸಮರ್ಥರಿಂದಾಗಿ ಭಾಷೆ ಬೆಳೆಯುತ್ತದೆ; ತನ್ನ ಸೃಷ್ಟಿಶಕ್ತಿಯ ದಿಗಂತಗಳನ್ನು ವಿಸ್ತರಿಸಿಕೊಳ್ಳುತ್ತದೆ; 'ಅನಿರ್ವಚನೀಯ'ವೆನಿಸುವ ಅನುಭವಗಳನ್ನು ಶಾಬ್ದಿಕವಾಗಿಸುವುದರಲ್ಲಿ ತಕ್ಕಷ್ಟು ಯಶಸ್ವಿಯಾಗುತ್ತದೆ. ಈ ರೀತಿ ಸಂಪರ್ಕವಾಹಕವಾದ ಭಾಷೆಗೆ ಹೊಸ ಶಕ್ತಿ, ತೇಜಸ್ಸು ಹಾಗೂ ಸಂವಹನ ಕ್ಷಮತೆಗಳನ್ನು ಕಾಲಕಾಲಕ್ಕೆ ಒದಗಿಸುವ ಕಾರಣಪುರುಷರು ಎಲ್ಲ ಭಾಷೆಗಳ ಇತಿಹಾಸದಲ್ಲೂ ಆಗಾಗ ಕಾಣಿಸಿಕೊಳ್ಳುತ್ತಾರೆ. ಆಧುನಿಕ ಕನ್ನಡ ಭಾಷೆಯ ಸಂದರ್ಭದಲ್ಲಿ ಹೇಳುವುದಾದರೆ ಕುವೆಂಪು ಅಂಥ ಕಾರಣಪುರುಷರಲ್ಲಿ ಒಬ್ಬರಾಗಿದ್ದಾರೆ.


ಆರ್.ಎಸ್. ನಾಯ್ಡು ಅವರ ಕೃತಿ

ಕುವೆಂಪುರವರದು ಪದ್ಯ, ಗದ್ಯ — ಎರಡರಲ್ಲೂ ಎತ್ತರದ ಯಶಸ್ಸನ್ನು ಸಾಧಿಸಿದ ಸವ್ಯಸಾಚೀ ಪ್ರತಿಭೆ, ಕವಿಯಾಗಿ ಅವರ

ಸಾಧನೆಗೆ ಸರಿಸಾಟಿಯಾಗಿಯೇ ಗದ್ಯ ಲೇಖಕರಾಗಿಯೂ ಅವರು ಸಾಧನೆ ಮಾಡಿದ್ದಾರೆ. ಸುಮಾರು ೧೮೭೫ರಲ್ಲಿ ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ನಾಂದಿ ಹಾಡಿದ ಕೆಂಪು ನಾರಾಯಣ, ಸಂಪ್ರದಾಯ ಹಾಗೂ ಆಧುನಿಕತೆಯ ನಡುವಣ ಸೇತುವೆಯಾಗಿ ಕನ್ನಡ ಗದ್ಯವನ್ನು ಬೆಳೆಸಿದ ಮುದ್ದಣ್ಣ ಅನಂತರ ಬಂದ ಬಿ. ವೆಂಕಟಾಚಾರ್ಯ, ಗಳಗನಾಥ, ಎಂ.ಎಸ್. ಪುಟ್ಟಣ್ಣ ಮೊದಲಾದ ಗದ್ಯಶಿಲ್ಪಿಗಳ ಸಾಲಿನಲ್ಲಿ ಕುವೆಂಪು ಒಂದು ಶಿಖರವಾಗಿ ನಿಂತವರು. ಅವರ ಸಮಕಾಲೀನರಾದ ಮಾಸ್ತಿಯವರ ಗದ್ಯ ಸರಳಾತಿಸರಳ ಮತ್ತು ನಿರಲಂಕೃತವಾದುದು; ಎ.ಆರ್. ಕೃಷ್ಣಶಾಸ್ತ್ರಿಗಳ ಗದ್ಯ ಸ್ಫಟಿಕ ಸಲಿಲದಂತೆ ಪಾರದರ್ಶಕ, ಕಾರಂತರ ಗದ್ಯದಲ್ಲಿ ಕುಸುರಿ ಕೆಲಸಕ್ಕೆ ಅವಕಾಶವೇ ಇಲ್ಲ; ಸಿದ್ಧವನಹಳ್ಳಿ ಕೃಷ್ಣಶರ್ಮರದು ಅತ್ಯಂತ ಚಿಕ್ಕವಾಕ್ಯಗಳಲ್ಲಿ ಚಿಟಿಚಿಟಿಗುಟ್ಟುವ ಗದ್ಯ. ಕುವೆಂಪುರವರ ಗದ್ಯ ಇವೆಲ್ಲಕ್ಕಿಂತಲೂ ಸಂಪೂರ್ಣ ಭಿನ್ನ. ಅವರದು ನಿರಾಭರಣ ಗದ್ಯವಲ್ಲ; ಸಾಲಂಕೃತವಾದುದು. ಸಂದರ್ಭ, ಸನ್ನಿವೇಶಗಳಿಗೆ ಅನುಗುಣವಾಗಿ ಬಳುಕಿ, ಬಾಗಿ, ಗರ್ಜಿಸಿ, ಕೆಲವೊಮ್ಮೆ ಭೋರ್ಗರೆಯುತ್ತ ಹರಿಯುವ ಮಹಾನದಿಯಂತಿರುವ ಗದ್ಯ ಅವರದು. ಅವರ ಗದ್ಯವನ್ನು ಓದುವಾಗ ಉತ್ತುಂಗ ಹಿಮಾಲಯದ, ಅಪರಂಪಾರ ಸಾಗರದ ನೆನಪಾದರೆ ಆಶ್ಚರ್ಯವಿಲ್ಲ.

ಕುವೆಂಪು ಸುಮಾರು ಆರು ಸಾವಿರ ಪುಟಗಳಿಗೂ ಮೀರಿ ಗದ್ಯ ಸೃಷ್ಟಿ ಮಾಡಿದ್ದಾರೆ. (ಅವರ ಆತ್ಮಕಥೆ 'ನೆನಪಿನದೋಣಿಯಲ್ಲಿ'– ಎಂಬುದೇ ೧೨೬೮ ಪುಟಗಳ ಬೃಹತ್‌ಗ್ರಂಥ) ಕುವೆಂಪುರವರ ಗದ್ಯ ಸೃಷ್ಟಿಯಲ್ಲಿ ಎರಡು ಮಹಾಕಾದಂಬರಿಗಳಿವೆ; ಜೀವನ ಚರಿತ್ರೆಗಳಿವೆ; ಎರಡು ಕಥಾಸಂಕಲನಗಳಿವೆ; ಮಲೆನಾಡಿನ ಚಿತ್ರಗಳಂಥ ಲಲಿತ ಪ್ರಬಂಧಗಳಿವೆ; ಸಾಹಿತ್ಯ ಮೀಮಾಂಸೆ, ಸಾಹಿತ್ಯ ವಿಮರ್ಶೆಗಳಿವೆ; ವೈಚಾರಿಕ ಬರೆಹಗಳಿವೆ; ಅನುವಾದಗಳಿವೆ. ಅಲ್ಲದೆ ಅನೇಕ ಲೇಖಕರ ಪುಸ್ತಕಗಳಿಗೆ ಬರೆದ ಮುನ್ನುಡಿಗಳಿವೆ. ಕುವೆಂಪುರವರದು ''ಭಾವಾಲೋಚನೆ ಯಿಂದ ಹದಗೊಂಡ ಸಹಜಗದ್ಯ'' ಎಂಬ ವಿಮರ್ಶಕರೊಬ್ಬರ (ಕೆ.ಎಸ್. ಭಗವಾನ್) ಮಾತು ಸ್ವೀಕಾರಾರ್ಹವಾದುದು. ಅವರ ಗದ್ಯ ಯಾವ ಸಂದರ್ಭದಲ್ಲಿಯೂ ಭಾವಾತಿರೇಕಕ್ಕೆ ಒಳಗಾಗಿ ಪೇಲವವಾಗುವುದಿಲ್ಲ; ಅಥವಾ ವಿಚಾರದ ಭಾರದಿಂದ ಶುಷ್ಕವಾಗುವುದಿಲ್ಲ. ಅವರು ಕಾವ್ಯವನ್ನು 'ಬುದ್ಧಿ ಭಾವಗಳ ವಿದ್ಯುದಾಲಿಂಗನ'ವೆಂದು ವರ್ಣಿಸಿದ್ದಾರೆ. ಅವರ ಗದ್ಯದಲ್ಲಿಯೂ ಭಾವ ಮತ್ತು ವಿಚಾರಗಳ ಸಹಜಮೈತ್ರಿ ಸಾಧಿತವಾಗಿದೆ. ಕುವೆಂಪುರವರು ತಮ್ಮ ಗದ್ಯದಲ್ಲಿ ಹಳೆಗನ್ನಡ, ನಡುಗನ್ನಡ, ಸಂಸ್ಕೃತ ಪದಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುತ್ತಾರೆ; ಗ್ರಾಮ್ಯ ಭಾಷೆಯ ಪದಗಳನ್ನೂ, ನುಡಿಗಟ್ಟುಗಳನ್ನೂ ಸಂದರ್ಭಕ್ಕೆ ಅನುಗುಣವಾಗಿ ಯಾವುದೇ ಮಡಿವಂತಿಕೆಯಿಲ್ಲದೇ ಉಪಯೋಗಿಸುತ್ತಾರೆ. ಮಾತ್ರವಲ್ಲ, ಅವರಷ್ಟು ಹೊಸಪದಗಳನ್ನೂ, ಪದಸಮುಚ್ಚಯಗಳನ್ನೂ ಟಂಕಿಸಿದ ಲೇಖಕ ಪ್ರಸ್ತುತ ಕನ್ನಡ ಸಂದರ್ಭದಲ್ಲಿ ಮತ್ತೊಬ್ಬರಿಲ್ಲ. ಮುಖ್ಯವಾಗಿ ಸಾಹಿತ್ಯ ಮೀಮಾಂಸೆಗೆ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಅವರು ಸೃಷ್ಟಿಸಿ, ಬಳಸಿದ ಪದಗಳೂ, ಪದಸಮುಚ್ಚಯಗಳೂ ಅವರ ಭಾವಯತ್ರೀ ಪ್ರತಿಭೆಗೆ ಸಾಕ್ಷಿಗಳಾಗಿವೆ. ಶ್ರೀಸಾಮಾನ್ಯ, ವಿಭೂತಿಪೂಜೆ, ಭೂಮಾನುಭೂತಿ, ಪೂರ್ಣದೃಷ್ಟಿ, ಅನಿಕೇತನ ಪ್ರಜ್ಞೆ, ಮಹೋಪಮೆ, ಮಹಾಛಂದಸ್ಸು, ಪ್ರತಿಮಾ ಮತ್ತು ಪ್ರತಿಕೃತಿ— ಹೀಗೆ ಹೊಸಗನ್ನಡ ಶಬ್ದ ಭಂಡಾರಕ್ಕೆ ಅನೇಕವೆನಿಸುವಷ್ಟು ಶಬ್ದನಾಣ್ಯಗಳನ್ನು ಅವರು ಟಂಕಿಸಿಕೊಟ್ಟಿದ್ದಾರೆ.

ಕುವೆಂಪುರವರ ಮೊದಮೊದಲ ಸೃಜನಶೀಲ ಗದ್ಯದ ಮೇಲೆ ಸ್ವಲ್ಪಮಟ್ಟಿಗೆ ಬಿ.

ವೆಂಕಟಾಚಾರ್ಯರ ಗದ್ಯದ ಪ್ರಭಾವವನ್ನು ಸೂಕ್ಷ್ಮದೃಷ್ಟಿಯ ಓದುಗ ಗುರುತಿಸಿದರೆ ಆಕಸ್ಮಿಕವೇನಲ್ಲ. 'ಕಾನೂರು ಹೆಗ್ಗಡಿತಿ'ಯ ಮೊದಲ ಪುಟಗಳಲ್ಲಿ, ಕುವೆಂಪುರವರ ಕೆಲವು ಸಣ್ಣ ಕತೆಗಳಲ್ಲಿ ಈ ಪ್ರಭಾವವನ್ನು ಗಮನಿಸಬಹುದು. ('ಕಾನೂರು ಹೆಗ್ಗಡಿತಿ'ಯಲ್ಲಿ ಸೀತೆ ವೆಂಕಟಾಚಾರ್ಯರ 'ವಿಷವೃಕ್ಷ' ಕಾದಂಬರಿಯನ್ನು ಓದಿದ್ದಳೆಂಬ ಪ್ರಸ್ತಾಪವೂ ಬರುತ್ತದೆ.) ಬಿ. ವೆಂಕಟಾಚಾರ್ಯರ ಕಾದಂಬರಿಗಳನ್ನು ಓದಿದವರು 'ಹೆಗ್ಗಡಿತಿ'ಯಲ್ಲಿ ಬರುವ ಈ ಸಾಲುಗಳೊಂದಿಗೆ ತುಲನೆ ಮಾಡಬಹುದು:

> 'ಬೇಸಗೆಯ ಮಧ್ಯಾಹ್ನದ ಸೂರ್ಯನ ತಪ್ತ ತಾಮ್ರ ಬಿಂಬವು ಕಠೋರ ನಿಷ್ಕಾರುಣ್ಯದಿಂದ ಕರೆಯುತ್ತಿದ್ದ ಪ್ರಖರ ಕಿರಣ ವರ್ಷದಲ್ಲಿ ದಟ್ಟವಾಗಿ ಕಾಡು ಬೆಳೆದು ತೆರೆತೆರೆಯಾಗಿ ಹಬ್ಬಿದ್ದ ಮಲೆನಾಡಿನ ಬೆಟ್ಟಗುಡ್ಡಗಳು ಆಯಾಸದಿಂದ ಮೂರ್ಛೆಗೊಂಡಂತೆ ಶ್ಯಾಮಲ ನಿದ್ರಾಸಕ್ತವಾಗಿದ್ದುವು. ಧೂಳುಗೆಂಪಿನ ರಸ್ತೆ ಸಹ್ಯಾದ್ರಿಯ ಅರಣ್ಯದೇವಿಯ ಮಹಾಮಸ್ತಕದ ಸುದೀರ್ಘವಾದ ಬೈತಲೆಯ ಸರಳ ವಕ್ರ ನಿಮ್ನೋನ್ನತ ರೇಖಾ ವಿನ್ಯಾಸದಂತೆ ಮೆರೆದಿತ್ತು...'
>
> (ಕಾನೂರು ಹೆಗ್ಗಡಿತಿ, ೧೫-೧೬, ಏಳನೆಯ ಮುದ್ರಣ)

ನಿಸರ್ಗದ ಸಾನ್ನಿಧ್ಯದಲ್ಲಿ ಕುವೆಂಪುರವರ ಗದ್ಯವೂ ಕಾವ್ಯವಾಗುತ್ತದೆ. ಅವರ ಪ್ರಕೃತಿ ಪ್ರೇಮ ಉತ್ಕಟವಾಗಿ, ರಾಗೋಜ್ಜ್ವಲವಾಗಿ, ಪುಂಖಾನುಪುಂಖವಾಗಿ ಗದ್ಯದಲ್ಲಿ ಪ್ರಕಟವಾಗುವ ಪರಿ ವಿಸ್ಮಯ ಹುಟ್ಟಿಸುತ್ತದೆ. ಅವರ ಪ್ರಾರಂಭದ ಕೃತಿ 'ಮಲೆನಾಡಿನ ಚಿತ್ರಗಳು' — ಎಂಬುದರಿಂದಲೇ ಒಂದು ಉದಾಹರಣೆ ಕೊಡಬಹುದು :

> 'ನಾವು ನಿಂತ ಸ್ಥಳ ಎತ್ತರವಾಗಿತ್ತು. ಸುಮಾರು ಮೂವತ್ತು ಮೈಲಿಗಳ ದೃಶ್ಯ ನಮ್ಮೆದುರಿಗಿತ್ತು. ದಿಗಂತ ವಿಶ್ರಾಂತವಾದ ಸಹ್ಯಾದ್ರಿ ಪರ್ವತ ಶ್ರೇಣಿಗಳು ತರಂಗ ತರಂಗಗಳಾಗಿ ಸ್ಪರ್ಧೆಯಿಂದ ಹಬ್ಬಿದ್ದುವು. ದೂರ ಸರಿದಂತೆಲ್ಲ ಅಸ್ಫುಟವಾಗಿ ತೋರುತ್ತಿದ್ದುವು. ಕಣಿವೆಯಲ್ಲಿ ಇಬ್ಬನಿಯ ಬಲ್ಗಡಲು ತುಂಬಿತ್ತು. ವೀಚಿವಿಕ್ಷೋಭಿತ ಶ್ವೇತಫೇನಾವೃತ ಮಹಾವಾರಿಧಿಯಂತೆ ಪಸರಿಸಿದ್ದ ತುಷಾರ ಸಮುದ್ರದಲ್ಲಿ ಶ್ಯಾಮಲ ಗಿರಿಶೃಂಗಗಳು ದ್ವೀಪಗಳಂತೆ ತಲೆಯೆತ್ತಿಕೊಂಡಿದ್ದುವು... ಬಾಲ ಸೂರ್ಯನ ಸ್ನಿಗ್ಧ ಕೋಮಲ ಸುವರ್ಣಜ್ಯೋತಿಯಿಂದ ವೃಕ್ಷರಾಜಿಗಳ ಶ್ಯಾಮಲ ಪರ್ಣ ವಿತಾನಗಳಲ್ಲಿ ಖಚಿತವಾಗಿದ್ದ ಸಹಸ್ರ ಸಹಸ್ರ ಹಿಮಮಣಿಗಳು ಅನರ್ಘ್ಯ ರತ್ನ ಸಮೂಹಗಳಂತೆ ವಿರಾಜಿಸುತ್ತಿದ್ದುವು. ಬೆಳ್ನೊರೆಯಂತೆ ಹಬ್ಬಿದ ಇಬ್ಬನಿಯ ಕಡಲಿನಲ್ಲಿ ಮುಳುಗಿಹೋಗಿದ್ದ ಕಣಿವೆಯ ಕಾಡುಗಳಿಂದ ಕೇಳಿಬರುತ್ತಿದ್ದ ವಿವಿಧ ವಿಹಂಗಮಗಳ ಮಧುರವಾಣಿ ಅದೃಶ್ಯರಾಗಿ ಉಲಿಯುವ ಗಂಧರ್ವಕಿನ್ನರರ ಗಾಯನದಂತೆ ಸುಮನೋಹರವಾಗಿತ್ತು. ನಾವು ಮೂವರೂ ಅವಾಕ್ಕಾಗಿ ನಿಂತು ನೋಡಿದೆವು! ನೋಡಿದೆವು. ನೋಡಿದೆವು. ಸುಮ್ಮನೆ ಭಕ್ತಿಯಿಂದ, ಭಾವಾವಿಷ್ಟರಾಗಿ!'
>
> (ಮಲೆನಾಡಿನ ಚಿತ್ರಗಳು / ಕಾಡಿನಲ್ಲಿ ಕಳೆದ ಒಂದಿರುಳು /
> ಪುಟ ೪೧-೪೨, ಒಂಬತ್ತನೆಯ ಮುದ್ರಣ)

ಹೀಗೆ ಅಸಾಮಾನ್ಯ ಅನುಭವಗಳನ್ನು ವಿವರಿಸುವ ಸಂದರ್ಭಗಳಲ್ಲಿ, ಭಾವನೆಗಳ ತುರೀಯ ಸ್ಥಿತಿಯನ್ನು ಓದುಗರಿಗೆ ತಲುಪಿಸಬೇಕಾದ ಸನ್ನಿವೇಶಗಳಲ್ಲಿ ಕುವೆಂಪುರವರು ವಿಪುಲವಾಗಿ ಸಂಸ್ಕೃತ ಪದಗಳನ್ನು ಬಳಸುತ್ತಾರೆ. ಅವುಗಳ ಜೊತೆಜೊತೆಯಾಗಿಯೇ

ಬಳಕೆಯಿಂದ ಸವೆದುಹೋಗಿಲ್ಲದ ಕನ್ನಡ ಪದಗಳನ್ನೂ (ಮೇಲಿನ ಉದಾಹರಣೆಯಲ್ಲಿ 'ಬಲ್ಗಡಲು', 'ಬೆಳ್ನೊರೆ' ಇತ್ಯಾದಿ) ಉಪಯೋಗಿಸಿ, ಭಾಷೆಯ ಸಂವಹನಕ್ಷಮತೆಯನ್ನು ತೀವ್ರಗೊಳಿಸುವುದು ಕುವೆಂಪುರವರ ವೈಶಿಷ್ಟ್ಯ. ಸಂಸ್ಕೃತ ಸಾಹಿತ್ಯದಲ್ಲಿ ಬಾಣಭಟ್ಟ, ಇಂಗ್ಲಿಷ್ ಕವಿಗಳಲ್ಲಿ ಕೀಟ್ಸ್ ಭಾಷೆಯ ಮೂಲಕ ಐಂದ್ರಿಯಿಕಾನುಭವಗಳನ್ನು ಸಂವಹನಗೊಳಿಸುವಲ್ಲಿ ಯಶಸ್ವಿಯಾಗಿರುವಂತೆ ಕನ್ನಡದಲ್ಲಿ ಕುವೆಂಪು ಸಫಲರಾಗಿದ್ದಾರೆ.

ಶ್ರೇಷ್ಠ ಸೃಜನಶೀಲ ಲೇಖಕನ ಕೈಯಲ್ಲಿ ಭಾಷೆ ಮೇಣದಂತೆ ನಮ್ಯವಾಗುತ್ತದೆ; ಅದರಿಂದ ಯಾವುದೇ ಆಕೃತಿಗಳೂ ಹೊರಹೊಮ್ಮುತ್ತವೆ; ಅಮೂರ್ತಕ್ಕೆ ಮೂರ್ತರೂಪ ಬರುತ್ತದೆ, ಮಲೆನಾಡಿನ ಚಿತ್ರಗಳಲ್ಲಿ ಕುವೆಂಪು ತಾವು ಅರಣ್ಯದಲ್ಲಿ ಆಕಸ್ಮಿಕವಾಗಿ ಕಂಡ ಒಂದು ಗೋಧಿನಾಗರವನ್ನು ವರ್ಣಿಸುವ ಸಂದರ್ಭವನ್ನೇ ನೋಡೋಣ :

> 'ಆ ಪಕ್ಷಿ ಕೂಜನದಿಂದ ಮನೋಹರವಾದ ಕಾಡಿನಲ್ಲಿ, ಹೆಮ್ಮರಗಳ ಜೀಡಿನಲ್ಲಿ, ಮತ್ತೆ ಹಾಸಗೆಯಂತೆ ಕೋಮಲವಾಗಿ ಬೆಳೆದ ಹಸುರು ಹುಲ್ಲಿನ ಕಿರುಬಯಲಿನಲ್ಲಿ, ವಸಂತ ಸೂರ್ಯೋದಯದ ಹೊಂಬಿಸಿಲಿನಲ್ಲಿ ಸುರಂಜಿತವಾಗಿ ಹೆಡೆಯೆತ್ತಿ ನಿಂತಿದೆ ಒಂದು ಸರ್ಪ. ರಾಜಸರ್ಪ! ಗೋಧಿಯ ಬಣ್ಣದ ಅದರ ತನುಕಾಂತಿ ಎಳಬಿಸಿಲಿನಲ್ಲಿ ಹೊಳೆಯುತ್ತಿತ್ತು. ಅದರ ಅರ್ಧದೇಹ ಪಸಲೆಯ ಮೇಲೆ ವಕ್ರಾಕಾರವಾಗಿ ಹೊರಳು ತ್ತಿತ್ತು. ಇನ್ನರ್ಧ ನಿಮಿರಿ ನಿಂತು ಗಾಳಿಯಲ್ಲಿ ಬಳುಕುತ್ತಿತ್ತು. ಅದರ ಹೆಡೆ ಮೂರುನಾಲ್ಕು ಅಡಿಗಳಷ್ಟು ಎತ್ತರವಾಗಿ ನಿಂತು ಎಡಕ್ಕೂ, ಬಲಕ್ಕೂ, ಹಿಂದಕ್ಕೂ ಮುಂದಕ್ಕೂ ವಿಶ್ರಾಂತಿಯಿಲ್ಲದೆ ಒಲೆಯುತ್ತಿತ್ತು. ಫಣೆಯಲ್ಲಿ ಕಪ್ಪು ಬಣ್ಣದ 'ಳ' ಕಾರವು ತನ್ನದೇ ಒಂದು ಠೀವಿಯಿಂದ, ತನ್ನದೇ ಒಂದು ಬಿಂಕದಿಂದ ಪ್ರಕಾಶಿಸುತ್ತಿತ್ತು... ನಾಗರಹಾವು ಬಿಂಕದಿಂದ ಕೊಂಕಿದ ತನ್ನ ಹೆಡೆಯನ್ನು ಮುಂದೆಸೆಯಲು ನಾಯಿ ಹಿಂದಕ್ಕೆ ಹಾರು ವುದು; ಹಾವು ಹೆಡೆಯನ್ನು ಹಿಂದಕ್ಕೆಸೆಯಲು ಅದು ಮುಂದೆ ಹಾರುವುದು. ಒಮ್ಮೆ ಎಡಕ್ಕೆ ಜಿಮ್ಮುವುದು; ಒಮ್ಮೆ ಬಲಕ್ಕೆ ನೆಗೆಯುವುದು; ಚಲಿಸಿದಂತೆ ಹೆಗ್ಗೊರಳಿನಿಂದ ಬಗುಳುವುದು. ಅಂತೂ ಪ್ರಾಣಿಗಳೆರಡೂ ಮಲೆತು ಎದುರುಬದರಾಗಿ ನಿಂತಿದ್ದವು...'
>
> (ಮಲೆನಾಡಿನ ಚಿತ್ರಗಳು/ಹಾಸ್ಯದ ಚಟಾಕಿ/ಪುಟ ೨೩-೨೪. ೯ನೇ ಮುದ್ರಣ)

ಈ ಪ್ಯಾರಾದಲ್ಲಿನ ವಾಕ್ಯರಚನಾ ಕ್ರಮವನ್ನು ಗಮನಿಸಬೇಕು. ಇಲ್ಲಿನ ಮೊದಲ ವಾಕ್ಯ ಉಳಿದೆಲ್ಲವುಗಳಿಗಿಂತ ದೀರ್ಘವಾಗಿದ್ದು, ನೀಳದೇಹದ ರಾಜಸರ್ಪವನ್ನು ಪ್ರತಿನಿಧಿಸುವಂತಿದೆ ಓದುಗನ ನೋಟ ದಟ್ಟಕಾಡಿನ ಉನ್ನತ ವೃಕ್ಷಗಳ ತುದಿಯಿಂದ ಹಂತಹಂತವಾಗಿ ಕೆಳಕ್ಕಿಳಿದು, ಹಠಾತ್ತಾಗಿ ಗೋಧಿ ನಾಗರವನ್ನು ದರ್ಶಿಸುತ್ತದೆ. ಆ ಹಾವಿನ ಭೀಕರ - ಮನೋಹರ ಆಕೃತಿಯನ್ನು ಮುಂದಿನ ವಾಕ್ಯಗಳು ನಮ್ಮ ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತವೆ. ಮುಂದೆಬರುವ ಹ್ರಸ್ವವಾಕ್ಯಗಳಲ್ಲಿ ಮುಖಾಮುಖಿಯಾಗಿ ಮಲೆತು ನಿಂತ ಸರ್ಪ ಶ್ವಾನಗಳ ಚಲನವಲನಗಳು ಸಾಭಿನಯವಾಗಿ ಕಾಣಿಸಿಕೊಳ್ಳುತ್ತವೆ. ಇದು ಕುವೆಂಪುರವರ ಸೃಜನಶೀಲ ಗದ್ಯದ ವೈಶಿಷ್ಟ್ಯ.

ಚಿತ್ರಕ ಶಕ್ತಿ ಕುವೆಂಪುರವರ ಗದ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ಅನೇಕ ಸಂದರ್ಭಗಳಲ್ಲಿ ಕುವೆಂಪು 'ಸಚಿತ್ರ'ವಾಗಿ ಬರೆಯುವುದನ್ನು ಗಮನಿಸಬಹುದು. ಮಲೆನಾಡಿನಲ್ಲಿ ಹಿಂದೊಂದು ಕಾಲದಲ್ಲಿ ಬೀಳುತ್ತಿದ್ದ ಮಳೆಯ ವರ್ಣನೆ 'ಕಾನೂರು ಹೆಗ್ಗಡಿತಿ'ಯಲ್ಲಿ ಚಿತ್ರಿತವಾದ ರೀತಿ ಅದ್ಭುತ ಮಾತ್ರವಲ್ಲ, ಅನನ್ಯವೆನ್ನಿಸುವಂಥದು :

'... ಗಗನದಲ್ಲಿ ಕಿಕ್ಕಿರಿದು ಉನ್ಮತ್ತ ರಭಸದಿಂದ ಚಲಿಸುತ್ತಿದ್ದ ಕರ್ಮುಗಿಲು, ಕ್ಷಣ ಕ್ಷಣಕ್ಕೂ ರೇಖಾರೂಪದ ಅಗ್ನಿಪ್ರವಾಹದಂತೆ ಕಾಳಮೇಘಗಳ ಮಧ್ಯೆ ಮಧ್ಯೆ ಶಾಖೋಪಶಾಖೆಗಳ ಲತಾ ವಿನ್ಯಾಸದಿಂದ ತಟಕ್ಕನೆ ಹೊಮ್ಮಿ ಹರಿದು ಕಣ್ಣು ಕೋರೈಸಿ, ಮಾಯವಾಗುತ್ತಿದ್ದ ಮಿಂಚು, ಒಡನೆಯೇ ಕಿವಿ ಬಿರಿಯುವಂತೆ ಕೇಳಿಬರುತ್ತಿದ್ದ ಗುಡುಗು ಸಿಡಿಲುಗಳ ಭಯಂಕರ ಧ್ವಾನ, ಉನ್ಮಾದಗ್ರಸ್ತನಾಗಿ, ರುದ್ರಪ್ರಲಯ ಕರ್ದುಮುಖನಾದ ನಿರಾಕಾರ ರಾಕ್ಷಸನಂತೆ ಭೋರೆಂಬ ಘೋರನಾದದಿಂದ ಸುತ್ತಮುತ್ತಣ ತುಂಗ ವೃಕ್ಷ ಸಮೂಹದ ಅರಣ್ಯಶ್ರೇಣಿಗಳನ್ನು ನಿರ್ದಯೆಯಿಂದ ಮುರಿದು ಮಥಿಸುತ್ತಿದ್ದ ಕಾರ್ಗಾಲದ ಬಿರುಸು ಬಿರುಗಾಳಿ, ಬಾನು ಭೂಮಿಗಳಿಗಿದ್ದ ಪ್ರತ್ಯೇಕತೆಯನ್ನು ಅಳಿಸುವಂತೆ ಅವಿಚ್ಛಿನ್ನ ಧಾರಾ ಪ್ರವಾಹದಿಂದ ನಾಡನ್ನೆಲ್ಲ ಯವನಿಕಾವೃತವಾದಂತೆ ಮಸಗು ಮಾಡಿದ್ದ ಭೀಷಣ ವರ್ಷ ಸೌಂದರ್ಯ, ಪಳಪಳನೆ ಸುರಿದು ನೆಲವನ್ನೆಲ್ಲ ತುಂಬುತ್ತಿದ್ದ ಬಿಳಿಯ ಹೇರಾಲೆ ಕಲ್ಲುಗಳ ರಮಣೀಯತೆ...'

ಒಂದೇ ಸಮನೆ ರಪರಪನೆ ಸುರಿಯುತ್ತಿದ್ದ ಮಲೆನಾಡಿನ ಮಳೆಯನ್ನು, ಅದರ ಸಮಸ್ತ ಸನ್ನಿವೇಶ ವಿವರಗಳೊಂದಿಗೆ ಓದುಗರ ಸರ್ವೇಂದ್ರಿಯ ಅನುಭವದ ತೆಕ್ಕೆಗೆ ಸಿಕ್ಕುವಂತೆ ಕುವೆಂಪು ವರ್ಣಿಸಿದ್ದಾರೆ. ಮಲೆನಾಡಿನ ಬದುಕು ಸಮೃದ್ಧಿಯ ನಡುವೆಯೂ ದಾರಿದ್ರ್ಯವನ್ನು ಅನುಭವಿಸುವ ಸೌಂದರ್ಯದ ಮಧ್ಯದಲ್ಲಿಯೂ ಬೀಭತ್ಸವನ್ನೇ ಆಸ್ವಾದಿಸುವ ಬದುಕಾಗಿತ್ತೆಂಬುದನ್ನು ಕುವೆಂಪು ಸ್ವತಃ ಬಲ್ಲವರಾಗಿದ್ದರು. ಮಲೆನಾಡಿನ ಅಸಂಸ್ಕೃತಿ ಎಷ್ಟಿತ್ತೆಂಬುದನ್ನು ತೋರಿಸಲು 'ಕಾನೂರು ಹೆಗ್ಗಡಿತಿ'ಯ ಅಮುಖ್ಯಪಾತ್ರಗಳಲ್ಲಿ ಒಂದಾದ 'ನಂಜ' ಎಂಬಾತನನ್ನು ಕುರಿತು ಕುವೆಂಪು ಒಂದು 'ನುಡಿಚಿತ್ರ'ವನ್ನೇ ಕೊಟ್ಟಿದ್ದಾರೆ:

'ಹುಲ್ಲು ಗುಡಿಸಿಲಿನ ಕಿರುಬಾಗಿಲಿನಲ್ಲಿ ಒಳಗರ್ಧ ಹೊರಗರ್ಧ ದೇಹ ಮಾಡಿಕೊಂಡು ಹೊಸ್ತಿಲ ಮೇಲೆ ಒಂದು ಕಾಲಿಟ್ಟು, ಬಾಗಿಲ ಎರಡು ನಿಲುವುಗಳನ್ನೂ ಎರಡು ಕೈಯಿಂದಲೂ ಹಿಡಿದು ಬಿಲ್ಲಿನಂತೆ ಬಾಗಿ ನಿಂತಿದ್ದ ನಂಜನು ಹಾಕಿಕೊಂಡಿದ್ದ ತಾಂಬೂಲದ ಕೆಂಪು ಉಗುಳನ್ನು ಬಾಗಿಲಿನ ಒಂದು ಹೊರಭಾಗದ ಪಕ್ಕಕ್ಕೆ ಬಾಣದಂತೆ ಪಿಚಕ್ಕನೆ ಉಗುಳಿ, ಗಂಟಲು ಸರಿಮಾಡಿಕೊಳ್ಳಲೆಂಬಂತೆ ಕಮ್ಮುತ್ತ, ಆಮೆಯ ತಲೆ ಅದರ ದೇಹದಲ್ಲಿ ಹುದುಗುವಂತೆ ಗುಡಿಸಿಲೊಳಗೆ ಹೋದನು. ಹುಲ್ಲು, ತರಗು, ಕಬ್ಬಿನ ಸಿಪ್ಪೆ, ಮಡಕೆ ಚೂರು, ಕಂಬಳಿ, ಚಿಂದಿ ಮೊದಲಾದ ಪದಾರ್ಥ ಮತ್ತು ಪದಾರ್ಥಶೇಷಗಳು ಅಸ್ತವ್ಯಸ್ತವಾಗಿ ಕಿಕ್ಕಿರಿದು ಹರಡಿದ್ದ ಆ ಗುಡಿಸಿಲಿನ ಅಂಗಳದಲ್ಲಿ, ಅಥವಾ ಅಂಗಳ ಎಂಬ ಹೆಸರಿನ ಸ್ಥಾನದಲ್ಲಿ ನಂಜನ ಎಂಜಲಿಗೂ ಸ್ಥಳ ಸಿಕ್ಕಿ, ಒಂದಷ್ಟು ಜಾಗ ಕೆಂಪಾಯಿತು. ಉಗುಳು ಬಿದ್ದ ಜಾಗದಿಂದ ಕೆಂಪು ನೊಣಗಳು ಗೊಂಯ್ಯೆಂದು ಹಾರಿ ಮತ್ತೆ ಕೂತುವು.'

(ಕಾನೂರು ಹೆಗ್ಗಡಿತಿ / ಪು ೨೨ / ಏಳನೆಯ ಮುದ್ರಣ)

ಕುವೆಂಪುರವರ ಅವಲೋಕನಾಶಕ್ತಿ ಹಾಗೂ ಅಭಿವ್ಯಕ್ತಿ ಸಾಮರ್ಥ್ಯ — ಎರಡಕ್ಕೂ ಮೇಲಿನ ಪ್ಯಾರಾ ಸಾಕ್ಷಿ ಹೇಳುತ್ತದೆ.

'ಕಾನೂರು ಹೆಗ್ಗಡಿತಿ' ರಚಿತವಾಗಿ ಸುಮಾರು ಮೂವತ್ತು ವರ್ಷಗಳ ನಂತರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಕುವೆಂಪು ರಚಿಸಿದರು. ಈ ಅವಧಿಯಲ್ಲಿ

ಮಲೆನಾಡಿನ ನೇರ ಸಂಪರ್ಕದಿಂದ ಅವರು ಸಾಕಷ್ಟು ದೂರವಿದ್ದರು. ಆದರೂ ಈ ಕಾದಂಬರಿಯಲ್ಲಿ ಅವರು ಶುದ್ಧ ಗ್ರಾಮೀಣ ನುಡಿಕಟ್ಟಿನಿಂದ ಕೂಡಿದ ಭಾಷೆಯನ್ನು ಸಂದರ್ಭೋಚಿತವಾಗಿ ಬಳಸಿ, ಕಾದಂಬರಿಯ ಆವರಣವನ್ನು ಜೀವಂತವಾಗಿಡುತ್ತಾರೆ. ಅಲ್ಲಿ ಕಾಣಿಸಿಕೊಳ್ಳುವ ನಾಯಿಗುತ್ತಿ – ತಿಮ್ಮಿ, ಐತ – ಪಿಂಚಲು, ಮುಕುಂದಯ್ಯ, ಕ್ರಿಶ್ಚಿಯನ್ ಪಾದ್ರಿ ಜೀವರತ್ನಯ್ಯ, ಲುಂಗೀಸಾಬು ಹೀಗೆ ಪ್ರತಿಯೊಬ್ಬರ ಪಾತ್ರ ಬಂದಾಗಲೂ ಅವರವರ ಆವರಣ, ವ್ಯಕ್ತಿತ್ವ, ಪರಂಪರೆ, ಮನೋಧರ್ಮಗಳಿಗೆ ಸೂಕ್ತವಾದ ಭಾಷೆಯನ್ನು ಕುವೆಂಪು ಉಪಯೋಗಿಸುತ್ತಾರೆ. ಮಲೆನಾಡಿನ ಗ್ರಾಮೀಣ ನುಡಿಗಟ್ಟನ್ನು ಪ್ರತಿನಿಧಿಸುವ ಒಂದು ಉದಾಹರಣೆಯನ್ನು ಗಮನಿಸಬಹುದು:

> "ಕೋಣೂರಿನಲ್ಲಿದ್ದುಕೊಂಡು ಐಗಳ ಕೂಲಿಮಠದಲ್ಲಿ ಓದುತ್ತಿದ್ದ ಹುಡುಗರೆಲ್ಲ ಬೇಗಗ್ಗೆ ಗಂಜಿಯುಂಡಾದ ಮೇಲೆ ಎಂದಿನಂತೆ ಕೆಳಗರಡಿಗೆ ಬಂದರು. ಹಲಗಣೆಯ ಕಂಡಿಯಲ್ಲಿ ನೋಡಿದಾಗಲೆ ಅವರಿಗೆ ನೆನಪಾದದ್ದು.
> "ಓಹೋ, ಇವತ್ತು ಆಡಿಕೆ ಕಣ್ರೋ, ಐಗಳು ಇಲ್ಲ"
> "ಮುಂದಿನ ಬೇಸ್ತುವಾರದ ತನಕ ಅಲ್ಲೇನೋ ಆಡಿಕೆ!"
> "ಬೇಸ್ತುವಾರದ ತನಕ ಅಂತಾನೆ! ಆಯಿತುವಾರದ ತನಕ ಕಣೋ!"
> "ಬನ್ರೋ, ಲಗ್ಗೆಮಣೆ ಆಡಾನ!"
> "ನೀವೆಲ್ಲಾ ಕಣಕ್ಕೆ ಹೋಗ್ರೋ, ನಾ ಲಗ್ಗೆ ಚೆಂಡು ಮಣೆ ಹುಡುಕಿ ತರ್ತೀನಿ..."
> (ಮಲೆಗಳಲ್ಲಿ ಮದುಮಗಳು / ಪು. ೨೫೬ / ನಾಲ್ಕನೆಯ ಮುದ್ರಣ)

ಇಲ್ಲಿ ಬರುವ ಮಲೆನಾಡಿನ ಅಪ್ಪಟ ಗ್ರಾಮೀಣ ಭಾಷೆ ಕಾದಂಬರಿಯ ಪರಿಸರಕ್ಕೆ ಅಧಿಕೃತತೆಯನ್ನು ಒದಗಿಸುತ್ತದೆ. 'ಐಗಳ ಕೂಲಿಮಠ', 'ಹಲಗಣೆ', 'ಆಡಿಕೆ', 'ಬೇಸ್ತುವಾರ', 'ಆಯಿತುವಾರ', 'ಲಗ್ಗೇಮಣೆ' ಮುಂತಾದ ಪದಗಳೂ, 'ಅಂತಾನೆ', 'ಆಡಾನ'— ಇತ್ಯಾದಿ ಕ್ರಿಯಾಪದಗಳೂ ಪ್ರಾದೇಶಿಕತೆಯ ತಾಜಾತನದ ಸೊಗಡಿನಿಂದ ಕಾದಂಬರಿಯನ್ನು ಜೀವಂತವಾಗಿರಿಸಿವೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಪದೇಪದೇ ಕಾಣಬರುವ ಪ್ರಕೃತಿವರ್ಣನೆ 'ಮಲೆಗಳಲ್ಲಿ ಮದುಮಗಳು'ವಿನಲ್ಲಿ ಮಿತಪ್ರಮಾಣದಲ್ಲಿದೆ. ಇಲ್ಲಿ ಕಾದಂಬರಿಕಾರರು ಮಾನವ ಲೋಕದ ಸಮಸ್ಯೆಗಳ ವಿಶ್ಲೇಷಣೆಗೇ ಹೆಚ್ಚು ಮಹತ್ವ ಕೊಟ್ಟಿರುವುದರಿಂದ ಇಲ್ಲಿ ಬಳಸಿದ ಭಾಷೆಯಲ್ಲಿ ಕೂಡ ಮಣ್ಣಿನವಾಸನೆ ಕಾಣಬರುತ್ತದೆ. ಕಾದಂಬರಿಯು ಚಿತ್ರಿಸುವ ಸಮಾಜದ ಬೇರೆ ಬೇರೆ ಸ್ತರಗಳ ಜನ ಉಪಯೋಗಿಸುವ ಭಾಷೆಯಲ್ಲಿನ ವೈವಿಧ್ಯ ವ್ಯತ್ಯಾಸಗಳನ್ನೂ ಕುವೆಂಪು ಸೊಗಸಾಗಿ ಉಪಯೋಗಿಸಿಕೊಂಡಿದ್ದಾರೆ.

ಕುವೆಂಪುರವರ ಗದ್ಯದಲ್ಲಿ ಭಾವ ಮತ್ತು ವಿಚಾರಗಳ ಸಹಜಮೈತ್ರಿ ಸಾಧಿತವಾಗಿದೆ — ಎಂಬ ಮಾತನ್ನು ಈ ಮೊದಲೇ ಹೇಳಿದೆ. ಇದಕ್ಕೊಂದು ನಿದರ್ಶನವನ್ನು ಕೊಡಬಹುದು :

> 'ಹೊಸತೆಂಬುದು ಹಳೆಯನ್ನು ತ್ಯಜಿಸಿ ನಿಲ್ಲುವುದೆಂದು ಯಾರೂ ತಿಳಿಯಬಾರದು. ಶಿಶು ತಾಯಿಯನ್ನು ಅಲ್ಲಗಳೆದು ಹೇಗೆ ಬದುಕಲಾರದೋ, ಮನೆ ತಳಹದಿಯನ್ನು ತಿರಸ್ಕರಿಸಿ ಹೇಗೆ ಬಹುಕಾಲ ನಿಲ್ಲಲಾರದೊ, ಹಾಗೆಯೇ ಅರ್ವಾಚೀನವು ಪ್ರಾಚೀನವನ್ನು ಅಸಡ್ಡೆ ಮಾಡಿ ಬಾಳಲಾರದು. ಸನಾತನ ಸಾರವನ್ನು ಹೀರಿಕೊಂಡೆ ನೂತನ ಬೆಳೆಯಬೇಕು. ವರ್ತಮಾನ ಕಾಲ ಭೂತಕಾಲದ ನೆಲೆಗಟ್ಟಿನ ಮೇಲೆ ನಿಂತಿದೆ. ಇಂದು ನಿನ್ನೆಗೆ

ಋಣಿ; ನಾಳೆ ಇಂದಿಗೆ ಋಣಿ. ಒಂದನ್ನೊಂದು ಎಂದಿಗೂ ಸಂಪೂರ್ಣ ತ್ಯಜಿಸಲಾರವು. ಹಾಗೆಯೆ ಇಂದಿನ ಸಾಹಿತ್ಯ ಹಿಂದಿನ ಸಾಹಿತ್ಯವನ್ನು ಎಷ್ಟು ಮಾತ್ರಕ್ಕೂ ಅಲ್ಲಗಳೆಯುವುದಿಲ್ಲ... '


('ಸಾಹಿತ್ಯ ಪ್ರಚಾರ'/ ೮-೧೧-'೩೦ರಲ್ಲಿ ಶಿವಮೊಗ್ಗೆಯ ಕರ್ನಾಟಕ ಸಂಘದ ಆರಂಭೋತ್ಸವದಲ್ಲಿ ಮಾಡಿದ ಭಾಷಣ)

ಇದು ಚಿಂತನಶೀಲ ಇಲ್ಲವೇ ವೈಚಾರಿಕ ಗದ್ಯಕ್ಕೆ ಮಾದರಿಯಂತಿದೆ. ಇಲ್ಲಿನ ಗದ್ಯದಲ್ಲಿ ಒಂದು ವಿಶಿಷ್ಟಲಯವಿದೆ; ತರ್ಕಬದ್ಧತೆಯಿದೆ; ಖಚಿತವೂ ಪಾರದರ್ಶಕವೂ ಆಗಿರುವ ಆಲೋಚನಾ ಸರಣಿಯ ಸ್ಪಷ್ಟ ಅಭಿವ್ಯಕ್ತಿಯಿದೆ. ಇಂಥದೊಂದು ಗದ್ಯಶೈಲಿಯನ್ನು ೧೯೩೦ರಷ್ಟು ಹಿಂದೆಯೇ ಕುವೆಂಪು ಸಾಧಿಸಿದ್ದರೆಂಬುದೂ ಗಮನಾರ್ಹ.

ಆದರೆ ವಿಮರ್ಶೆ, ಕಾವ್ಯಮೀಮಾಂಸೆ ಮುಂತಾದವುಗಳನ್ನು ಕುರಿತಾದ ಗದ್ಯಲೇಖನಗಳನ್ನೂ ಕವಿ ಕುವೆಂಪು ಮೇಲ್ಗೈ ಪಡೆಯುವುದನ್ನು ಅನೇಕ ಸಂದರ್ಭಗಳಲ್ಲೂ ಕಾಣಬಹುದು. ಅರ್ಥಾತ್ ಅವರ ಭಾಷೆ ಶಾಸ್ತ್ರೀಯ ನಿಷ್ಕೃಷ್ಟತೆಯ ಸೀಮಾರೇಖೆಯನ್ನು ಮೀರಿ ಕಾವ್ಯದ ಹಾದಿಯತ್ತ ಹೊರಳುತ್ತದೆ. ಸಂಸ್ಕೃತ ಪದಗಳು ವಿಜೃಂಭಿಸುತ್ತವೆ. ಅನೇಕರಿಗೆ ಇಂಥ ಸಂದರ್ಭದಲ್ಲಿ ಕುವೆಂಪುರವರ ಗದ್ಯ ಶಬ್ದ ಲೋಲುಪವಾಗಿ 'ಪಾಂಪಸ್'(Pampus) ಆಗಿ ಕಾಣಿಸಿಕೊಂಡರೆ ಆಶ್ಚರ್ಯವಿಲ್ಲ. ಉದಾಹರಣೆಗೆ 'ರಸೋವೈಸಃ', 'ತಪೋನಂದನ' — ಮುಂತಾದ ಕೃತಿಗಳಲ್ಲಿನ ಕೆಲವು ಲೇಖನಗಳನ್ನು ಗಮನಿಸಬಹುದು.

'ಗದ್ಯವೆಂಬುದು ಕವಿ ಪ್ರತಿಭೆಯ ಒರೆಗಲ್ಲು' ಎಂಬ ಹಳೆಯ ಮಾತೊಂದಿದೆ. ಕುವೆಂಪು ಕಾವ್ಯ ಗದ್ಯಗಳೆರಡರ ಒರೆಗಲ್ಲಿನ ಪರೀಕ್ಷೆಯಲ್ಲೂ ಗೆಲುವು ಸಾಧಿಸಿದವರು. ''ವಾಸ್ತವವಾಗಿ ಭಾಷೆ ನಿರಂತರ ಸ್ರೋತ... ಪದ್ಯ ಜೀವಂತ ಭಾಷೆಯಿಂದ ಬಹುದೂರ ಹೋದರೆ ಸತ್ತುಹೋಗುತ್ತದೆ. ಹಾಗೆಯೇ ದಿನ ಬಳಕೆಯ ಭಾಷೆ ಪದ್ಯದ ರೋಮಾಂಚಕತೆಯ ಸ್ಪರ್ಶ ಪಡೆಯದೆ ಹೋದರೆ ತೀರ ವ್ಯಾವಹಾರಿಕವಾಗಿ, ಅನುಭವದ ದೃಷ್ಟಿಯಿಂದ ಮೃತವೆನ್ನಿಸಿಕೊಳ್ಳುತ್ತದೆ. ಈ ದೃಷ್ಟಿಯಿಂದಲೆ ಪದ್ಯದಿಂದ ಗದ್ಯ, ಗದ್ಯದಿಂದ ಪದ್ಯ ತಮ್ಮ ಜೀವಂತಿಕೆ, ರೋಮಾಂಚಕತೆಗಳನ್ನು ಉಳಿಸಿಕೊಳ್ಳಬೇಕು ಎನ್ನುವುದು'' — ಇದು ಡಾ|| ಜಿ.ಎಸ್. ಸಿದ್ಧಲಿಂಗಯ್ಯನವರ ಮಾತು (ಕುವೆಂಪು ಅವರ ಕಾವ್ಯ ಭಾಷೆ / ಶ್ರೀ ಕುವೆಂಪು / ಪುಟ ೧೮೫). ಕುವೆಂಪು ಅವರ ಗದ್ಯದ ಸ್ವರೂಪವನ್ನು ಕುರಿತು ಚಿಂತಿಸುವಾಗ ಈ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಳ್ಳಬೇಕು.

ವಿಳಾಸ : ೮೩/೧, ಫ್ಲಾಟ್ ೧೦೧, ಸುಂದರ್ ರೆಸಿಡೆನ್ಸಿ
ಕೃಷ್ಣ ಬ್ಲಾಕ್, ರಾಮರಾವ್ ಲೇಔಟ್, ಕತ್ರಿಗುಪ್ಪೆ
ಬನಶಂಕರಿ ೩ನೇ ಹಂತ, ಬೆಂಗಳೂರು - ೫೬೦ ೦೮೫



ಸಂಚಯ ಸಾಹಿತ್ಯ ಸ್ಪರ್ಧೆ 03

ಬಹುಮಾನಿತ ಕತೆ

ನಾನು ಮತ್ತು ಹನುಮಂತರಾಯ

ಪರಮೇಶ್ವರ ಪುರಾಣಿಕ

ನಮ್ಮ ಮನೆಯ ಬದಿಯ ಮನೆಗೆ ಅಂದರೆ ಫ್ಲಾಟಿಗೆ ಬಂದವರು ಬಹಳ ಸಭ್ಯಗೃಹಸ್ಥರೆಂದು ಅನಿಸುತ್ತದೆ. ಮನೆಯಲ್ಲಿ ನಾಲ್ಕೇ ಜನ. ತಂದೆ, ತಾಯಿ, ಮಗ ಮತ್ತು ಮಗಳು. ಮನೆಯ ಗೃಹಸ್ಥರು ಪಿಂಚಣಿದಾರರೆಂದೆನಿಸುತ್ತದೆ. ಮಗನು ಎಲ್ಲಿಯೋ ಕೆಲಸಕ್ಕೆ ಹೋಗುವದಿದೆ. ಮುಂಜಾವು ಏಂಟರ ಸುಮಾರಕ್ಕೆ ಹೊರಗೆ ಹೋದರೆ ರಾತ್ರಿಯೇ ಬರುತ್ತಾನೆ. ಮಗಳು ತೆಳ್ಳಗೆ, ಬೆಳ್ಳಗೆ ಇದ್ದು ಸುಂದರವಾಗಿದ್ದಾಳೆ. ಆದರೆ ಯಾಕೋ ಏನೋ ಅವಳು ದುಃಖಿ ಏನೋ ಎನಿಸುತ್ತದೆ. ಮನೆಯ ಒಡತಿಯನ್ನು ಕಾಣುವದೇ ಅಪರೂಪ. ಗುರುವಾರ ದಿನ ಮಾತ್ರ ತಪ್ಪದೇ ರಾಘವೇಂದ್ರರ ಮಠಕ್ಕೆ ಹೋಗುತ್ತಾರೆ. ಮನೆಯ ಮಗಳನ್ನು ನೋಡುವುದೇ ಅಸಾಧ್ಯ. ತನ್ನ ತಾಯಿಯ ಕೂಡ ಅವಳು ಮಠಕ್ಕಾಗಲಿ ಅಥವಾ ಗುಡಿಗಳಿಗಾಗಲಿ ಹೋಗುವದನ್ನು ನಾವು ಕಂಡಿಲ್ಲ. ಅವರ ಮನೆಯಲ್ಲಿ ಹೆಚ್ಚಿನ ವೇಳೆ ಮೌನವೇ ಇರುತ್ತಿತ್ತು. ಅವರು ಮತ್ತು ಅವರ ಮನೆಯ ವ್ಯವಹಾರ ಅದಿಬದಿಯ ಫ್ಲಾಟಿನವರೆಗೆ ನಿಗೂಢವಾಗಿಯೇ ಇತ್ತು. ಅವರು ಈ ಫ್ಲಾಟಿಗೆ ಬಂದಮೇಲೆ ಯಾವದೇ ಹಿಂದುವು ಆಚರಿಸಬಹುದಾದ ಸಾಮಾನ್ಯ ಹಬ್ಬಗಳನ್ನೂ ಅವರು ಆಚರಿಸುವದನ್ನು ನೋಡಿಲ್ಲ. ಮನೆಯಲ್ಲಿ ಯಾವದೋ ಆಘಾತವಾಗಿರಬಹುದೆಂದು ನನ್ನ ತಿಳುವಳಿಕೆ.

ದಿನದಿಂದ ದಿನಕ್ಕೆ ಆ ಮನೆಯವರ ಮೇಲೆ ನನ್ನ ಆಸ್ಥೆ ಹೆಚ್ಚಾಗ ತೊಡಗಿತು. ಅವರ ಸ್ನೇಹ ಸಂಪಾದಿಸಬೇಕು, ಅವರ ಮನೆಯಲ್ಲಿಯ ದುಗುಡ(?)ವನ್ನು ಪರಿಹರಿಸಬೇಕೆಂಬ ಬಯಕೆ ಉತ್ಕಟವಾಗ ತೊಡಗಿತು. ಅದರ ಮೊದಲ ಹಂತವಾಗಿ ಮನೆಯ ಎಲ್ಲರ ಹೆಸರುಗಳನ್ನು ಗೊತ್ತು ಮಾಡಿಕೊಂಡೆ. ಯಜಮಾನರ ಹೆಸರು ಎಚ್. ಹನಮಂತರಾವ್. ನಿವೃತ್ತರು. ಮಗನ ಹೆಸರು ಆನಂದ. ಮಗಳ ಹೆಸರು ರೋಹಿಣಿ. ಹನಮಂತರಾಯರ ಹೆಂಡತಿಯ ಹೆಸರು ಉಷಾ, ಉಷಾಬಾಯಿ. ಡೆಲ್ಲಿ ಮತ್ತು ಮದ್ರಾಸದಲ್ಲಿ ತಮ್ಮ ಸರ್ವಿಸನ್ನು ಪೂರೈಸಿ ನಿವೃತ್ತಿ ಪಡೆದು ಈಗ ಇಲ್ಲಿಗೆ ಬಂದಿದ್ದಾರೆ.



ಕೆಲವು ದಿನಗಳ ನಂತರ ಮುಂಜಾನೆ ಅವರು 'ವಾಕಿಂಗಿ'ಗೆ ಹೋಗುವ ವೇಳೆಯಲ್ಲಿ ನಾನೂ ಹೊರಟೆ. ಒಂದೆರಡು ದಿನ ಮಾತನಾಡಲು ಪ್ರಯತ್ನಿಸಿದೆ. ಅವರೂ ಮಾತನಾಡಿದರು. ಆದರೆ ಆತ್ಮೀಯತೆ ಬರಲಿಲ್ಲ. ಮಾತಿನಲ್ಲಿ ನಾನು ಕೇಳಿದ ವಿಷಯ ಮಾಹಿತಿ ಪ್ರಶ್ನೆಗಳಿಗೆ ಅವರಿಂದ ಯಾವ ಉತ್ತರವೂ ಬರಲಿಲ್ಲ. ನನ್ನ ಕೆಲವು ಪ್ರಶ್ನೆಗಳಿಗೆ ಮುಗುಳು ನಗೆಯೇ ಉತ್ತರವಾಗುತ್ತಿತ್ತು. ಅವರ ಕೂಡ ಅಡ್ಡಾಡಲು ಹೊರಡುವದರಿಂದ ಅವರ ಮನೆತನದ ವಿಷಯ ಸಂಗ್ರಹಣೆಯಾಗದಿದ್ದರೂ ಅವರ ನಡುಗೆಯ ವೇಗದಲ್ಲಿ ನಾನೂ ನಡೆದೂ ನಡೆದೂ ನನ್ನ ನಡುಗೆಯ ವೇಗ ಸುಧಾರಿಸಿತು. ಒಂದು ದಿನ ಅವರು ಅಡ್ಡಾಡಲು ಬರಲಿಲ್ಲ. ಆಮೇಲೆ ಅನೇಕ ದಿನ ಬರಲಿಲ್ಲ. ಅವರು ಅಡ್ಡಾಡಲು ಬರುತ್ತಿರಲಿಲ್ಲವೆಂದು ನಾನು ತಿಳಿದಿದ್ದೆ. ಆದರೆ ಅವರು ಅಡ್ಡಾಟವನ್ನು ಬಿಟ್ಟಿರಲಿಲ್ಲ. ವೇಳೆ ಬದಲು ಮಾಡಿದ್ದರು. ಮತ್ತೆ ಕೆಲವು ದಿನ ಅವರ ಮನೆಯ ವಿಷಯಗಳನ್ನು ತಿಳಿಯುವ ಯಾವ ಅವಕಾಶಗಳೂ ನನಗೆ ಕೂಡಿಬರಲಿಲ್ಲ. ಏನಾದರೂ ಮಾಡಿ ಅವರ ಮನೆಯ ವಿಷಯಗಳನ್ನು ಅರಿಯದೇ ಬಿಡಬಾರದೆಂಬ ನನ್ನ ಇಚ್ಛೆ ಜಾಗ್ರತವಾಗಿಯೇ ಇತ್ತು. ನಮ್ಮ ಅಪಾರ್ಟಮೆಂಟಿನ ಮ್ಯಾನೇಜರರಿಂದಾಗಲೀ ಅವರ ಮನೆಯ ಮಾಲಿಕರಿಂದಾಗಲೀ ಯಾವ ಹೆಚ್ಚಿನ ವಿಷಯ ಸಂಗ್ರಹವಾಗಲಿಲ್ಲ. ಹೆಂಡತಿಗೊಮ್ಮೆ ನನ್ನ ವಿಷಯ ಸಂಗ್ರಹದ ಇಚ್ಛೆಯ ಬಗ್ಗೆ ಹೇಳಿ ಅವಳ ಸಹಾಯವನ್ನು ಕೇಳದಾಗ ''ಅಯ್ಯಾ, ಮತ್ತೊಬ್ಬರ ಮನೆ ವಿಚಾರ ತಿಳಿಕೊಳ್ಳುದು ಸರಿ ಅಲ್ಲ. ಅವರು ಸಂಭಾವಿತರು. ತಮ್ಮ ಪೂರ್ತೆಕ ತಾವು ಇದ್ದಾರೆ. ತಮ್ಮ ಮನೆಗೆ ಅವರ ಮಗಳು ರೋಹಿಣಿ ಮತ್ತು ಉಷಾತಾಯಿ ಕುಂಕಮಕ್ಕ ಬಂದಿದ್ದರು. ನಾನೂ ಅವರ ಮನೆಗೆ ಹೋಗಿದ್ದೆ. ಅಂಥಾದು ಯಾವ ವಿಷಯ ಇಲ್ಲ. ಕೆಲವರು ಹೆಚ್ಚು ಮಾತನಾಡುವದಿಲ್ಲ, ಮತ್ತೊಬ್ಬರ ಕೂಡ ಹೆಚ್ಚು ಬೆರೆಯುವದಿಲ್ಲ. ಅಂದ ಮಾತ್ರಕ್ಕ ಅವರ ಮನೆಯೊಳಗೆ ಏನೋ ವಿಶೇಷವಿದೆಯೆಂದು ಯಾಕ ಭಾವಿಸಬೇಕು! ಅಲ್ಲದೆ ಅವರ ಮನೆ ವಿಷಯ ತಿಳಿದುಕೊಂಡು ನಮಗೇನಾಗಬೇಕಾಗೇದ ಸುಮ್ಮನ ಕೂಡ್ರಿ.'' ನನ್ನ ಹೆಂಡತಿಯ ಪಟಪಟ ಮಾತು ನನ್ನ ಉತ್ಸಾಹಕ್ಕೆ ನೀರೆರೆಚಿದಂತಾಯಿತು. ಹಾಗೂ ನಾನು ಮಾಡುತ್ತಿರುವ ಈ ಕೆಲಸ ಸರಿಯಲ್ಲವೆಂದು ಅನ್ನಿಸತೊಡಗಿತು. ನೇರವಾಗಿ ಅವರ ಮನೆಗೆ ಹೋಗಿ ನನ್ನ ಅನಿಸಿಕೆಗಳನ್ನು ಅವರ ಮುಂದೆ ಹೇಳಲೇ ಎಂದು ಅನಿಸಿದರೂ ಅವರು ತಪ್ಪಾಗಿ ಭಾವಿಸಿ ನನ್ನ ಕಪಾಳಮೋಕ್ಷ ಮಾಡಿದರೇ ಎಂಬ ವಿಚಾರದಿಂದ ಹೆದರಿ ಅವರ ಮನೆಗೆ ಹೋಗಲಿಲ್ಲ. ಮತ್ತೊಬ್ಬರ ಮನೆಯ ವಿಚಾರಗಳನ್ನು ತಿಳಿಯುವದು ಅವರ ಸುಖ-ದುಃಖದಲ್ಲಿ ಪಾಲುಗೊಳ್ಳುವದು, ನನ್ನ ಸುಖ-ದುಃಖಗಳಲ್ಲಿ ಅವರು ಪಾಲುಗೊಳ್ಳಬೇಕು ಎಂಬುದು ಈಗಿನ ಕಾಲಕ್ಕೆ ಅರ್ಥಹೀನವಾಗಿ ಕಂಡರೂ ನನಗೆ ಅದರಲ್ಲಿ ನಂಬಿಗೆ ಇದೆ. ಪರಿಚಯವಾದ ಕೆಲವೇ ದಿನಗಳಲ್ಲಿ ನಾನು ಪರಿಚಯದವರನ್ನು ಆತ್ಮೀಯರನ್ನಾಗಿ ಮಾಡಿಕೊಳ್ಳುತ್ತೇನೆ(ತಿಳಿದುಕೊಳ್ಳುತ್ತೇನೆ). ಅವರಿಗೆ ಬೇಕಾಗಲಿ, ಬಿಡಲಿ ನನ್ನ ಸಂಸಾರದ ಎಲ್ಲ ವಿಷಯಗಳನ್ನು ಹೇಳಿಬಿಡುತ್ತೇನೆ. ಅವರ ಸುಖ-ದುಃಖಗಳನ್ನು ನನ್ನಲ್ಲಿ ಹೇಳಿಕೊಳ್ಳಬೇಕೆಂದು ಆಶಿಸುತ್ತೇನೆ. ಮೊದಮೊದಲು ಇದು ಅತಿರೇಕವಾಗಿ ಕಂಡರೂ ಆಮೇಲೆ ನನ್ನ ಗುಣವನ್ನು ಮೆಚ್ಚಿದ್ದಾರೆ. ಆ ದಿನ ಸಾಯಂಕಾಲ ಪೇಟೆಗೆ ಹೋಗಿ ಬಂದಾಗ ನನ್ನ ಹೆಂಡತಿ, 'ನಿಮ್ಮ ಗೆಳೆಯ ಗೋವಿಂದರಾವ ಬಂದಿದ್ರು. ಮಂತ್ರಾಲಯಕ್ಕೆ ಹೋಗಿದ್ರಂತ. ಪ್ರಸಾದ, ಮಂತ್ರಾಕ್ಷತೆ ಕೊಟ್ಟು ಹೋಗ್ಯಾರ' ಅಂದಾಗ, 'ಆತು ಬಿಡು. ನಾಳೆ ಗುರುವಾರ ಸ್ನಾನಾ ಮಾಡಿ ತಗೋತೀನಿ' ಅಂತ ಹೇಳಿ, ಪ್ರಸಾದ ಮತ್ತು

ಮಂತ್ರಾಕ್ಷತೆಗಳನ್ನು ತೆಗೆದುಕೊಂಡು ಹನಮಂತರಾಯರ ಮನೆಗೆ ಹೋಗಲು(ನುಗ್ಗಲು) 'ಪ್ಲಾನ' ಮಾಡಿದೆ. ಅದರಂತೆ ಬೆಳಗ್ಗೆ ಎದ್ದು ಸ್ನಾನ ಮಾಡಿ, ಸುಮಾರು ೮-೩೦ರ ವೇಳೆಗೆ ನನ್ನ ಹೆಂಡತಿಯ ಮನಸ್ಸಿನ ವಿರುದ್ಧವಾಗಿ ಮಂತ್ರಾಲಯದ ಪ್ರಸಾದ ತೆಗೆದುಕೊಂಡು ಹನಮಂತರಾಯರ ಮನೆಗೆ ಬಂದೆ. ಕರೆಘಂಟೆಯ ಶಬ್ದಕ್ಕೆ ಬಾಗಿಲು ತೆಗೆದು ನನ್ನನ್ನು ನೋಡಿ ನಕ್ಕಂತೆ ಮಾಡಿ, 'ಬನ್ನಿ' ಎಂದು ಕರೆದರು. ಕುರ್ಚಿಯ ಮೇಲೆ ಕುಳಿತೆ. ಅವರೂ ಕುಳಿತು ಕೊಂಡರು. ಶಿಸ್ತುಬದ್ಧವಾದ ಮನೆ. ನಾಜೂಕಾದ ಸುಂದರ ಪೀಠೋಪಕರಣಗಳು, ಯಾವದೇ ತರಹದ ಗದ್ದಲವಿಲ್ಲದ ಮೌನ ವಾತಾವರಣ, ಬೋಳು ಗೋಡೆಗಳು ನನ್ನನ್ನು ಬಹಳ ಆಕರ್ಷಿಸಿದವು. ಮಾತಿಲ್ಲದೆ ಕೆಲ ವೇಳೆ ಕಳೆದ ನಂತರ, 'ಮಂತ್ರಾಲಯದಿಂದ ಪ್ರಸಾದ ಬಂದಿತ್ತು. ತಮಗೂ ಕೊಡಲು ಬಂದೆ' ಎಂದು ದೇಶಾವರಿ ನಗೆಬೀರಿದೆ.

ಮೌನವಾಗಿ ಎದ್ದು ಬಂದು ಮುಖದ ಮೇಲೆ ಯಾವದೇ ಭಾವ ತೋರಿಸದೆ ಪ್ರಸಾದ ವನ್ನು ತೆಗೆದುಕೊಂಡು ಒಳಗೆ ಹೋಗಿ ಪ್ರಸಾದವನ್ನು ಇಟ್ಟು ಬಂದು 'ಥ್ಯಾಂಕ್ಸ್' ಎಂದರು. ನಾನು ಎದ್ದು ಹೋಗಲು ಹೇಳಿದಂತಿತ್ತು ಅವರ 'ಥ್ಯಾಂಕ್ಸ್'. ಆದರೂ ನಾನು ಕುಳಿತೇ ಇದ್ದೆ. ಮುಂದಿನ ಕ್ಷಣದಲ್ಲಿ ಅವರ ಮಗಳು ರೋಹಿಣಿ ಚಹಾ ತೆಗೆದುಕೊಂಡು ಬಂದಳು. ಮೌನವಾಗಿಯೇ ಚಹಾ ತೆಗೆದುಕೊಂಡೆವು. ಅವರು ಮೌನವಾಗಿದ್ದರಿಂದ ನನಗೂ ಏನು ಮಾತನಾಡಬೇಕೆಂದು ತೋಚದಾಯಿತು. ಇಂಥ ಮನುಷ್ಯನ ಮನೆಗೆ ಯಾಕಾದರೂ ಬಂದೆ ಎಂಬ ಭಾವನೆ ಬರತೊಡಗಿತು. ನಾನು ಹೊರಡಲು ಎದ್ದು ನಿಂತಾಗ ಹನಮಂತರಾಯರು ಕೂಡಲೇ ಎದ್ದು ಮನೆಯ ಬಾಗಿಲನ್ನು ತೆಗೆದರು. ನನಗೆ ನನ್ನ ಕುಂಡೆಯ ಮೇಲೆ ಒದ್ದಂತಾ ಯಿತು. ಇನ್ನೆಂದಿಗೂ ಇವರ ಮನೆಗೆ ಬರಬಾರದೆಂಬ ನಿಶ್ಚಯದಿಂದ ನಮ್ಮ ಮನೆಗೆ ಬಂದೆ. ಅವರ ಮನೆಯಿಂದ ಹೊರಗೆ ಬಂದಾಗ ಅವರ ಮನೆಗೆಯೇ ನಾಲ್ಕೈದು ಜನ ಬಂದರು. ಹನಮಂತರಾಯರು ಪ್ರಸನ್ನ ವದನದಿಂದ ಅವರನ್ನು ಸ್ವಾಗತಿಸುವುದನ್ನು ನೋಡಿ ಆಶ್ಚರ್ಯ ವಾಯಿತಲ್ಲದೇ ಅವರು ನನಗೆ ತೋರಿದ ಅವಮಾನವೆಂದೇ ಬಗೆದೆ. ನನ್ನ ಮನೆಗೆ ಬಂದು ಕಣ್ಣುಗಳನ್ನು ಮುಚ್ಚಿ ಹನಮಂತರಾಯರ ಸಂಸಾರವನ್ನು ವಿಶ್ಲೇಷಿಸಲು ಪ್ರಯತ್ನಿಸಿದೆ. ಅವರಿಗೆ ತಮ್ಮದೇ ಆದ ಒಂದು ವರ್ತುಲವಿದೆ. ಆ ವರ್ತುಲದಲ್ಲಿ ಹೊಸಬರು ಪ್ರವೇಶಿಸುವದನ್ನು ಅವರು ಆಶಿಸುವದಿಲ್ಲ. ವಯಸ್ಸಾಗಿದ್ದರೂ ಮತ್ತೊಬ್ಬರ ಸಹಾಯ ಅಪೇಕ್ಷಿಸುವುದಿಲ್ಲ ಮುಂತಾದವುಗಳು. ಆದರೆ ನಾನೇಕೆ ಅವರ ಸಂಸಾರದ ಬಗ್ಗೆ ವಿಶ್ಲೇಷಿಸಬೇಕು? ಅವರು ತಮ್ಮ ಸುಖ-ದುಃಖಗಳನ್ನು ನನ್ನ ಮುಂದೆ ಹೇಳಬೇಕು ಎಂಬ ನನ್ನ ಬಯಕೆ ಎಷ್ಟು ಸಮಂಜಸ ಮುಂತಾದ ಪ್ರಶ್ನೆಗಳು ನನ್ನನ್ನು ಕಾಡತೊಡಗಿದವು. ಅವರ ಮನೆಗೆ ಹೋಗಿ ಬಂದು ಒಂದು ತಿಂಗಳ ನಂತರ ಒಂದು ದಿನ ಮಧ್ಯಾಹ್ನ ಮೂರು ಘಂಟೆಯ ಸುಮಾರಕ್ಕೆ ಹನಮಂತರಾಯರ ಮನೆಯವರೆಲ್ಲ ಒಂದು ಕಾರಿನಲ್ಲಿ ಹೊರಟುಹೋದರು. ಅವರು ಕಾರಿನಲ್ಲಿ ಕುಳಿತಿರುವಾಗ ನಾನು ಅಲ್ಲಿಯೇ ನಿಂತಿದ್ದೆ. ನನಗೇನೂ ಅವರು ಹೇಳಲಿಲ್ಲ. ನಾನೂ ಸಹಿತ ಮುಂದಾಗಿ ಅವರ ಕೂಡ ಮಾತನಾಡಲಿಲ್ಲ. ಆದರೆ ಅವರ ಮಗಳು ರೋಹಿಣಿ ಅಳುತ್ತಿರುವದು ನನ್ನ ತೀಕ್ಷ್ಣ ದೃಷ್ಟಿಗೆ ಗೋಚರಿಸಿತು. ಮರುದಿನ ಸಾಯಂಕಾಲ ಅವರ ಮನೆ ಬಾಗಿಲು ತೆರೆದ ಸಪ್ಪಳ ಕೇಳಿಸಿತು. ಅವರೆಲ್ಲ ಮರಳಿ ಬಂದಿರಬಹುದೆಂದು ತಿಳಿದೆ.

ಮರುದಿನ ಮುಂಜಾನೆಯ ಅಡ್ಡಾಟವನ್ನು ಮುಗಿಸಿಕೊಂಡು ಸ್ನೇಹಿತ ವೆಂಕಣ್ಣನ ಮನೆಗೆ ಹೋಗಿ ಬಂದಾಗ ನನಗೆ ಆಶ್ಚರ್ಯವೊಂದು ಕಾದಿತ್ತು. ಎಂದೂ ನನಗಾಗಿ ದಾರಿ ಕಾಯುತ್ತ

ನಿಲ್ಲದ ನನ್ನ ಹೆಂಡತಿ ಆ ದಿನ ಬಾಗಿಲಲ್ಲೇ ನಿಂತಿದ್ದಳು. ಏನೋ ಹೇಳುವ ತವಕದಿಂದಿದ್ದಳು. 'ಕೂಡ್ರಿ, ನಿಮಗ ಒಂದು ಮಜಾ ಸುದ್ದಿ ಹೇಳ್ತೀನಿ. ಆ ಬದಿ ಮನೆ ರೋಹಿಣಿ ಇದ್ಲಲ್ಲ...'

ಅವಳ ಮಾತು ಮುಗಿಯುವ ಮೊದಲೇ, 'ಏನಾಯ್ತು?' ಎಂದು ಗಾಬರಿಗೊಂಡು ಕೇಳಿದೆ.

'ಅವಳಿಗೆ ಏನೂ ಆಗಿಲ್ಲ. ನಿನ್ನೆ ಅವಳ ಮದುವೆ ಆತಂತೆ' ಎಂದಾಗ ನನಗೆ ಆಶ್ಚರ್ಯ. ಹನಮಂತರಾಯರ ಮೇಲೆ ಒಂದು ತರಹದ ಹೊಲಸು ಭಾವನೆ ಉಂಟಾಯ್ತು. ನನಗೆ ಮದುವೆಯ ವಿಷಯ ಹೇಳುವದು ಬೇಡ. ಮದುವೆಗೆ ಕರೆಯುವದೂ ಬೇಡ. ಆ ಮನುಷ್ಯ ಮದುವೆಗೆ ಹೋಗುವಾಗ ಅವರ ಕಾರಿನ ಹತ್ತಿರವೇ ನಿಂತಿದ್ದ ನನಗೆ ಒಂದು ಮಾತು ಹೇಳಲಿಲ್ಲವೆಂದು ಕೋಪ ಬಂತು.

ತಮಗೆ ಬೇಕಾದವರನ್ನು ಕರೆದಿರಬಹುದು. ನೀವು ಮನೆಯ ಬದಿಗೆ ಇದ್ದ ಮಾತ್ರಕ್ಕೆ ಕರೆಯಬೇಕೆಂದೇನಿಲ್ಲ ಎಂಬ ವಿಚಾರವೂ ಮನದಲ್ಲಿ ಮೂಡಿತು. ಮನುಷ್ಯನ ಮನಸ್ಸೆ ವಿಚಿತ್ರ. ಮತ್ತೊಬ್ಬರನ್ನು ಹಂಗಿಸಲು ಇಷ್ಟಪಡುತ್ತದೆ. ತನ್ನಿಂದ ಏನೂ ಮಾಡುವದಾಗುವದಿಲ್ಲವೆಂದು ಗೊತ್ತಿದ್ದರೂ ತನ್ನ ಸಹಾಯ ಮತ್ತೊಬ್ಬರು ಅಪೇಕ್ಷಿಸಬೇಕು ಎಂದು ಬಯಸುತ್ತದೆ. ನನಗೂ ಅದೇ ರೀತಿ ಹನಮಂತರಾಯರನ್ನು ಹಂಗಿಸಬೇಕೆಂದು ಉತ್ಕಟ ಬಯಕೆಯಾಗತೊಡಗಿತು. ಬಯಕೆ ಎಷ್ಟು ಜೋರಾಯಿತೆಂದರೆ ನನಗೆ ಮನೆಯಲ್ಲಿ ಕೂಡಲು ಸಹಿತವಾಗಲಿಲ್ಲ. ಎದ್ದು ಹೊರಟುಬಿಟ್ಟೆ. ಬಾಗಿಲು ತೆರೆದು ತಮ್ಮ ಮನೆಯ ಒಳಗೆ ಕರೆದರು. ಬಿಗಿದ ಮುಖ ಇರಲಿಲ್ಲ. ಕೂಡಲು ಹೇಳಿ ಚಹಾ ತರುವದಾಗಿ ಹೇಳಿ ಹೋದರು. ಅದೇ ಮನೆ, ಅದೇ ಪೀಠೋಪಕರಣಗಳು ಆದರೆ ಗೋಡೆಯ ಮೇಲೆ ಒಂದು ಭಾವಚಿತ್ರ. ಭಾವಚಿತ್ರಕ್ಕೆ ಮಾಲೆ ಹಾಕಲಾಗಿತ್ತು. 'ಚಹಾ ತಗೊಳ್ಳಿ' ಎಂದಾಗ ವಾಸ್ತವಕ್ಕೆ ತಿರುಗಿ ಚಹಾ ತೆಗೆದುಕೊಂಡೆ.

'ನಿಮ್ಮ ಮಗಳ ಮದುವೆಯಾಯಿತಂತೆ' ಎಂದು ಕುಟುಕಿದೆ.

'ಹೌದು, ಆಯಿತು' ಎಂದೆನ್ನುತ್ತ ಹನುಮಂತರಾಯರು ಗೋಡೆಯ ಮೇಲಿರುವ ಭಾವಚಿತ್ರದ ಹತ್ತಿರ ಹೋಗಿ, 'ರೋಹಿಣಿ ನನ್ನ ಮಗಳಾಗಿರಲಿಲ್ಲ' ಎಂದರು.

'ಹ್ಞಾಂ... ಏನಂದಿರಿ!?' ನನಗೇ ಗೊತ್ತಿಲ್ಲದೇ ಉದ್ಗಾರ ಬಂತು.

'ಅವಳು ಅವಳು...' ಗದ್ಗದ ಕಂಠದಿಂದ, 'ಅವಳು ನನ್ನ ಸೊಸೆಯಾಗಿದ್ದಳು. ರೋಹಿಣಿ ನನ್ನ ಮೊದಲ ಮಗ ನರೇಂದ್ರನ ಪತ್ನಿ. ಭಾರತೀಯ ಸೇನೆಯಲ್ಲಿದ್ದ ನನ್ನ ಮಗ ಮದುವೆಯಾಗಿ ಆರೇ ತಿಂಗಳಲ್ಲಿ ಕಾಶ್ಮೀರದಲ್ಲಿ ತೀರಿಹೋದ. ಸೊಸೆಯಾಗಿ ಬಂದವಳು ವಿಧವೆಯಾಗಿ ಮಗಳಾಗಿ ಉಳಿದಳು. ಹೆಣ್ಣುಮಕ್ಕಳಿಲ್ಲದ ನಮಗೆ ಹೆಣ್ಣುಮಗಳಾದಳು. ಅವಳ ಮನಸ್ಸಿರ ದಿದ್ದರೂ ಅವಳ ಮುಂದಿನ ಭವಿಷ್ಯಕ್ಕಾಗಿ ಅವಳ ಮನಸ್ಸನ್ನು ಬದಲಿಸಿ ನಾವು ಕನ್ಯಾದಾನದ 'ಪುಣ್ಯ' ಪಡೆದುಕೊಂಡೆವು' ಹನುಮಂತರಾಯರು ಶಾಂತವಾಗಿ, ಸಾವಕಾಶವಾಗಿ, ಆಗಾಗ ಬಿಕ್ಕುತ್ತ ಹೇಳಿದರು. ಮೊಟ್ಟಮೊದಲ ಬಾರಿಗೆ ಹನುಮಂತರಾಯರು ಅವರಕ್ಕಿಂತಲೂ ಹೆಚ್ಚಾಗಿ ಅವರ ಹೆಂಡತಿ ಬಹಳ ದೊಡ್ಡವರಾಗಿ ಕಂಡರು ನನಗೆ.

ಕಣ್ಣಲ್ಲಿ ನೀರು ತುಂಬಿಕೊಂಡು ವಾಮನನಾಗಿ ಮರಳಿ ಬಂದೆ.

ವಿಳಾಸ : ಎ - ೧೨೪, ಗಂಗಾ,
ಆರ್.ಎಂ.ವಿ. ಕ್ಲಸ್ಟರ್, ದೇವಿ ನಗರ ಬಡಾವಣೆ,
ಲೊಟ್ಟೆಗೊಲ್ಲಹಳ್ಳಿ, ಬೆಂಗಳೂರು - ೫೬೦ ೦೯೪


ಸಂಕಿರಣ - ೩

ಕತೆಗಾರ ಕವಿ ಎಂ. ವ್ಯಾಸ (೧೯೪೧) ಅವರದ್ದು ಎಲೆ ಮರೆಯ ಪ್ರತಿಭೆ. ಸುಮಾರು ಮೂರು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಅವರು ಬರೆದ ಸುಮಾರು ಮುನ್ನೂರಕ್ಕೂ ಹೆಚ್ಚು ಕತೆಗಳು ನಾಡಿನ ಅನೇಕ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಬದುಕಿನ ಅನುಭವದ ಹಿನ್ನೆಲೆಯಲ್ಲಿ ಮನುಷ್ಯನ ಮನಸ್ಸೇ ಅವನ ಜಗತ್ತು ಅಂತ ಭಾವಿಸುವ ವ್ಯಾಸರ ವಿಕ್ಷಿಪ್ತ ಕತೆಗಳು ನಮ್ಮನ್ನು ಹೊರನೋಟಕ್ಕೆ ಅವರ ಎರಡಕ್ಷರದ ಶೀರ್ಷಿಕೆಯಿಂದ, ತೀವ್ರ ಭಾವುಕತೆಯಿಂದ ಸೆಳೆಯುತ್ತವೆ.

'ಕಂಟನಿ' (೧೯೭೫), 'ಕೃತ' (೧೯೯೮) ಕಥಾಸಂಕಲನಗಳು 'ಸ್ನಾನ' (ಕಿರುಕಾದಂಬರಿಗಳ ಸಂಕಲನ - ೨೦೦೨), 'ಸುಳಿ' ಮತ್ತು 'ಕ್ಷೇತ್ರ' ಎಂಬ ಎರಡು ಕವನ ಸಂಕಲನಗಳು ಪ್ರಕಟಗೊಂಡಿವೆ. ಎಂ. ವ್ಯಾಸ 'ಅಜಂತ' ಎಂಬ ಮಾಸಪತ್ರಿಕೆಗೆ, 'ನಾಡಪ್ರೇಮಿ' ಎಂಬ ವಾರಪತ್ರಿಕೆಗೆ ಸಂಪಾದಕರಾಗಿದ್ದರು. 'ಕೃತ' ಕಥಾಸಂಕಲನ ಮಂಗಳೂರು, ಕಣ್ಣೂರು ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ಪಠ್ಯವಾಗಿದೆ.

ಪ್ರಶಸ್ತಿ, ಪ್ರಸಿದ್ಧಿ ಅಕೆಡೆಮಿಕ್ ವಲಯದ ಮಾನ್ಯತೆಗಳು ವ್ಯಾಸರಂಥ ಹಿರಿಯ ಲೇಖಕರಿಂದ ದೂರವೇ ಉಳಿದವು, ಅವರೂ ಅವುಗಳಿಂದ ವಿಮುಖರಾದವರು. ಇನ್ನೂ ಸ್ಪಷ್ಟವಾಗಿ ಹೇಳಬಹುದಾದರೆ ಅವುಗಳ ಬಗ್ಗೆ ಸಿನಿಕರಾದವರು.

ಒಪ್ಪಿಸಿಕೊಳ್ಳಿ ವ್ಯಾಸರನ್ನ ಓದಿದ ನಾಲ್ವರು ಲೇಖಕರ ಸ್ಪಂದನ. ಬದುಕಿನ ಪ್ರತಿಕ್ಷಣವನ್ನು ತೀವ್ರವಾಗಿ ಭಾವಿಸುವ ಅನುಭವಿಸುವ ಚಡಪಡಿಕೆಯುಳ್ಳ ಎಂ. ವ್ಯಾಸರು ತಮ್ಮ ಕತೆಗಳ ಬಗ್ಗೆ ಹಂಚಿಕೊಂಡಿರುವ ಅನಿಸಿಕೆಗಳು ಈ ಸಂಕಿರಣದ ವಿಶೇಷ.



ವಾಸ್ತವದ ಕತ್ತಲ ಜಾಡಿನಲ್ಲಿ ದಿಗ್ಮೂಢಗೊಳಿಸುವ ಬೆಳಗಿನ ಉಂಡೆಗಳು

✦ *ಆನಂದ ಋಗ್ವೇದಿ*

ಕತೆಗಾರ ಎಂ. ವ್ಯಾಸರನ್ನು ನನಗೆ ಮೊದಲು ಪರಿಚಯಿಸಿದ್ದು ನನ್ನ ತಂದೆಯೇ. ನನ್ನ ತಂದೆ ತಾವು ಓದುತ್ತಿದ್ದ ಕತೆಗಳಲ್ಲಿ ಅಪರೂಪವಾದಂತಹವುಗಳನ್ನು, ವಿಶಿಷ್ಟವಾದವುಗಳನ್ನು ನನಗಾಗಿ, ನನ್ನ ತಾಯಿಗಾಗಿ ಎತ್ತಿಟ್ಟು ಓದಿಸುತ್ತಿದ್ದರು. ಅನಂತರದಲ್ಲಿ ಆ ಕತೆಗಳ ಕುರಿತು ಒಂದು ಸಣ್ಣ ಚರ್ಚೆ ನಮ್ಮ ಸಾಂಸಾರಿಕ ಚಾವಡಿಯಲ್ಲಿ ನಡೆಯುತ್ತಿತ್ತು. ಹಾಗೆ ನನ್ನ ತಂದೆ ಎಂ. ವ್ಯಾಸರ ಕತೆಯೊಂದನ್ನು 'ಮಯೂರ'ದಲ್ಲಿ ನನಗೆ ತೆರೆದು ತೋರಿಸಿ, ಪರಿಚಯಿಸಿದಾಗ ಪ್ರಾಯಶಃ ನಾನು ಹೈಸ್ಕೂಲ್ ಕೊನೆಯ ವರ್ಷದಲ್ಲಿದ್ದೆ. ಈ ಹೊತ್ತು ಕತೆಯ ಶೀರ್ಷಿಕೆ, ವಸ್ತು ನೆನಪಾಗದಿದ್ದರೂ ಅದು ನೀಡಿದ ದಿಗ್ಮೂಢತೆ ನನಗೆ ನೆನಪಿದೆ. ಬಹುತೇಕ ನಮ್ಮ ವಾಗಿದ್ದ ಸಹಜ ಸಾಮಾಜಿಕ ಆಯಾಮಗಳ ಕತೆಗಳ ಹಾದಿಯಲ್ಲಿ ಕ್ರಮಿಸುವವರಿಗೆ ಏಕಕಾಲಕ್ಕೆ; ಕಣ್ಣಪಟ್ಟಿಯೊಂದಿಗೆ ಕತ್ತಲ ಹಾದಿಯಲ್ಲಿ ನಡೆದೂ, ಬೆಳಕಿನ ಉಂಡೆಗಳನ್ನು ಎದುರಿಸಿದಂತಹ ಅನುಭವ ಅದು. ಕೋರೈಸುವ ಬೆಳಕು ಕಾಣದಿದ್ದರೂ, ಅದರ ಪ್ರಖರತೆ ಗ್ರಹಿಸಿದಂತೆ!

ಹಾಗೆ ವಿಲಕ್ಷಣವಾಗಿ ನನ್ನನ್ನು ಆವರಿಸಿಕೊಂಡ ಎಂ. ವ್ಯಾಸರ ಕಥಾನಕದ ಮೋಡಿ ನನ್ನನ್ನು ಬಹಳ ದಿನಗಳೇ ಹಿಡಿದಿರಬೇಕು. ಪ್ರಕಟವಾಗಿ ಬರುತ್ತಿದ್ದ, ಸಿಕ್ಕಿದ ಅವರ ಕತೆಗಳನ್ನು ಎಲ್ಲೆಲ್ಲಿಯೋ ಹೆಕ್ಕಿ ನಾನು ಓದಿಕೊಂಡೆ. ಪ್ರಾಯಶಃ ಈ ರೀತಿ ನನ್ನ ಕಾಡಿ, ಓದಿಸಿಕೊಂಡ ಕತೆಗಳ ವಿಲಕ್ಷಣತೆ, ವಿಕ್ಷಿಪ್ತತೆ ಮತ್ತು ಅಸಂಗತತೆಯೋ ಅಪ್ತವಾಗಿ ನಾನು [illegible] ಕತೆ ಬರೆಯಲು ಶುರುವಿಟ್ಟಾಗ ನನ್ನ ಕತೆಗಳಲ್ಲಿಯೂ ಢಾಳಾಗಿ ಕಾಣುವಂತಾಗಿರಬೇಕು. ಹಾಗೆಂದೇ ನನ್ನ ಸಂಕಲನಕ್ಕೆ ಮುನ್ನುಡಿ ಬರೆದ ಹಿರಿಯ ವಿಮರ್ಶಕರು ಅಂತಹ ವಿಕ್ಷಿಪ್ತತೆಯ ಪ್ರಸ್ತುತತೆ ಬಗ್ಗೆ ಪ್ರಶ್ನಿಸಿದ್ದರು. ಕಥಾ ಸಂಕಲನ ಓದಿದ ಹಿರಿಯ ಸಾಹಿತ್ಯಕ ಬಂಧುವೊಬ್ಬರು 'ನಿನ್ನ ಕತೆಗಳಲ್ಲಿ ಎಂ. ವ್ಯಾಸರ ಕಥಾನಕದ ವಿಕ್ಷಿಪ್ತತೆ, ನೇಮಿಚಂದ್ರರ ಕತೆಗಳ ಭಾವುಕತೆ ಹದ ಮಿಶ್ರಣ ಪಡೆದಿದೆ' ಎಂದು ಸೂಚ್ಯವಾಗಿ ಎಚ್ಚರಿಸಿದ್ದರು!

ನಿಜ. ಈ ಹೊತ್ತು ಆ ಎಲ್ಲ ಪ್ರಭಾವಗಳ ಹಿಡಿತದಿಂದ ಬಿಡಿಸಿಕೊಂಡು, ಕಥಾನಕದ ಹಾದಿಯಲ್ಲಿ ನನ್ನದೇ ಕಾಲುಹಾದಿಯನ್ನು ಅರಸುತ್ತಿರುವಾಗ ನನಗನ್ನಿಸುತ್ತಿರುವುದು ಎಂ. ವ್ಯಾಸರದು ವಿಕ್ಷಿಪ್ತ ಕಥಾನಕ ಎಂದೇ. ನನ್ನ ಕಥಾ ಹಾದಿಯಲ್ಲಿ ಭೇಟಿಯಾದ ವ್ಯಾಸರ ಕತೆಗಳ ಒದಿನ ಗ್ರಹಿಕೆ ಇದು. ನಿಜಕ್ಕೂ ವ್ಯಾಸರ ಕಥಾಜಗತ್ತು ಅಂತಹುದು; ಅದೊಂದು

ಅಂತಃಕರಣವಿದೆ, ಆತಂಕದ ಬಿಗಿತವಿದೆ, ದುರಂತದ ದುಗುಡವಿದೆ. ಅವರ ಎಲ್ಲ ಕತೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದುರ್ಗಾಪುರ, ಶಂಕರೀನದಿ, ಗುಡ್ಡಗಳಂತೆಯೇ ಅವರ ಕತೆಗಳ ಪಾತ್ರಗಳಲ್ಲಿಯೂ ಸಾಮ್ಯತೆ ಕಂಡುಬರುತ್ತದೆ. ಕೆಲವೊಮ್ಮೆ ಪಾತ್ರಗಳ ಹೆಸರು ಬದಲಾದರೂ ಅವರು ಬೇರೆ ಹೆಸರಿನಿಂದ ಕರೆಯಲ್ಪಟ್ಟ ಅದೇ ಜನರು ಎಂದೇ ಅನ್ನಿಸಿಬಿಡುತ್ತದೆ. ಅಲ್ಲಿ ನಡೆಯುವ ಸಂಗತಿ, ಕಥನದ ಕೇಂದ್ರ ಘಟನೆ ಯಾವತ್ತೂ ಆ ದುರ್ಗಾಪುರ ಎದುರು ನೋಡುವ, ಬಹುತೇಕ ಅದನ್ನು ಎದುರ್ಗೊಳ್ಳುವ ಸಿದ್ಧತೆಯಿಂದ ಅಲ್ಲಿ ಸ್ಥಿರವಾಗುತ್ತದೆ. ಸಾಮಾನ್ಯವಾಗಿ ಅವರ ಕತೆಗಳ ಭಿತ್ತಿ ಮೂರ್ತವಾಗಿ ದುರ್ಗಾಪುರವಾದರೆ ಅಮೂರ್ತವಾಗಿ ಅದು ಬದುಕನ್ನು ಧ್ವನಿಸುವಂತಹದ್ದು. ಆ ಎಲ್ಲ ಕತೆಗಳಲ್ಲಿ ಸಾಮಾನ್ಯವಾಗಿ ಬರುವ ಪಾತ್ರವೆಂದರೆ ಅದು 'ಕಾಮ'! ನಿಜ, ಕಾಮ ಎಂ. ವ್ಯಾಸರ ಕತೆಗಳ ಸ್ಥಾಯೀಪಾತ್ರ!

ಎರಡೆರಡೇ ಅಕ್ಷರಗಳ ಹೆಸರನ್ನು ವ್ರತ ತೊಟ್ಟವರಂತೆ ಕತೆಗಳಿಗೆ ನೀಡುವ ಎಂ. ವ್ಯಾಸರ ಯಾವುದೇ ಕತೆಯಲ್ಲಿ 'ಕಾಮ' ಪ್ರಧಾನ ಪಾತ್ರವಹಿಸುತ್ತದೆ. ಅದು ಕೇವಲ ಬಯಕೆ, ಕಾಮನೆಯಂತಹ ಭಾಷಿಕ ವ್ಯಾಖ್ಯಾನವನ್ನು ಮೀರಿ ದೇಹದೇಹಗಳ ಸಂಗತವಾದ ಸಮ್ಮಿಲನದ ಗಾಢವಾಸನೆ ಪಡೆದಂತಹದು. 'ಕಾಮ' ದೇಹದೊಂದಿಗಿನ ಆಕರ್ಷಣೆ-ವಿಕರ್ಷಣೆಯ ನೆಲೆಯಲ್ಲಿ ಹೆಚ್ಚು ಹಸಿಯಾದುದು. ಅಷ್ಟೇ ಅಲ್ಲ, ಸಹಜ ಮೃಗೀಯವಾದುದು. ಪ್ರಾಯಶಃ ಅಂತಹ ಮೃಗೀಯತೆಯೇ ವಾಸ್ತವವನ್ನು ತನ್ನೆಲ್ಲ ವಿರೂಪಗಳೊಂದಿಗೆ ಸಾದೃಶ್ಯಗೊಳಿಸಲು ಸಾಧ್ಯವಾಗಿರಬೇಕು. ಹಾಗೆಂದೇ 'ವಿರೂಪಗೊಂಡ ವಾಸ್ತವ' ವಿಕ್ಷಿಪ್ತವಾಗಿ ಭಾಸವಾಗುತ್ತದೆ.

'ಪಲ್ಲೆ' ಕತೆಯಲ್ಲಿ ದೇಹದ ತಪ್ತತೆಯಿಂದಾಗಿ ಆಕ್ರಮಣ ಮಾಡುವ ಅಡಿಗ ಮತ್ತು ಅಂತಹ ದೇಹ ತಪ್ತತೆಯನ್ನು ನೀಗಲು ಅವರ ಮಗಳಿಗೆ ಅವರೇ ನೀಡುವ ಅವಕಾಶ ಅವರನ್ನು ಆತ್ಮಮರುಕದಂತಹ ನೆಲೆಗೆ ತಲುಪಿಸುತ್ತದೆ. ಈ ಆತ್ಮಮರುಕ ಸ್ಥಿತಿಯಲ್ಲೂ ಅವರು ಎಲ್ಲೂ ತಮ್ಮ ಆಕ್ರಮಣಶೀಲತೆಯಿಂದ ವಿಮುಖರಾದಂತೆ ತೋರುವುದಿಲ್ಲ. ಬದಲಾಗಿ ಅದನ್ನೇ ವಿಸ್ತರಿಸಿ ತಮ್ಮ ಕುರೂಪವನ್ನು, ಅದೇ ಕುರೂಪದ ಪ್ರತಿರೂಪವಾದ ಮಗಳಿಗೆ ದಕ್ಕದೇ ಹೋದ ಸಾಂಸಾರಿಕ ತೃಪ್ತಿಗಾಗಿ ಅದನ್ನು ಬೇಟೆಯಾಡಿಯಾದರೂ — ಆಕ್ರಮಣಶೀಲತೆಯೊಂದಿಗೆ ಪಡೆಯುವ, ತೃಪ್ತರಾಗುವ ಮೂಲಕ ಮರುಕದ ಆತ್ಯಂತಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತಾರೆ.

ಅಂತಹುದೇ ಆತ್ಮ ಮರುಕದೊಂದಿಗಿನ ಅನುಸಂಧಾನ 'ಚಿತೆ' ಕತೆಯ ಶ್ರೀನಿವಾಸನಲ್ಲೂ ಕಂಡುಬರುತ್ತದೆ. ರೋಗಿಯಾಗಿ ಮಲಗಿದ್ದ ಹೆಂಡತಿಯಿಂದ ಪಡೆಯಲಾಗದ್ದನ್ನ — ತಪ್ತತೆ ನೀಡುವ ತೀವ್ರ ಮೃಗೀಯತೆಯಲ್ಲಿ — ಮೀನೂಕಾಳಿಂದ ಪಡೆದುಕೊಳ್ಳುತ್ತಾನೆ. ವಯಸ್ಸಾದರೂ ಮದುವೆಯಾಗದೇ ಅಸಹಾಯಕ ಬ್ರಹ್ಮಚರ್ಯೆಗೆ ಕಟ್ಟುಬಿದ್ದ ಮೀನೂಕಾಳಲ್ಲಿಯೂ ಅಂತಹದೇ ಅಭೀಪ್ಸೆ ಇದ್ದಿರಬಹುದಾದರೂ 'ಸಾಂಸಾರಿಕ ಆಸೆ ಎಂದರೆ' ಅಷ್ಟೇ ಎಂಬಂತೆ ಆಕೆಯೇ ಶ್ರೀನಿವಾಸನನ್ನ ಒತ್ತಾಸೆಯಿಂದ ಕೂಡಿಕೊಂಡಂತೆ ಚಿತ್ರಿತವಾದ ಆ ಕಾಮಯಜ್ಞದಲ್ಲಿ ಆಕೆ ಹವಿಸ್ಸಾದರೆ, ಶ್ರೀನಿವಾಸ ತಾನೇ ಬಲಿಪಶುವಾದಂತೆ ಬಿಂಬಿತವಾಗುತ್ತಾನೆ.

ಅಂತಹ ಮಿಲನದ ಉತ್ತರ ಭಾಗದಲ್ಲಿ ಸಾಧ್ಯವಾಗುವ ಒಂದು ತಾರ್ಕಿಕ ಸಂಘರ್ಷ, ತಾತ್ವಿಕ ತೊಡಕು ಅವರ 'ಗೋತ್ರ' ಕತೆಯಲ್ಲಿ ಬೇರೊಬ್ಬರ ಮಗನನ್ನ ತನ್ನ ಮಗನಾಗಿ ಸ್ವೀಕರಿಸುವ ಅಸಹಾಯಕತೆಯಲ್ಲಿ ವ್ಯಕ್ತವಾದರೆ 'ಕೃತ' ಕತೆಯಲ್ಲಿ ಭೂಷಣ್ ತನ್ನದೇ ವಿಕಲಾಂಗ ಮಗ ನಾಗೇಶನನ್ನ ತನ್ನ ಅಕ್ರಮ ಸಂಬಂಧದ ಫಲವಾಗಿ ಏಕಾಏಕಿಯಾಗಿ ಒಪ್ಪಿಕೊಳ್ಳುವ ಅನಿವಾರ್ಯತೆಯಲ್ಲಿ ಚಿತ್ರಿತವಾಗಿದೆ.

ಹಾಗೆ ನೋಡಿದರೆ, ಅವರ 'ಲಯ' ಕತೆಯಲ್ಲಿ ವಿಧವೆ ಅತ್ತಿಗೆ 'ವಿಲಾಸಿನಿ'ಯ ಸಂಗ ಬಯಸಿದ್ದ ದಿನೇಶ, 'ಶವ' ಕತೆಯಲ್ಲಿ ತನ್ನದೇ ವಿದ್ಯಾರ್ಥಿನಿಯನ್ನು ಆಕೆಗೆ 'ಅರಿವು' ಮೂಡುವ ಮೊದಲ ವಯಸ್ಸಿನಲ್ಲೇ ಬಯಸಿದ ಕೃಷ್ಣಶರ್ಮ, ತನ್ನನ್ನು ಮಗನೆಂದು ಸ್ವೀಕರಿಸಿದ ಸಾಕು ತಾಯಿ ತನ್ನ ತೃಪ್ತಿಗಾಗಿ ಸುಬ್ಬನೊಂದಿಗೆ ಕೂಡಿಕೊಂಡು ವ್ಯಗ್ರಗೊಳಿಸಿದವಳು. 'ವಿಲಾಸಿನಿ'ಯನ್ನೇ ಉದ್ರೇಕದಿಂದ ಬಯಸುವ 'ಭೂತ' ಕತೆಯ ನರೇಂದ್ರ ಎಲ್ಲರೂ ಯಾವ ಅಭೀಪ್ಸೆಯ ಹಿಂದೆ ಬಿದ್ದಿದ್ದಾರೆ? ಅದು ಕಾಮವೇ? ಮೈಥುನವೇ? ಅಥವಾ ಕಾಮ ಎಂದರೆ ಕೇವಲ ಮೈಥುನವೇ?

ಇಂತಹದೊಂದು ಗೊಂದಲಕಾರಕ ಸ್ಥಿತಿಯಲ್ಲಿಯೇ ಎಂ. ವ್ಯಾಸರ ಕಥಾನಕದ ಜಾಡು ನಡೆಸಿಬಿಡುತ್ತದೆ. ಸರಳ ಸಾಮಾಜಿಕತೆಯಿಂದ ಬಂದ ಓದುಗ ಅದರಲ್ಲಿ ಹೊಕ್ಕರೆ ಅದೊಂದು ತೀರ ವಿಕ್ಷಿಪ್ತವಾದ ಕಥಾಕಾಡು ಎಂದೆನ್ನಿಸಿದರೆ ಅದು ಸಹಜ.

ಆದರೆ, ಅಷ್ಟು ಹೇಳಿದರೆ ಎಂ. ವ್ಯಾಸರ ಕತೆಗಳ ಬಗ್ಗೆ ಎಲ್ಲ ಹೇಳಿದಂತಲ್ಲ. ನಿಜ ವ್ಯಾಸರ ಕತೆಗಳಲ್ಲಿ ಈ ಕಾಮದ ವಿಕೃತಿ ಢಾಳಾಗಿ ಎದ್ದು ತೋರುತ್ತದೆ. ಆದರೆ ಅದೇ ಅವರ ಕತೆಯ ಭಿತ್ತಿಯಾದ ಬದುಕನ್ನು ಪೂರ್ಣ ಆವರಿಸುವಂತಹದ್ದಲ್ಲ. ಅದು ಆ ಬದುಕಿನ ಅನುಷಂಗಿಕವಾದ ಆಯಾಮವಾಗಿ ಜೊತೆಗೂಡಿಕೊಂಡದ್ದು. ಸಾಮಾನ್ಯವಾಗಿ ಕತೆ ಎಂದರೆ ಒಂದು ಕೇಂದ್ರ, ಪ್ರಮುಖ ಪಾತ್ರ, ಪೋಷಕಪಾತ್ರ, ಅವರೆಲ್ಲರೊಡಗೂಡಿ ನಡೆದ ಸಂಗತವೊಂದು ಕತೆಯಾದಂತೆ ವ್ಯಾಸರ ಕತೆಗಳಲ್ಲಿ ನಡೆಯದಿರಲು ಅಲ್ಲಿ ಕೇಂದ್ರವೇ ಇಲ್ಲ. ಬದುಕಿನ ಹಲವು ಆಯಾಮಗಳು ಅಲ್ಲಿ ನಿರಂತರ ಅನಾವರಣವಾಗುವಾಗ ಅದು ಒಂದು ಕೇಂದ್ರದ ಸುತ್ತ ನಿರ್ಮಾಣವಾಗದೇ ತಾರ್ಕಿಕವಾಗಿ ವಿಸ್ತರಿಸಿಕೊಳ್ಳುತ್ತಲೇ ಹೋಗುತ್ತದೆ. ಬದುಕನ್ನು ಅದರಲ್ಲಿ ನೇರ ಮತ್ತು ವಕ್ರವಂತಿಕೆಯೊಂದಿಗೆ ಸ್ವೀಕರಿಸುವ ನೆಲೆಗೆ ತಲುಪುವ ಹಾದಿಯಲ್ಲಿ ಹಲವಾರು ತಾತ್ವಿಕ ಹೊರಳುಗಳು ಕಾಣಸಿಗುತ್ತವೆ. ಅಂತಹ ತಾತ್ವಿಕ ಹೊರಳುಗಳು ತಾರ್ಕಿಕವಾಗಿ, ವೈಚಾರಿಕವಾಗಿ ತಮ್ಮನ್ನು ಹೆಣೆದುಕೊಂಡವುಗಳು. ಹಾಗೆಂದೇ ವ್ಯಾಸರ ಕತೆಗಳಲ್ಲಿ, ಪಾತ್ರಗಳೆಲ್ಲ ತರ್ಕದಲ್ಲಿ ಮಾತಾಡುತ್ತವೆ. ತಾತ್ವಿಕತೆಯೊಂದನ್ನು ಉಸಿರಾಡುತ್ತವೆ. ಅವು ತೋರುವ ತಾತ್ವಿಕತೆಯ ವೈರುಧ್ಯಗಳೇ ಕತೆಯನ್ನು ಸಂಕೀರ್ಣ ವೈಚಾರಿಕ ಆಯಾಮದಲ್ಲಿ ಆಕೃತಿ ಪಡೆಯುವಂತೆ ಮಾಡಿವೆ. ವ್ಯಾಸರ ಕತೆಗಳೆಂದರೆ ; ವೈಚಾರಿಕ, ತಾತ್ವಿಕ ಪ್ರಗಾಢಗಳಂತೆ ಭಾಸವಾಗುವುದು ಈ ಶುದ್ಧ ತಾರ್ಕಿಕ ಚರ್ಚೆಗಳಿಂದಲೇ. ಕಥನವೊಂದು ತನ್ನ ಪಾತ್ರಗಳಿಂದ ಸಾದೃಶಗೊಂಡ 'ಜಗತ್ತಿ'ನಲ್ಲಿ ತನ್ನದೇ ತಾತ್ವಿಕತೆಯನ್ನು ಹೊಮ್ಮಿಸುವ ಸಾಧ್ಯತೆಗಳು ವ್ಯಾಸರ ಕತೆಗಳಲ್ಲಿ ಕಾಣಸಿಗುವುದಿಲ್ಲ. ಇಲ್ಲಿ ತಾತ್ವಿಕತೆ ಕಥಾಶರೀರದಿಂದ ತೀರಾ ಹೊರಗೆ ಹುಟ್ಟಿ, ಅದರೊಂದಿಗೆ ಜೋಡಿಸಿಕೊಂಡಂತೆ ಭಾಸವಾಗುತ್ತದೆ. ಹಾಗಾಗಿ ಹಲವು ಬಾರಿ ಕತೆಯ ತಾತ್ವಿಕತೆ ಸಂಗತಿಯದ್ದೋ, ಪಾತ್ರಗಳದ್ದೋ ಅಥವಾ ಈ ಕಥಾಜಗತ್ತನ್ನು ಕೃತ್ರಿಮವಾಗಿ ಈ ತಾತ್ವಿಕತೆಗಾಗಿಯೇ ಸೃಷ್ಟಿಸಿಕೊಂಡ ಸೃಜನಶೀಲ ಮನಸ್ಸಿನದ್ದೋ ಎಂದು ಸ್ಪಷ್ಟವಾಗುವುದಿಲ್ಲ. ಈ ತಾತ್ವಿಕ ಹೊರಳಿನಲ್ಲಿ, ವೈಚಾರಿಕತೆಯ ಭಾರದಲ್ಲಿ ನಡೆಯುವ ಅವರ ಕತೆಗಳು ವಿಲಕ್ಷಣವಾದ ದಿಗಿಲನ್ನು ಓದುಗರಲ್ಲಿ ಮೂಡಿಸಿಬಿಡುತ್ತದೆ ಅಷ್ಟೇ. ಏಕೆಂದರೆ, ಓದುಗನ ಮನಸ್ಸಿನಲ್ಲಿ ವಿಚಾರ ಹೊಳೆಸುವ, ಆತನನ್ನು ಕಥಾಜಗತ್ತಿನಲ್ಲಿ ಸೆಳೆದೊಯ್ಯುವ ಸರಳ, ಹೃದಯಂಗಮ ನಿರೂಪಣೆ ಅಲ್ಲಿ

ಗೈರುಹಾಜರಾಗಿರುತ್ತದೆ. ಅಲ್ಲದೇ ವ್ಯಾಸರ ಕತೆಗಳಲ್ಲಿ ಸಹಜ ಸಾಂಸಾರಿಕತೆ, ಪ್ರೇಮ, ಮೋಹವಿಲ್ಲದ ಒಡನಾಟ, ಮೈಥುನವಿಲ್ಲದ ಸಾಂಗತ್ಯ, ಯೋನಿ ಪಾವಿತ್ರ್ಯತೆ ಪ್ರಶ್ನಿಸದ ದಾಂಪತ್ಯ, ಮಾನವೀಯ ಅಂತಃಕರಣ, ಪ್ರತಿಸ್ಪಂದನೆಗಳಂತಹ ಕಥಾ ಸಹಜತೆ ಇಲ್ಲದೇ ಇರುವುದರಿಂದ ಬಹುತೇಕ ಅವರ ಪಾತ್ರಗಳು ಮಂಡಿಯೂರಿ ಕನ್‌ಫೆಷನ್ ಬಾಕ್ಸ್‌ನಲ್ಲಿ ಒಂದೇ ಉಸಿರಿನಲ್ಲಿ ಸತ್ಯ ಒಪ್ಪಿಕೊಳ್ಳುವವರಂತೆ ಕಂಡುಬರುತ್ತಾರೆ. ತಮ್ಮನ್ನು ಬೆತ್ತಲಾಗಿಸುವ, ಏಕಕಾಲಕ್ಕೆ ತಮ್ಮ ವಿಕೃತಿಯನ್ನು ಸಮರ್ಥಿಸಿಕೊಳ್ಳುವ ಆ ಎಲ್ಲ ಪಾತ್ರಗಳಿಗೆ ಮಾನವ ಸಹಜವಾದ ಮುಜುಗರ, ಸಂಕೋಚ, ದುಗುಡ ಇದ್ದಿದ್ದರೆ ಕತೆಯ ನಿರೂಪಣೆ ಹೆಚ್ಚು ಮಾರ್ದವವಾಗುತ್ತಿತ್ತು ಎನ್ನಿಸುತ್ತದೆ.

ಇಲ್ಲಿ ಚರ್ಚೆಯಲ್ಲಿ ಕೆಲವೇ ಕತೆಗಳನ್ನು ಉಲ್ಲೇಖಿಸಿದ್ದರೂ, ಈ ಅಭಿಪ್ರಾಯಗಳು ಅವರ ಒಟ್ಟು ಕತೆಗಳ್ನು ಆಧರಿಸಿದಂತಹವು. ಒಂದು ತಾತ್ವಿಕತೆಯನ್ನು ತನ್ನ ಆಂತರ್ಯದಿಂದ ಪೋಷಿಸದ ಕತೆ ಹೇಳುವ ಎಲ್ಲ ವೈಚಾರಿಕ, ತಾರ್ಕಿಕ ಮಾತುಗಳು ಕಥನವನ್ನು ಶುಷ್ಕ ಪಾಂಡಿತ್ಯದ ವ್ಯಾಪಾರವನ್ನಾಗಿಸಿ ಬಿಡುತ್ತದೆಯಲ್ಲವೇ? ಯಾವುದೋ ಕಾಣದ - ಕೇಳದ 'ಜಗತ್ತಿನಲ್ಲಿ' ನಡೆದಂತೆ ಭಾಸವಾಗುವ ಆ ಎಲ್ಲ ಸಂಗತಿಗಳು ಹೆಚ್ಚು ಸಹಜವಾಗಿ, ಈ ಜಗತ್ತಿನಲ್ಲಿ ವರ್ತಮಾನದಲ್ಲಿ ನಮ್ಮ ಮಾನಸ ನೆಲೆಗಳಲ್ಲಿ ನಡೆಯುವಂತಿದ್ದರೆ ಆ ಎಲ್ಲ ವೈಚಾರಿಕ ಮಾತುಗಳು ನಮ್ಮಲ್ಲೇ ಹೊಳೆಯುತ್ತಿದ್ದವಲ್ಲವೇ? ವಾಸ್ತವವನ್ನು ಕಹಿಯಾದ ಕಷಾಯದಂತೆ ಮೂಗು ಹಿಡಿದು ಕುಡಿಸುವ ಒರಟುತನದಲ್ಲಿ ಕಥಾನಕ ಗಾಢವಾಗಿ ತಟ್ಟುತ್ತದೆ. ಆಪ್ತವಾಗುವುದಿಲ್ಲ. ಪ್ರಾಯಶಃ ಇವೇ ಎಂ. ವ್ಯಾಸರ ಕತೆಗಳ ಯಶಸ್ಸಿನ ದೊಡ್ಡ ಮಿತಿ ಕೂಡ.

ಓದಿದ ಕೂಡಲೇ ಗಾಢವಾಗಿ ತಟ್ಟುವ, ವಿಲಕ್ಷಣ ಆಪ್ತತೆಯಲ್ಲಿ ಬದುಕಿನ ಕಠೋರ ವಾಸ್ತವದ ದರ್ಶನ ಮಾಡಿಸುವ ಈ ಕತೆಗಳು ಕನ್ನಡ ಸಂದರ್ಭದಲ್ಲಿ, ಅಷ್ಟೇ ಏಕೆ ಭಾರತೀಯ ಕಥಾ ಸಂದರ್ಭದಲ್ಲಿ ವಿಶಿಷ್ಟವಾದುದು, ಅನನ್ಯವಾದುದು. ಹಾಗಾಗಿ ಅವು ಬೀರುವ ಪ್ರಭಾವ, ಕಾಡುವ ರೀತಿ ಹೆಚ್ಚು ಸಾಂದ್ರವಾದುದು. ಆದರೆ ಇರುವ ಬದುಕನ್ನು ಅದರೆಲ್ಲ ವಕ್ರತೆಯೊಂದಿಗೇ ಪ್ರೀತಿಸಲು, ಜೀವಂತಿಕೆಯೊಂದಿಗೆ ಎದುರುಗೊಳ್ಳಲು ಈ ಕಥಾನಕ ಪ್ರಭಾವದಿಂದ ಹೊರಗೆ ಬರಲೇಬೇಕಾದ ಅನಿವಾರ್ಯತೆ ಮೂಡಿಬಿಡುತ್ತದೆ. ಬಹುತೇಕ ಯುವ ಕತೆಗಾರರಿಗೆ ವಶೀಕರಣ ಮಾಡಿಬಿಡುವ ಈ ಕತೆಗಳ ಕಲ್ಪಕ ವಾಸ್ತವತೆಯಿಂದ ನಾನು ಪ್ರಯತ್ನಪೂರ್ವಕವಾಗಿಯೇ ಬಿಡಿಸಿಕೊಂಡು ಹೊರಗೆ ಬರುತ್ತಿದ್ದೇನೆ. ನನ್ನ ಹಾಗೇ ನನ್ನ ಸಮಕಾಲೀನರೂ ಕೂಡ. ಹಾಗೆಯೇ ಆ ಕಲ್ಪಕ ವಾಸ್ತವದ ತೆಕ್ಕೆಯಿಂದ ಎಂ. ವ್ಯಾಸರೂ ಬಿಡಿಸಿಕೊಂಡು ಬಂದರೆ ಅವರ ಕಥಾನಕ ಪಡೆಯುವ ಮೋಹಕತೆ ಎಂತಹದು?! ಇದೊಂದು ಊಹೆ ಮತ್ತು ಆಶಯ ಕೂಡ.

೬೮೬/೭ಬಿ, ಮಹಡಿ, 'ದುರ್ಗಾಂಬಿಕಾ ನಿಲಯ'
ಒಂದನೇ ಮುಖ್ಯರಸ್ತೆ ೪ನೇ ತಿರುವು,
ಭಗತ್‌ಸಿಂಗ್ ನಗರ, ದಾವಣಗೆರೆ – ೫೭೭ ೦೦೨

ಶಂಕರೀನದಿಯ ಆಕಾಶ ಮತ್ತು ಹೆಣ್ಣು



✦ *ಗಿರಿಜ ಎಂ.ಆರ್.*

ಇತ್ತೀಚೆಗೆ ಸಭೆಯೊಂದರಲ್ಲಿ ಕನ್ನಡದ ಮಹತ್ವದ ಕವಿಯೊಬ್ಬರನ್ನು ಕತೆಗಾರ ಜಯಂತ್ ಕಾಯ್ಕಿಣಿಯವರು — 'ಒಬ್ಬ ಕವಿ ತನ್ನ ಕವಿತೆಯ ಮೂಲಕ ತನ್ನ ಆತ್ಮಕತೆಯನ್ನೇ ಹೇಳುತ್ತಿರುತ್ತಾನಲ್ಲವೆ? ಅಂದಮೇಲೆ ಮತ್ತೆ ಪ್ರತ್ಯೇಕವಾಗಿ ಆತ್ಮಕತೆ ಬರೆಯುವ ಪ್ರಸಂಗ ಎಲ್ಲಿ ಬಂತು?' ಎಂದು ಪ್ರಶ್ನಿಸಿದರು. ಬೇರೆ ಬೇರೆ ಕವಿಗಳು, ಕತೆಗಾರರ ಆತ್ಮಕತೆಗಳನ್ನು ಓದಿದ ಮೇಲೆ ಮತ್ತೆ ಅವರ ಕತೆ-ಕಾದಂಬರಿಗಳನ್ನು ಕೈಗೆತ್ತಿಕೊಂಡರೆ ಅದರಲ್ಲಿ ಅವರ ಬಾಲ್ಯ, ಪರಿಸರ, ನಂಬಿರುವ ಹೆಣ್ಣು-ಗಂಡಿನ ಸಂಬಂಧ ಇವು ಓದುಗರ ಕಣ್ಣಮುಂದೆ ಕುಣಿಯತೊಡಗುತ್ತವೆ. ಹಿಡಿಯಲು ಹೊರಟರೆ ಕೈಗೆ ಸಿಕ್ಕದ್ದೇ ಗಾಳಿಗುದುರೆಯಾಗಿ ಹಾರಿಹೋಗುತ್ತವೆ. ಈಗ ವ್ಯಾಸರ ಕತೆಗಳನ್ನು ಓದುವಾಗ ನನಗೆ ಜಯಂತರು ಕೇಳಿದ ಪ್ರಶ್ನೆ ಮತ್ತೆ ತಲೆದೋರುತ್ತಿದೆ. ವ್ಯಾಸರು ಕಳೆದ ಮೂರು ದಶಕಗಳಿಂದ ಬರೆದಿರುವ ಸುಮಾರು ಮುನ್ನೂರು ಕತೆಗಳ ಪೈಕಿ ಅವರ *ಬೆಂಕಿ, ಅಸ್ತ್ರ, ಗರ, ಮರ, ಬಕ, ರುಸ್ತುಂ, ತಾಯಿ* — ಈ ಸಣ್ಣಕತೆಗಳೊಂದಿಗೆ ಸ್ನಾನ, ರಥ, ಕ್ಷೇತ್ರ ಎಂಬ ಮೂರು ಕಿರು ಕಾದಂಬರಿಗಳನ್ನು ಮುಂದಿಟ್ಟುಕೊಂಡು ಯೋಚಿಸಿದಾಗ ವ್ಯಾಸರ ಸಣ್ಣಕತೆಗಳ ಚೌಕಟ್ಟಿನಲ್ಲಿ ಇರುವ, ಬರುವ, ಹೋಗುವ ಹೆಣ್ಣುಗಳತ್ತ ನೋಟ ಹರಿಯಿತು.

ಎಂ. ವ್ಯಾಸರನ್ನು ಬಿಡಿಬಿಡಿಯಾಗಿ ಓದಿದಂತೆಯೇ, ಇಡಿಯಾಗಿಯೂ ಓದುವ ಸಂದರ್ಭ ಇದು. ಮೇಲೆ ಹೇಳಿದ ಕತೆ, ಕಿರುಕಾದಂಬರಿಗಳಲ್ಲಿ ಎಲ್ಲದರಲ್ಲೂ ಹೆಣ್ಣು ಪಾತ್ರಗಳಿದ್ದೇ ಇವೆ. ವ್ಯಾಸರಿಗೆ ಕತೆಯ ಮಟ್ಟಿಗಂತೂ ಹೆಣ್ಣು ಪ್ರಬಲ ಆಕರ್ಷಣೆ. ಹೆಣ್ಣನ್ನು ಬೇರೆ ಬೇರೆ ಮೂಡ್‌ಗಳಲ್ಲಿ ಚಿತ್ರಿಸುವಾಗಲೂ ಕತೆಗಾರನ ಪುರುಷಪ್ರಜ್ಞೆ ಎಚ್ಚರವಾಗೇ ಇರುತ್ತದೆ. (ಇರಬಾರದೆಂದು ಆಕ್ಷೇಪವೇನೂ ಇಲ್ಲ.)

ವ್ಯಾಸ ತಮ್ಮ ಕತೆಗಳಲ್ಲಿ ಮೂರ್ತ ಆವರಣದೊಳಗೆ ಅಮೂರ್ತವೆನಿಸುವ ಸಂಕೇತಗಳನ್ನು ತರಲು ಪ್ರಯತ್ನಿಸುತ್ತಾರೆ. ಹೇಗಾದರೂ ಮಾಡಿ ಗಂಡು ಫ್ರೇಮಿನೊಳಗೆ ಹೆಣ್ಣಿನ ಚಿತ್ರವನ್ನು ಕೂಡಿಸಲು ಹೆಣಗುತ್ತಾರೆ. ತೀರಾ ಕೆಲವೊಮ್ಮೆ ಫ್ರೇಮಿಗಿಂತಲೂ ಚಿತ್ರವೇ ಬೆಳೆಯುತ್ತ ಹೋದದ್ದೂ ಉಂಟು. ಕತೆಯಲ್ಲಿ ಪ್ರತಿಮೆ, ಸಂಕೇತಗಳು ತೆರೆತೆರೆಯಾಗಿ, ನಿಧಾನವಾಗಿ ಆವರಿಸುತ್ತ ಹೋಗುವುದಕ್ಕೆ 'ರಥ'ವನ್ನು ನೋಡಬಹುದು.

ಮುರಿದುಬಿದ್ದ ಸೇತುವೆ ಇರುವ ಊರಿನಲ್ಲಿ ಶುರುವಾದ ಸುಶೀಲಾ-ರವಿಯ ಬಾಲ್ಯ, ಆಟದ ಮೂಲಕ ಬೆಳೆದು ಇಬ್ಬರೂ ಯೌವನಕ್ಕೆ ಕಾಲಿಡುತ್ತಾರೆ. ರವಿ ತನ್ನ ಭಗ್ನ ಪ್ರಣಯದ ಆವೇಶದಲ್ಲಿ ಬಾಲ್ಯದ ಗೆಳತಿ ಸುಶೀಲಾಳನ್ನು ಭೋಗಿಸುತ್ತಾನೆ. ನಂತರ ಅವನ ಹೊಸ ಬದುಕು

ಗೆಳತಿ ಎದುರೇ ಹೊಸಬಳೊಂದಿಗೆ ಹರಡಿಕೊಳ್ಳುತ್ತದೆ. ಶಂಕರೀನದಿಯ ಪರಿಸರದಿಂದ ನೋವನ್ನು ಹೊತ್ತು ಬದುಕನ್ನು ಹುಡುಕುತ್ತ ಬೇರೆ ಪರಿಸರಕ್ಕೆ ಹೊರಟ ಮೊದಲ ಹೆಣ್ಣು ಸುಶೀಲೆಯೇ ಇರಬೇಕು. ವ್ಯಾಸರ ಕತೆಗಳಲ್ಲಿ ಎಲ್ಲೆಲ್ಲೂ ಒಂದು ವಿಕ್ಷಿಪ್ತತೆ, ತಪ್ತ ಮನಃಸ್ಥಿತಿಯ ಆವರಣವೇ ಕುದಿಯುತ್ತಿರುತ್ತದೆ. ಮನುಷ್ಯನ ಮೃಗೀಯ ಪ್ರವೃತ್ತಿಯ ನೆಲೆ, ಲೈಂಗಿಕ ಕಾಮ, ದೈಹಿಕ ಹಿಂಸೆ, ಮನೆಯವರನ್ನೇ ಸುಟ್ಟು ಕರಕಲಾಗಿಸುವ ಕ್ರಿಯೆ (ಬೆಂಕಿ), ದೂರದ ಆತಂಕವನ್ನು ಆದಷ್ಟೂ ದೂರವಾಗಿಸುವ ಪ್ರವೃತ್ತಿ (ತಾಯಿ)... ಇತ್ಯಾದಿ ಹಂತಗಳಲ್ಲಿ ಸಂಚರಿಸುತ್ತದೆ. ಹಿಂಸೆಯಿಂದ ಕೂಡಿದ ಕಾಮ ವ್ಯಾಸರ ಕಥಾಭಿತ್ತಿ ಈ ಭಿತ್ತಿಯ ಮೇಲೆ ಇರುವುದು ಗಂಡು ಸವಾರನ ಚಿತ್ರ. ಗಂಡಿನ ನೋವಿಗೆ, ಬಯಕೆಗೆ, ಕುಬ್ಜತೆಗೆ, ಮುಗ್ಧತೆಗೆ ಹೆಣ್ಣು 'ಸವಾರಿ' ಕುದುರೆ. 'ರಥ'ದಲ್ಲಿ ಹಳ್ಳಿಯ ದೇವಸ್ಥಾನದ ರಥ ಸುಶೀಲಾಳ ಹೊಸ ಬದುಕಿನ ಪ್ರಣಯಕ್ಕೆ ಚಿಗುರುವ ಸಂಕೇತವಾಗಿ ಮಾರ್ಪಡುತ್ತದೆ. ಕತೆಯ ಆರಂಭದಲ್ಲಿ ಭಗ್ನ ಸೇತುವೆ, ಅದರ ಪೊದರ ಸಂದಿಯಲ್ಲಿ ರವಿ ಸುಶೀಲಾಳಿಂದ ಮೊದಲ ಬಾರಿಗೆ ಕಾಮದ ಅನುಭವ ಪಡೆಯುತ್ತಾನೆ. ಪ್ರೀತಿಯ ಒಂದಂಶವೂ ಇಲ್ಲದ ಈ ಕಾಮದಿಂದ ಸುಶೀಲಾಳ ಶಂಕರೀ ನದಿತೀರದ ಜೀವನ ಮುರುಕಲು ಸೇತುವೆಯಾಗುತ್ತದೆ. ಮುಂದೆ ಆ ಊರಿನ ಚಿತ್ರಣ ಬದಲಾಗಿ ಹೊಸ ಸೇತುವೆ ನಿರ್ಮಾಣವಾಗುತ್ತದೆ. ಸುಶೀಲಾಳ ಜೀವನದಲ್ಲಿ ರಥ, ಕುದುರೆಗಳು ಓಡತೊಡಗುತ್ತವೆ. ಅಷ್ಟರಲ್ಲಿ ರವಿಯ ಜೀವನ ರಥ ಮುಕ್ಕಾಗಿ ಮೂಲೆಗುಂಪಾಗಿರುತ್ತದೆ. ವ್ಯಾಸರ ಕತೆಗಳಿಗಿಂತ ಪ್ರಾಯಶಃ ಈ ಕಾದಂಬರಿಯಲ್ಲಿ ಹೆಣ್ಣಿಗೆ ದೊರೆತಿರುವ ಮೌಲ್ಯ ದೊಡ್ಡದು. ಸಂಕೇತಗಳು ಬೆಳೆದಂತೆ ಹೆಣ್ಣು ಬೆಳೆಯುತ್ತಾಳೆ. ದುಃಖದ ನದಿಯನ್ನು ದಾಟಿ ಸುಖದ, ಸ್ನೇಹದ ಗಟ್ಟಿ ನೆಲವನ್ನು ಮುಟ್ಟುತ್ತಾಳೆ. ಪ್ರಾಯಶಃ ವ್ಯಾಸರ ಕತೆಗಳಲ್ಲಿ ಹೆಣ್ಣನ್ನು ಇಷ್ಟು ಪ್ರೀತಿಯಿಂದ ಇನ್ನೆಲ್ಲೂ ಬೆಳೆಸಿಲ್ಲ. ಹೀಗಾಗಿ ಈ ಕತೆಯ ಕುರಿತು ಇಷ್ಟು ಲಂಬಿಸಬೇಕಾಯಿತು.

ವ್ಯಾಸ ನವ್ಯದ ಉಬ್ಬರ-ಇಳಿತದ ಕಾಲದಲ್ಲಿ ಪೆನ್ನು ಹಿಡಿದವರು. ನವ್ಯದ ಮೂಲ ಬಂಡವಾಳ ವಸ್ತುವೆನಿಸಿದ ಯಾಯತಿ ಪ್ರಜ್ಞೆ, ಅಂಗುಳಹುಳುವಿನ ಪರಕಾಯ ಪ್ರವೇಶ, ಕಾಮಿ, ಆಮೆ, ಸಂಸ್ಕಾರದ ಪ್ರಾಣೇಶಾಚಾರ್ಯರ ಜೊತೆಗೆ ಆಚಾರ್ಯ ರಜನೀಶ ಇವೆಲ್ಲ ವ್ಯಾಸ ಹೆಣ್ಣನ್ನು ಆದಷ್ಟೂ ದೇಹದ ನೆಲೆಯಲ್ಲಿ ಮಾತ್ರವೇ ಗ್ರಹಿಸಲು ಇರುವ ಗಟ್ಟಿ ಕಾರಣಗಳು. ವ್ಯಾಸರಿಗೆ ಹೆಣ್ಣನ್ನು ಸಂಸ್ಕಾರದ ಚಂದ್ರಿಗಿಂತ ಭಿನ್ನವಾಗಿ ಚಿತ್ರಿಸಲು ಸಾಧ್ಯವೇ ಆಗದಿರುವುದು ಅವರ ಕಥನ ಕಲೆಯನ್ನು ಮೆಚ್ಚುವವರನ್ನು ನೋಯಿಸುತ್ತದೆ. ಹೆಣ್ಣೆಂದರೆ, ಗಂಡು, ತಾಯಿಯಿಂದ ಹೆಂಡತಿಯ ಕಡೆಗೆ ಹೋಗಲು ಇರುವ ಒಂದು ನೇರವಾದ ಏಣಿಯಂತೆ ಎಂಬ ಕಲ್ಪನೆ ಸಂಪ್ರದಾಯ ವಾದಿಗಳಲ್ಲಿದೆ. ಇದನ್ನೇ ಮನಃಶಾಸ್ತ್ರಜ್ಞರು Mother Fixation ಎಂದು ಗುರುತಿಸಿದ್ದಾರೆ. ವ್ಯಾಸರು ಹೆಣ್ಣನ್ನು ಕಾದ ಕಬ್ಬಿಣದಂತೆ ಉದ್ದೀಪಿಸುವ ರಕ್ತ-ಮಾಂಸಗಳಿರುವ, ಆದರೆ ಎಳ್ಳಷ್ಟೂ ಮಿದುಳಿಲ್ಲದ ಪ್ರಾಣಿಯಂತೆ ಚಿತ್ರಿಸುತ್ತಾರೆ.

ಉದಾಹರಣೆಗೆ, 'ಸ್ನಾನ' ಕಿರು ಕಾದಂಬರಿಯಲ್ಲಿ ಸನ್ಯಾನ ಸತ್ಯ ಮತ್ತು ಅವನ ಬಾಲ್ಯ ಗೆಳತಿ ವಿಧವಿ ದೇವಕಿ ಹೀಗೆ ಎದುರುಬದುರಾಗುತ್ತಾರೆ :

'ಸತ್ಯ ಎದೆ ಮುಟ್ಟಿ ತೋರಿದ. ದೇವಿ ಭೂಮಿಯಡಿಗೆ ನುಗ್ಗಿಬಿಡುವಷ್ಟು ಮೈ ಕುಗ್ಗಿಸಿ ಕೊಂಡಳು. ಬೆವರು ಧಾರೆಯಾಗಿ ಅವಳ ಕೆನ್ನೆಗಳಲ್ಲಿ ಇಳಿಯುತ್ತಿತ್ತು. ಕಣ್ಣೀರು ಬೆರೆತಿರಬಹು

ದಾದ ಬೆವರನ್ನು ಸೆರಗಿನಲ್ಲಿ ಒರೆಸುತ್ತ ದೇವಿ, ''ನಾನಿನ್ನು ಹೋಗುತ್ತೇನೆ'' ಎಂದಳು. ಸತ್ಯ ಬೇಡ ಎಂದ. ''ನಾ ನಿನ್ನ ಇನ್ನೂ ನೋಡಬೇಕು. ನಿನ್ನ ಮುಖವನ್ನು ಇನ್ನೂ ನೋಡಬೇಕು... ಈ ರಾತ್ರಿ ಬರುತ್ತೀಯಾ ದೇವಿ — ಎಲ್ಲ ನಿದ್ರಿಸಿದ ಮೇಲೆ ಕೊಳಲು ಊದುತ್ತಿರುತ್ತೇನೆ'' ಎಂದು ಕೇಳಿದ. ದೇವಕಿ ತಲೆಯಾಡಿಸಿ, ಮೌನವಾಗಿ, ನಿಧಾನವಾಗಿ ಆ ಕೋಣೆಯಿಂದ ಹೊರಟುಹೋದಳು.'' ('ಸ್ನಾನ' – ಪುಟ ೧೪೭)

ಆತನ ಆಹ್ವಾನಕ್ಕೆ ಏನೂ ಪ್ರತಿಭಟನೆ, ಪ್ರಶ್ನೆಗಳಿಲ್ಲದೆ ಒಪ್ಪಿಕೊಂಡ ದೇವಕಿ ಮರಳಿ ಬಂದಾಗ ಸತ್ಯ ಅವಳ ದೈಹಿಕ ಕಾಮನೆ ಈಡೇರಿಸಲು ಅಶಕ್ತನಾಗುತ್ತಾನೆ. ಗಂಡಿನ ಅಶಕ್ತತೆ, ಹೆಣ್ಣಿನ ಅತೃಪ್ತತೆ ಇವೆರಡೂ ಇವರ ಬಹುತೇಕ ಕತೆಗಳ ಮತ್ತೊಂದು ಮಗ್ಗುಲು. ಈ ಕತೆಯಲ್ಲಿ ಸ್ವಾಮಿಯಿಂದ ತೃಪ್ತಿ ಹೊಂದದ ದೇವಕಿ ಅರ್ಧಗಂಟೆಯ ಒಳಗೇ ತನ್ನ ಮನೆಯಲ್ಲಿ ಇನ್ನೊಬ್ಬ ಹುಡುಗನೊಂದಿಗೆ ಇರುವುದನ್ನು ಹಿಂಬಾಲಿಸಿ ಬಂದ ಸತ್ಯ ನೋಡುತ್ತಾನೆ.

ಸ್ವಾವಲಂಬನೆಗಾಗಿ ನಗರದ ಮತ್ತು ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ಗೋಕುಲ ನಿರ್ಗಮನ ಮಾಡುತ್ತಿರುವ ಈ ಹೊತ್ತಿನಲ್ಲಿ ವ್ಯಾಸರ ಹೆಣ್ಣುಗಳು ಕೇವಲ ಮುಟ್ಟದಲ್ಲಿ ಬಿಸಿಯಾಗುವ, ಬೆಣ್ಣೆ ಮುದ್ದೆಗಳಂತೆ ಇದ್ದಾರೆ. ಈ ವಿಲಾಸಿನಿಯರಿಗೆ ಆಕಾರವಿದೆ, ಆಕೃತಿಯಿಲ್ಲ, ದೇಹವಿದೆ ಮನಸ್ಸಿಲ್ಲ. ಶಂಕರೀನದಿಯ ಮೇಲೆ ತಲೆ ಎತ್ತಿ ನೋಡಿದರೆ, ಕಾಣುವ ಆಕಾಶದಲ್ಲಿ ಸ್ವಚ್ಛಂದವಾಗಿ ಹಾರುವ ಹೆಣ್ಣು ಬಾನಾಡಿಗಳು ಕಾಣುವುದಿಲ್ಲ.

ವಿಳಾಸ : ನಂ. ೪೫, ೩ನೇ ಮೇನ್, ೨ನೇ ಕ್ರಾಸ್
ಶ್ರೀನಿವಾಸ ನಗರ, ಬೆಂಗಳೂರು - ೫೬೦ ೦೫೦



ಎಂ. ವ್ಯಾಸರ ಕತೆಗಳ ಬಗ್ಗೆ ಒಂದು ಟಿಪ್ಪಣಿ



✦ *ಮು. ಅ. ಶ್ರೀರಂಗ*

ದಿನಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳಲ್ಲಿ, ನಿಯತಕಾಲಿಕೆಗಳಲ್ಲಿ ಸಾಕಷ್ಟು ಕತೆಗಳು ಪ್ರಕಟವಾಗಿದ್ದರೂ, ಅಷ್ಟಾಗಿ ಸಂಕಲನದ ರೂಪದಲ್ಲಿ ಬಾರದ, ಕತೆಗಾರರೂ, ಅಷ್ಟಾಗಿ ಪರಿಚಯವಾಗದೆ ತೆರೆಯಮರೆಯಲ್ಲೇ ಉಳಿದು ಹೋಗಿರುವವರ ಸಾಲಿನಲ್ಲಿ ಎಂ. ವ್ಯಾಸರೂ ಒಬ್ಬರು. ಇವರ ಕಥಾಸಂಕಲನ 'ಕೃತ' ಇತ್ತೀಚೆಗೆ ಪ್ರಕಟವಾಗಿದೆ. ವ್ಯಾಸರ ಇನ್ನೂ ಬೇಕಾದಷ್ಟು ಕತೆಗಳು ಸಂಕಲನದ ರೂಪದಲ್ಲಿ ಬರಬೇಕಾಗಿದೆಯಂತೆ. 'ಕೃತ' ಸಂಕಲನದ ಕತೆಗಳನ್ನು ಆಯ್ದು ಪ್ರಕಟಿಸುವಾಗ ಆಗಿರಬಹುದಾದ ಪ್ರಮಾದವೋ ಏನೋ, ಇಲ್ಲಿನ ಎಲ್ಲಾ ಹದಿನಾರು ಕತೆಗಳೂ 'ಸಾವು-ಕಾಮ'ದ ಸುತ್ತಲೇ ಸುಳಿದಾಡಿವೆ. ಇಲ್ಲಿನ ಕತೆಗಳನ್ನು ಬರೆದ ಕಾಲವನ್ನು ಎಲ್ಲೂ ಸೂಚಿಸಿಲ್ಲ. ಈ ಸಂಕಲನದ ಕತೆಗಳು ವ್ಯಾಸರ 'ಪ್ರಾತಿನಿಧಿಕ' ಕತೆಗಳು ಎಂದು ಭಾವಿಸಿಕೊಂಡರೆ ಕತೆಗಾರರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಏಕೆಂದರೆ, ಸರಿಸುಮಾರು ಎಲ್ಲಾ ಕಥೆಗಳು ಸಾವು-ಕಾಮ ಎಂಬ ತಂತಿಯ ಮೇಲೆಯೇ ಹರಿದಾಡಿವೆ. ಸಾವು-ಕಾಮದ ಸ್ವಯಂ ನಿರ್ಮಿತ ಗಡಿಯಾಚೆಗೆ ಕಥೆಗಾರರ ದೃಷ್ಟಿ ಹಾಯುವುದಿಲ್ಲವಲ್ಲ ಎಂದು ಅನಿಸುತ್ತದೆ. ಈ ಸಂಕಲನ ಪ್ರಾತಿನಿಧಿಕವಲ್ಲ ಎಂದು ಭಾವಿಸಿ, ಆಗಾಗ ಬರೆದಿದ್ದನ್ನೆಲ್ಲಾ ಒಂದೆಡೆ ಸಂಕಲಿಸಿದ್ದಾರೆಂದು ಕೊಂಡರೂ, 'ಏಕತಾನತೆಗೆ' ಕಾರಣ – ಪುನಃ ಕಥೆಗಾರರ ಸಾವು-ಕಾಮದ ಬಗೆಗಿನ ಬಿಡಿಸಿಕೊಳ್ಳಲಾಗದ ವ್ಯಸನವೆಂದು ತಿಳಿಯಬೇಕಾಗುತ್ತದೆ.

ವಿವರಗಳಿಲ್ಲದೆ ಕಾದಂಬರಿಯೊಂದು ಸೊರಗಬಹುದು. ಆದರೆ ಅತಿ ವಿವರಗಳೇ ಕತೆಯೊಂದನ್ನು ದುರ್ಬಲ ಮಾಡಿಬಿಡಬಹುದು. ಇಂತಹ ಅಪಾಯ 'ಕೃತ'ದ ಬಹುಪಾಲು ಕತೆಗಳಲ್ಲಿವೆ. ಕಥೆಗಾರರು ಕಥೆಪ್ರಾರಂಭಿಸುವ ಮುನ್ನ ಮತ್ತು ಕೊನೆಯಲ್ಲಿ ಸಾಕಷ್ಟು ವಿವರಣೆ ನೀಡುತ್ತಾರೆ. ಅಂಗುಲ ಅಂಗುಲವನ್ನೂ ವರ್ಣಿಸುತ್ತಾರೆ — ಕಥೆಯ ಹಂದರಕ್ಕೆ ಉಪಯೋಗವಿಲ್ಲದಾಗಲೂ ಸಹ ಇದರ ಜತೆಗೆ ಇಲ್ಲಿನ ಕಥೆಗಳ ಬಹುಪಾಲು ಕೇಂದ್ರ ಪಾತ್ರಗಳಿಗೆ 'ತತ್ತ್ವಜ್ಞಾನಿ'ಗಳಾಗುವ ಬಯಕೆ ಅದೇಕೋ ಒಂದು ಬಿಡಿಸಿಕೊಳ್ಳಲಾಗದ ವ್ಯಸನವಾಗಿ ಹೋಗಿದೆ. ತಮ್ಮ – ಇತರ ಮಾತು-ಕ್ರಿಯೆಗಳನ್ನು ತಿಕ್ಕಿ ತೀಡಿ ಒರೆಗಲ್ಲಿಗೆ ಹಚ್ಚುತ್ತಲೇ ಇರುತ್ತವೆ. ಸಣ್ಣಕತೆಯ ಒಡಲಿಗೆ ಇಷ್ಟೊಂದು ಮೀಮಾಂಸೆ 'ಭಾರ'ವಾಯ್ತು. ನಾಲ್ಕೈದು ವಾಕ್ಯಗಳಲ್ಲಿ ಮುಗಿಯಬಹುದಾಗಿದ್ದ ಮಾನಸಿಕ ತೊಳಲಾಟದ ಚಿತ್ರಣಕ್ಕೆ ನಾಲ್ಕೈದು ಪುಟಗಳು ವ್ಯಯವಾಗಿವೆ — ಯಾವುದೇ ಫಲವಿಲ್ಲದೆ.

'ಗೋತ್ರ' ಕಥೆಯಲ್ಲಿ ಬರುವ ಅಪ್ಪ ಮತ್ತು ನಾಲ್ಕೈದು ವಯಸ್ಸಿನ ಮಗುವಿನ ನಡುವೆ ನಡೆಯುವ 'ತತ್ತ್ವಜ್ಞಾನ'ದ ಮಾತು-ಕತೆಗಳು ಎಷ್ಟೊಂದು ಅಭಾಸವಾಗಿದೆ ಎಂದರೆ ಕಥೆಯ ಕೊನೆಯ ಹಂತದಲ್ಲಿ ಕತೆಗಾರರಿಗೇ ಇದರ ಅರಿವು ಬಂದು ಕಥಾನಾಯಕನ ಬಾಯಲ್ಲೇ ಅವೆಲ್ಲ ವ್ಯರ್ಥ ಆಲಾಪಗಳೆಂದು ಹೇಳಿಸಿಬಿಟ್ಟಿದ್ದಾರೆ. ಇದರ ಅರಿವಿದ್ದೂ ಅದನ್ನು ಬಲವಂತವಾಗಿ ಕತೆಯಲ್ಲಿ ತುರುಕಿದ್ದು ಏಕೋ ತಿಳಿಯಲಿಲ್ಲ. ಬಹುಶಃ ಓದುಗರಿಗೆ ಒಂದು 'ಹೊಸತನ' ಏನೋ ಈ ಕತೆಯಲ್ಲಿರಬಹುದೆಂಬ ಭ್ರಮೆ ಉಂಟುಮಾಡಲಿಕ್ಕೆಂದು ಕಾಣಿಸುತ್ತದೆ. ಈ 'ಹೊಸತನ'ದ ಬಗ್ಗೆ ಮುಂದೆ ಪ್ರಸ್ತಾಪವಿರುವುದರಿಂದ ಈಗ ಈ ವಿಷಯ ಇಲ್ಲಿಗೆ ನಿಂತಿರಲಿ.

'ಕೃತ' ಸಂಕಲನದ ಬಹುಪಾಲು ಕತೆಗಳ ಕೇಂದ್ರ ಬಿಂದು ಕಾಮ ಮತ್ತು ಆ ಕಾಮಕ್ಕೆ ಉತ್ತರವೇನೋ ಎಂಬಂತೆ ಬಾಗಿಲಲ್ಲೇ ಕಾಯುತ್ತಿರುವ ಸಾವು.

ಈ 'ಕಾಮ' ವಿವಾಹ ಬಾಹಿರವಾಗಿರಬಹುದು; ವಿಕ್ಷಿಪ್ತ ಮನಸ್ಸಿನ ಕಾಮವಿರಬಹುದು; ಅಥವಾ ಪಶು ಮಟ್ಟದ ತರ-ತಮ ಭೇದವಿಲ್ಲದ ಕೀಳು ಲಾಲಸೆಯಿರಬಹುದು. ಇಲ್ಲಿನ ಕತೆಗಳ ಪಾತ್ರಗಳಿಗೆ ಈ ಕಾಮದ ಸುಳಿ ಒಂದಿಲ್ಲೊಂದು ಹಂತದಲ್ಲಿ ಕಾಡುತ್ತದೆ. 'ಹಂದಿ' ಕತೆಯಲ್ಲಿ ''ಮುರಿದುಹೋದ'' ಬೊಂಬೆಯೊಂದರ ಪ್ರತೀಕವನ್ನಿಟ್ಟುಕೊಂಡು ಕೊನೆಯಲ್ಲಿ ಗಂಡ ತನ್ನ ಹೆಂಡತಿಯ ಶೀಲದ ಬಗ್ಗೆ ಸಂಶಯ ಪಡುವ ಸಣ್ಣ ಎಳೆಯೊಂದಿಗೆ ಕತೆ ಮುಗಿಯುತ್ತದೆ. ಕೊನೆಯುತನಕ ಇದರ ಸುಳಿವೇ ಓದುಗನಿಗೆ ಇರುವುದಿಲ್ಲ. ಇದೇನೋ ಬೇರೆ ರೀತಿಯ ಕತೆಯಿರಬಹುದೆಂಬ ಓದುಗನ ಅನಿಸಿಕೆಗೆ ಪುನಃ 'ಕಾಮ' ಅಡ್ಡಗಾಲು ಹಾಕುತ್ತದೆ.

ಇಲ್ಲಿನ ಕತೆಗಳಲ್ಲಿ ಒಂದು ಸಾವಿನ ಪ್ರಸಂಗ, ಆತ್ಮಹತ್ಯೆಯ ಪ್ರಸಂಗ ಬಂದರೆ ಅದರ ಬೆನ್ನ ಹಿಂದೆ ಸಹಜವೋ ಅಸಹಜವೋ ಆದ ಒಂದು ಲೈಂಗಿಕ ಸಮಸ್ಯೆ ಇರುತ್ತದೆ. ನಂತರ ಅದರ ಬಗ್ಗೆ ವಿವರಣೆ, ವಿಚಾರಣೆ, ತತ್ತ್ವಜ್ಞಾನದ ಮಾತುಗಳು ಸರದಿಯಂತೆ ಬಂದುಹೋಗುತ್ತವೆ.

ಇಡೀ ಸಂಕಲನದಲ್ಲಿ ಸಾವು-ಕಾಮದ ಜಗ್ಗಾಟವಿಲ್ಲದೆ ಒಂದು ರೀತಿಯ ಲಘು ಪ್ರಬಂಧದ ರೀತಿಯಲ್ಲಿ ಓದಿಸಿಕೊಂಡು ಹೋಗುವ ಒಂದು ಬರಹ (ಅದನ್ನು ಕಥೆಯೆನ್ನಲು ಆಗದಿದ್ದರೆ!) 'ಯುದ್ಧ'ವೊಂದೆ ಹಳ್ಳಿಯೊಂದರಲ್ಲಿ ನಡೆಯಬಹುದಾದ ವಿವಾಹಬಾಹಿರ ಸಂಬಂಧಗಳು, ಕುಡಿತ, ಅದರಿಂದ ಉದ್ಭವಿಸುವ ಸಣ್ಣಪುಟ್ಟ ಜಗಳಗಳು ಬಡಿದಾಟ, ಪೊಲೀಸರ ಪ್ರವೇಶ, ನಂತರದ ಆಗುಹೋಗುಗಳನ್ನು ತಿಳಿ ಹಾಸ್ಯದ ಲೇಪನದಲ್ಲಿ ಚಿತ್ರಿಸಿದ್ದಾರೆ. ಹದಿನೈದು ಕತೆಗಳ ಉಸಿರು ಬಿಗಿಹಿಡಿದ ಧಾಟಿಯ, ಹುಬ್ಬುಗಂಟಿಕ್ಕಿದ ಭಾವತೀವ್ರತೆಯ ಮಧ್ಯೆ ಒಂದು ರಿಲೀಫ್ ಸಿಕ್ಕಂತೆ ಭಾಸವಾಗುತ್ತದೆ.

ಎಂ. ವ್ಯಾಸರ ಕತೆಗಳು ಈ ನಾಡಿನ ಬಹುತೇಕ ಪತ್ರಿಕೆಗಳಲ್ಲಿ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳಲ್ಲಿ, ನಿಯತಕಾಲಿಕೆಗಳಲ್ಲಿ ಯಾವಾಗಲೂ, ಪ್ರತಿ ಸಂಚಿಕೆಯಲ್ಲೂ ಉತ್ತಮ, ಗಂಭೀರ ಗಟ್ಟಿ ಕತೆಗಳು ಪ್ರಕಟವಾಗುತ್ತವೆ ಎಂದೇನೂ ನಿಯಮವಿಲ್ಲವಲ್ಲ, ಮಾಮೂಲಿ ಸಾಂಸಾರಿಕ ದುಃಖ, ದುಮ್ಮಾನ,ಸ್ಕೂಲು-ಕಾಲೇಜು, ಪ್ರೀತಿ-ಪ್ರೇಮ-ಮದುವೆ- ಮೆಲೋಡ್ರಾಮಗಳು ಕಣ್ಣೀರಿನ ಸಂತೆಯ ಬರಹಗಳಲ್ಲಿ ಆಗಾಗ್ಗೆ ವ್ಯಾಸರ ಮಾಮೂಲಿ ಜಾಡಿನದಲ್ಲದ ಒಂದು ಉದ್ವೇಗದ, ಬೆಚ್ಚಿಬೀಳಿಸಬಹುದಾದ ಮನುಷ್ಯರ

ನಡುವಿನ ಪಶು ಸಹಜಕಾಮದ ಚಿತ್ರಣದ ಕತೆಗಳು ಓದುಗರನ್ನು ಆಕರ್ಷಿಸುತ್ತವೆ. ಇವುಗಳನ್ನು ಬಿಡಿಬಿಡಿಯಾಗಿ (ಅವು ಪ್ರಕಟವಾದಾಗಷ್ಟೇ ಓದಿ) ಕಾಲದ ಅಂತರದಲ್ಲಿ ಓದಿದಾಗ 'ಏನೋ ಒಂದು ಹೊಸತನ' ವಿರುವಂತೆ ಭಾಸವಾಗುತ್ತವೆ. ಅವರ ಕತೆಗಳಿಗೆ ಓದುಗರನ್ನು ಕಾಯುವಂತೆ ಮಾಡುತ್ತವೆ.

ಈ ಸಂಕಲನದಲ್ಲಿ ಅವರ ಕತೆಗಳು ನಿಯತಕಾಲಿಕೆಗಳಲ್ಲಿ ಪ್ರಕಟವಾದಾಗ ಬಂದ ಅನಿಸಿಕೆ-ಅಭಿಪ್ರಾಯ-ವಿಮರ್ಶೆಗಳನ್ನು ಸಂಗ್ರಹಿಸಿ ನೀಡಿದ್ದಾರೆ. ಆ ಎಲ್ಲಾ ಬರಹಗಳಲ್ಲೂ ಈ 'ಹೊಸತನ'ದ ಬಗ್ಗೆ ಮೆಚ್ಚುಗೆ-ಅಭಿಮಾನ ಇದೆ. ಅದೇ ಕಥೆಗಳನ್ನು 'ಕೃತ' ಸಂಕಲನದಲ್ಲಿ ಇಡಿಯಾಗಿ ಒಮ್ಮೆ ಓದಿದರೆ ಏಕತಾನತೆ ಕಣ್ಣಿಗೆ ರಾಚುತ್ತದೆ; ಬೇಸರ ತರಿಸುತ್ತದೆ.

'ಸಾವು ಮತ್ತು ಕಾಮ' ಎಲ್ಲ ಬರಹಗಾರರನ್ನೂ ಕಾಡುವ ವಸ್ತು. ಎಂ. ವ್ಯಾಸರನ್ನೂ ಈ ಉತ್ತರವಿಲ್ಲದ ಸಮಸ್ಯೆ ಬಹುವಾಗಿ ಕಾಡಿರಬಹುದು. ಆದರೆ 'ಸಾವು ಮತ್ತು ಕಾಮ'ದ ಸುತ್ತ ಈಗಾಗಲೇ ಬಂದಿರುವ ಉತ್ತಮ ಕಥೆಗಳ ಜತೆ ವ್ಯಾಸರ ಕತೆಗಳನ್ನು ತುಲನೆ ಮಾಡಿದರೆ ನಿರಾಸೆಯಾಗುತ್ತದೆ. ಯು.ಆರ್. ಅನಂತಮೂರ್ತಿಯವರ ಕಾರ್ತಿಕ, ಪ್ರಶ್ನೆ, ಪ್ರಸ್ಥ, ನವಿಲುಗಳು, ಸೂರ್ಯನ ಕುದುರೆ ಮತ್ತು ಸಂಸ್ಕಾರಗಳಲ್ಲಿ ಸಾವು-ಕಾಮದ ಚಿತ್ರಣವಿದೆ. ಜೀವನದ ಹಲವು ಮುಖಗಳ ಜತೆ, ಭಾವಗಳ ಜತೆ ಅದು ಬೆರೆತಿದೆ. ಆದರೆ ವ್ಯಾಸರ ಕಥೆಗಳಲ್ಲಿ ಸಾವು-ಕಾಮ ಬಿಟ್ಟು ಬದುಕಿನಲ್ಲಿ ಬೇರೇನೂ ಇಲ್ಲವೇನೋ ಎಂಬಷ್ಟರಮಟ್ಟಿಗೆ ಜೀವ-ಜೀವನವನ್ನು ಹಿಂಡಿ ಹಿಂಡಿ ಹಾಕಿದೆ.

ವ್ಯಾಸರೇ ಹೇಳಿಕೊಂಡಿದ್ದಾರೆ — 'ಆಮೇಲೆ ತಂತ್ರಗಳಲ್ಲೂ ವಸ್ತುವಿನ ಆಯ್ಕೆಯಲ್ಲೂ ನನ್ನದೇ ದಾರಿಯೊಂದನ್ನು ಸೃಷ್ಟಿಸಿಕೊಂಡೆ. ಒಂದು ಊರನ್ನು ಸೃಷ್ಟಿಸಿಕೊಂಡೆ. ಒಂದು ನದಿಯನ್ನು ಒಂದು ಗುಡ್ಡವನ್ನು ಸೃಷ್ಟಿಸಿಕೊಂಡೆ. ನನ್ನ ಓದುಗರು ನನ್ನನ್ನು ಮತ್ತಷ್ಟು ಮೆಚ್ಚಿಕೊಂಡರು. ಆಮೇಲೆ ಇದ್ದಕ್ಕಿದ್ದಂತೆ ಬರೆಯುವುದನ್ನು ನಿಲ್ಲಿಸಿಬಿಟ್ಟೆ...' ('ಕೃತ', ಪುಟ - ೧೩)

ಒಂದು ಪರಿಸರವನ್ನು ಕತೆಗಳಿಗಾಗಿ ತಾವೇ ಸೃಷ್ಟಿಸಿಕೊಳ್ಳುವುದು ಹೊಸದೇನಲ್ಲ; ಅದರಲ್ಲಿ ತಪ್ಪೂ ಇಲ್ಲ. ಆರ್ಕೆ ನಾರಾಯಣರ 'ಮಾಲ್ಗುಡಿ', ಯಶವಂತ ಚಿತ್ತಾಲರ 'ಹನೇಹಳ್ಳಿ' ಇವೆಲ್ಲ ಸಾಹಿತ್ಯಾಸಕ್ತರಿಗೆ ಪರಿಚಯವಾಗಿರುವಂತಹವೇ. ಆದರೆ ಅವರಿಬ್ಬರೂ ತಮ್ಮ ಕತೆ-ಕಾದಂಬರಿಗಳಲ್ಲಿ ಆ ಊರಿನ ಇಡೀ ಜೀವನವನ್ನು ಅದರ ಎಲ್ಲ ಮುಖಗಳೊಡನೆ ಚಿತ್ರಿಸಿದರು. ಆ ಊರಿನ ಗಡಿಗಳನ್ನು ದಾಟಿ ಕಥೆಗಳನ್ನು ಬೆಳೆಸಿದರು, ಹೊಸ ಗಾಳಿ ಬೆಳಕಿನ ಪರಿಚಯ ಮಾಡಿಸಿದರು. ಓದುಗರನ್ನೂ ಬೆಳೆಸಿದರು. ಆದರೆ ವ್ಯಾಸರು ತಮ್ಮ ಶಂಕರಿ ನದಿಯನ್ನು ದಾಟಲೇ ಇಲ್ಲ; ದುರ್ಗಾಪುರದ ಗುಡ್ಡ-ಬೆಟ್ಟಗಳಿಂದ ಇಳಿಯಲೇ ಇಲ್ಲ. ವಸ್ತುವಿನ ಆಯ್ಕೆಯಲ್ಲಿ ಈ ಸಂಕಲನದ ಮಟ್ಟಿಗಂತೂ ಹೊಸ ಹಾದಿ ಏನೂ ಕಾಣುತ್ತಿಲ್ಲ.

ವ್ಯಾಸರು ತಮ್ಮ ಮೌನದ ಚಿಪ್ಪೊಡೆದು, ತಮ್ಮ ಸ್ವಯಂನಿರ್ಮಿತ ಗಡಿದಾಟಿ ಹೊಸ ಹಾದಿಯನ್ನು ತುಳಿಯಲಿ, ಹೊಸ ಕತೆಗಳನ್ನು ನೀಡಲಿ ಎಂದು ಅವರ ಓದುಗರು ಆಶಿಸುತ್ತಾರೆ.

ವಿಳಾಸ : ೧೪೩೬, ವಿ.ಟಿ. ರಸ್ತೆ ಕೋಟೆ, ಚನ್ನಪಟ್ಟಣ - ೫೭೧ ೫೦೧

ಮನಸ್ಸಿನ ಮಾರ್ಗದಲ್ಲಿ ನೆನಪಿನ ರಥ

ಎಂ. ವ್ಯಾಸರ ಕಥಾಸೃಷ್ಟಿಯ ಒಂದು ಅಭ್ಯಾಸ



✦ *ಡಾ|| ಯು. ಮಹೇಶ್ವರಿ*

ಕನ್ನಡದಲ್ಲಿ ಸಣ್ಣಕತೆಯನ್ನು ತಮ್ಮ ಮಾಧ್ಯಮವಾಗಿ ಆಯ್ದು ಸಹೃದಯರ ಮನದಲ್ಲಿ ನೆಲೆನಿಂತ ಕೆಲವು ಕತೆಗಾರರಿದ್ದಾರೆ. ಅವರಲ್ಲಿ ಎಂ. ವ್ಯಾಸರಿಗೆ ಒಂದು ವಿಶಿಷ್ಟ ಸ್ಥಾನ ಇದೆ. ಅವರ ಕತೆಗಳು ಎಲ್ಲರಿಗೂ ದಕ್ಕುವಂತಹದಲ್ಲ. ಆದರೆ ಎರಡಕ್ಷರದ ಶೀರ್ಷಿಕೆಗಳಲ್ಲಿ, ದುರ್ಗಾಪುರ ಶಂಕರೀನದಿಗಳ ಆವರಣದಲ್ಲಿ, ವ್ಯಾಸರ ಕಥಾಪಾತ್ರಗಳನ್ನು ಮತ್ತೆ ಮತ್ತೆ ಭೇಟಿ ಮಾಡುತ್ತ ಅವುಗಳ ಮನದ ಮಿಡಿತಗಳನ್ನು ಬಗೆಯುವುದರಲ್ಲಿ ಅತೀವ ಆನಂದವನ್ನು ಅನುಭವಿಸುವ ಅನೇಕ ಓದುಗರಿದ್ದಾರೆ. ಸೃಷ್ಟಿ, ಸ್ಥಿತಿ, ಲಯ — ಈ ಎರಡಕ್ಷರಗಳ ಹಿಂದಿನ ಮರ್ಮವನ್ನು ಬೆದಕಿ ಕೆದಕಿ ತಣಿಯದ ವ್ಯಾಸರು ವಸ್ತುವಿನ ಆಯ್ಕೆಯಲ್ಲಿ, ಕಾವ್ಯಮಯ ವೆನಿಸುವ ಅದರ ಹೆಣಿಗೆಯಲ್ಲಿ ಕೊನೆಗೊಂದು ಶೀರ್ಷಿಕೆಯನ್ನು ಕೊಡುವಲ್ಲಿ — ತನ್ನದೇ ದಾರಿಯನ್ನು ಕಂಡುಕೊಂಡವರು. ವ್ಯಾಸರು ಬರೆಯತೊಡಗಿದ ಕಾಲಕ್ಕೆ ಬರುತ್ತಿದ್ದ ಸಣ್ಣಕತೆಗಳ ಸಿದ್ಧಮಾದರಿ ಅಥವಾ ಸ್ವರೂಪ ಅವರ ಕಥಾಕಲ್ಪನೆಯ ಹರಹಿಗೆ (ಸ್ವೋಪಜ್ಞತೆಗೆ) ಸಾಕಾಗದೆ ಹೋಯಿತು. ಹಾಗಾಗಿ ಅವರು ತಮ್ಮ ದೃಷ್ಟಿಗೆ ಅನುಗುಣವಾದ ಸೃಷ್ಟಿಯ ಚೌಕಟ್ಟನ್ನು ರೂಪಿಸಿಕೊಳ್ಳುವುದು ಅನಿವಾರ್ಯವಾಯಿತು.

ಅರವತ್ತರ ದಶಕದ ಆರಂಭದಲ್ಲೇ ಮಲ್ಲಿಗೆ, ಮಯೂರ, ತುಷಾರದಂತಹ ಅನೇಕ ಪತ್ರಿಕೆಗಳಲ್ಲಿ ನಿಯತವಾಗಿ ಕಾಣಿಸಿಕೊಳ್ಳುತ್ತಿದ್ದ ವ್ಯಾಸರ ಕತೆಗಳು ಕನ್ನಡಕ್ಕೆ ಒಬ್ಬ ವಿಶಿಷ್ಟ ಕತೆಗಾರನನ್ನು ಪರಿಚಯಿಸಿದುವು. ಅವರ ಮೊದಲ ಕಥಾಸಂಕಲನ 'ಕಂಬನಿ' ಪ್ರಕಟವಾದಾಗ (೧೯೬೫) ಅವರ ಕತೆಗಳ ಅನನ್ಯ ಜಾಡನ್ನು ಗುರುತಿಸಲಾಗಿತ್ತು. ಭಾಷೆ, ಶೈಲಿ, ವಸ್ತುವಿನ್ಯಾಸ ವ್ಯಾಸರ ಖಾಸಗಿ ಸೊತ್ತಾಗಿ ಒಂದೇ ಲಹರಿಯ ಕೆಲವು ಕತೆಗಳನ್ನು ಒಟ್ಟಾಗಿ ನೀಡಿದ್ದು ಕನ್ನಡದಲ್ಲಿ ಅದು ಮೊದಲು ಎಂಬ ಅಂಶವನ್ನು ಹಾಗೂ ಎಲ್ಲ ಕತೆಗಳು ಒಂದೇ ಕತೆಯ ಬೇರೆ ಬೇರೆ ಭಾಗಗಳಾಗಿ ಕಂಡುಬರುವ ಕುರಿತು ಸುಬ್ರಾಯ ಚೊಕ್ಕಾಡಿಯವರು 'ಕಂಬನಿ'ಯ ತಮ್ಮ ಮಾತಿನಲ್ಲಿ ಹೇಳಿದ್ದರು. ಗಂಭೀರ ಮೌನದಲ್ಲಿ ಚಿತ್ತವನ್ನು ಕದಡುವ ದುರಂತದ ನೆನಪು ವ್ಯಾಸರ ಕತೆಗಳನ್ನೋದಿದ ಮೇಲೆ ನಮ್ಮಲ್ಲುಳಿಯುವ ಬಗೆಗೂ ಅವರು ಬರೆದಿದ್ದರು. ನಾಡಿಗೇರ ಕೃಷ್ಣರಾಯರು ಮುನ್ನುಡಿಯಲ್ಲಿ ಹೇಳಿದ ಮಾತು ಕೂಡ ವ್ಯಾಸರ ಅನನ್ಯತೆಯನ್ನು ಗುರುತಿಸಿದ ಬಗೆಯೇ ಆಗಿತ್ತು. ''ಯಾವ ಸಮಸ್ಯೆಗಳನ್ನೂ ಅವರು (ವ್ಯಾಸರು) ಬಿಡಿಸಲು

ಹೋಗುವುದಿಲ್ಲ. ಸಮಸ್ಯೆ ಒದಗಿದಾಗ, ಮನುಷ್ಯ ಹೇಗೆ ಆಲೋಚಿಸುತ್ತಾನೆ, ವರ್ತಿಸುತ್ತಾನೆ ಎಂದು ಬಹು ಮಾರ್ಮಿಕವಾಗಿ ಪರಿಣಾಮಕಾರಿಯಾಗಿ ಚಿತ್ರಿಸುವ ಕಲೆ ಅವರಿಗೆ ಸಿದ್ಧಿಸಿದೆ'' ಎಂದು ಮುಂತಾಗಿ ಅವರು ಬರೆದಿದ್ದರು. ಮುಂದೆಯೂ ವ್ಯಾಸರು ಕತೆಗಳನ್ನು ನಿರಂತರವಾಗಿ ಬರೆಯುತ್ತ ಬಂದರೂ ಅವರ ಎರಡನೆಯ ಕಥಾಸಂಕಲನ 'ಕೃತ' ಮಾತ್ರ ಸ್ವಲ್ಪ ತಡವಾಗಿಯೇ ಬಂತು (೧೯೯೮). ಬಿಡಿಬಿಡಿಯಾಗಿ ಪ್ರಕಟವಾಗಿದ್ದ ಅವರ ಕಿರುಕಾದಂಬರಿಗಳು ಕೂಡ ಈಗ 'ಸ್ನಾನ' ಶೀರ್ಷಿಕೆಯಲ್ಲಿ ಸಂಕಲಿತವಾಗಿದ್ದು — ಈ ಎಲ್ಲ ಕೃತಿಗಳನ್ನು ಒಂದು ಚೌಕಟ್ಟಿನಲ್ಲಿರಿಸಿ ಅಧ್ಯಯನ ಮಾಡುವ ಅಗತ್ಯವಿದೆ. ಅಲ್ಲದೆ ಪತ್ರಿಕೆಗಳಲ್ಲಿ ಬಹಳ ಹಿಂದೆಯೇ ಪ್ರಕಟವಾಗುತ್ತಿದ್ದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಅವರ ಲೇಖನಗಳು ಕೂಡ ವ್ಯಾಸರು ಸ್ವೋಪಜ್ಞಚಿಂತನೆಯ ಬರಹಗಾರರೆಂಬುದನ್ನು ಸ್ಪಷ್ಟಪಡಿಸುತ್ತವೆ. ವಿಮರ್ಶೆಯ ಕ್ಷೇತ್ರ ಇಹುಮಟ್ಟಿಗೆ ಅಲಕ್ಷಿಸಿದ ನಮ್ಮ ನೆಲದ ಈ ಸತ್ವಯುತ ಬರಹಗಾರನ ಕೃತಿಗಳನ್ನು ಒಟ್ಟಾಗಿ ಅಭ್ಯಾಸ ಮಾಡುವುದು ಫಲಪ್ರದವಾದೀತೆಂಬ ವಿಶ್ವಾಸ. ವ್ಯಾಸರ ಕತೆಗಳಿಗೆ ಆಳವಾದ ವೈಚಾರಿಕ ನೆಲೆಗಟ್ಟು ಇರುವುದರಿಂದ ಅವರ ವೈಚಾರಿಕ ಲೇಖನಗಳ ಬೆಳಕಿನಲ್ಲಿ ಕತೆಗಳನ್ನು ಅರ್ಥೈಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಮನುಷ್ಯನನ್ನು ನಿಸರ್ಗದ ಕೂಸಾಗಿ ಕಾಣುವ ವ್ಯಾಸರು ಮಾನವಶಾಸ್ತ್ರ ಮನಃಶಾಸ್ತ್ರಗಳ ನೆಲೆಗಳಿಂದ ಈ ಬದುಕನ್ನು ವಿಶ್ಲೇಷಿಸುತ್ತಾರೆ. 'ಕಂಬನಿ'ಯ 'ಅಂತರಂಗ'ದಲ್ಲಿ ಕತೆಗಾರ ವ್ಯಾಸರು ''ಮನಸ್ಸಿನಲ್ಲಿ ಹುಟ್ಟಿದ್ದು ಕಾಡುತ್ತಿರುವ ಭಾವನೆಗಳಿಗೆ ನನಗೆ ತೋಚಿದಂತೆ ರೂಪ ಕೊಡಲು ಪ್ರಯತ್ನಿಸುತ್ತಲೇ ಇದ್ದೇನೆ.'' ಎಂದು ಹೇಳಿದ್ದಿರಬಹುದು. ಆದರೆ ಇದರಿಂದಲೇ ಅವರನ್ನು ಕೇವಲ ಭಾವನಾವಶತೆಯ ಒಬ್ಬ ರೊಮ್ಯಾಂಟಿಕ್ ಬರಹಗಾರ ಎಂದು ಸರಳೀ ಕರಿಸಲು ಸಾಧ್ಯವಿಲ್ಲ. ಮುಂದಿನ ಅನೇಕ ಕತೆಗಳಲ್ಲಿ ನಿಷ್ಠುರ ವಾಸ್ತವದ ಪದರಗಳನ್ನು ಸೀಳಿ ಸೀಳಿ ನೋಡಬಲ್ಲ ಸೂಕ್ಷ್ಮತೆಯನ್ನು ಅವರು ಮೆರೆದಿದ್ದಾರೆ. ನವ್ಯಪಂಥದ ಸಣ್ಣಕಥೆಗಳಲ್ಲಿ ಹೆಚ್ಚಾಗಿ ಸಿಗುವ ದುರ್ಬಲ ನಾಯಕರು ಅವರ ಕತೆಗಳಲ್ಲಿ ಇದ್ದರೂ ವ್ಯಾಸರ ಒಟ್ಟು ಆಸಕ್ತಿಯ ಕೇಂದ್ರ ಮನುಷ್ಯ. ಅವನ ಎಲ್ಲ ಮಿತಿ, ದೋಷ, ದೌರ್ಬಲ್ಯಗಳನ್ನು ಕಂಡುಕೊಂಡೇ ಅವನ ಪಾಡನ್ನು ಕುರಿತಾದ ಅಪಾರ ಅನುಕಂಪದ ಎಳೆ ವ್ಯಾಸರ ಬರಹಗಳಲ್ಲಿ ಗೋಚರವಾಗುತ್ತದೆ.

ಬುದ್ಧನಿಂದ ಗಾಂಧಿಯವರೆಗೆ ಮನುಷ್ಯನ ಮೂಲ ಸ್ವಭಾವದ ವಿರುದ್ಧ ಹೋರಾಟ ನಡೆದರೂ ಅದರ ವಿರುದ್ಧ ಕಾಲ್ಪನಿಕ ಜಯವನ್ನು ಸಾರಿದರೂ ಅದು ಮೂಲತಃ ಬದಲಾಗಲೇ ಇಲ್ಲ ಎಂಬ ಅರಿವು ವ್ಯಾಸರದು. ಅದಕ್ಕಿಂತ ಮುಖ್ಯವಾಗಿ ಅವರು ಗುರುತಿಸುವ ಅಂಶವೆಂದರೆ ಇವುಗಳ (ಅಂದರೆ ಬುದ್ಧ, ಗಾಂಧಿ ಮುಂತಾದವರ ತತ್ವಗಳು) ಅರಿವೇ ಇಲ್ಲದೆ ಬೃಹತ್ ಜನವಿಭಾಗ ಬದುಕಿ ಬರುತ್ತಿರುವುದು. ನಮ್ಮ ನಿಮ್ಮ ಮಧ್ಯೆ ನಮಗಿಂತ ಭಿನ್ನ ಮುಖಭಾವದಿಂದ ಪ್ರತ್ಯಕ್ಷವಾಗುವ ಅಂತಹ ಚಿರಕಾಲ ಸಾಕ್ಷಿಗಳಾಗಿ ಅವರಿಗೆ ಕಾಣುತ್ತವೆ. ಹಾಗಾಗಿ ವ್ಯಾಸರ ಆಸಕ್ತಿಯ ಕೇಂದ್ರ ಈ ಮೊದಲೇ ಗುರುತಿಸಿದಂತೆ 'ಮನುಷ್ಯನಾಗಿ ಮನುಷ್ಯ' ಅಥವಾ ಕೇವಲ 'ಮನುಷ್ಯ' ಎಂದರೂ ಸರಿಯೇ.

ಮರಗಿಡಗಳೂ ಸೇರಿದಂತೆ ಪ್ರತಿಯೊಂದು ಜೀವಿಯೂ ಸ್ವಾರ್ಥಚಿಂತನೆಯಿಂದ ಪ್ರೇರಿತ ವಾದವುಗಳು ಎಂದು ಗಮನಿಸುವ ವ್ಯಾಸರು ಡಾರ್ವಿನನ 'Survival of the fittest' ಸಿದ್ಧಾಂತಕ್ಕೆ ಒತ್ತು ಕೊಡುತ್ತಾರೆ. ಪ್ರಾಣಿ ಪ್ರಪಂಚದ ಸೃಷ್ಟಿಗೆ, ಸೃಷ್ಟಿ ಪ್ರಸಾರಕ್ಕೆ ಜೀವಕಾರುಣ್ಯ

ಕ್ಕಿಂತಲೂ ಕ್ರೌರ್ಯವನ್ನೇ ಪ್ರಧಾನ ಕಾರಣವನ್ನಾಗಿ ಕಾಣುವ ಅವರು ಶಾಂತಿಗಿಂತ ದಂಗೆ, ಸಹಬಾಳ್ವೆಗಿಂತ ಯುದ್ಧ – ಅವಕ್ಕೆ ಹೆಚ್ಚು ಇಷ್ಟವಾಗಿರುವುದನ್ನು ಗುರುತಿಸಿದ್ದಾರೆ. ಸ್ವನಾಶ ಪ್ರವೃತ್ತಿಯು ಆದಿಸೃಷ್ಟಿಯೆಂದು ಕರೆಯಬಹುದಾದ ಅಮೀಬದಿಂದಲೇ ಆರಂಭ ಎನ್ನುವ ಸೂಕ್ಷ್ಮಾವಲೋಕನ (observation) ಕುತೂಹಲಕರ. ಇತರ ಪ್ರಾಣಿಗಳಿಗಿಂತ ಸ್ವಲ್ಪ ಭಿನ್ನವಾಗಿ ಪರಿಸರಕ್ಕೆ ಹೊಂದಿಕೊಳ್ಳುವ ಗುಣದ ಮನುಷ್ಯನಿಗೆ ಸಂಘಜೀವನ ಅನಿವಾರ್ಯವಾದುದು. ಅದನ್ನು ಅನುಸರಿಸಿ ನಾಜೂಕುತನವೂ ಕಾಣಿಸಿಕೊಂಡದ್ದು, ಅದುವೇ ಮುಂದುವರಿದು ನಾಗರಿಕತೆ – ಸಂಸ್ಕೃತಿ – ಧರ್ಮಗಳಾಗಿ ವಿಕಾಸಗೊಂಡದ್ದು... ಹೀಗೆ ಅವರ ಚಿಂತನೆಯ ಜಾಡು ಸಾಗುತ್ತದೆ. ''ವಾಸ್ತವವಾಗಿ ಇವೆಲ್ಲ ಗಟ್ಟಿಯಾಗಿ ಅಸ್ತಿತ್ವದಲ್ಲಿರುವ ದೃಶ್ಯಸ್ಥಿತಿಗಳಲ್ಲ, ಬದಲಾಗಿ ಅಸತ್ಯ ಸತ್ಯಗಳು. ಈ ಮುಖವಾಡಗಳು ಅದೃಶ್ಯ ದೃಶ್ಯಗಳು. ಇವುಗಳಿಲ್ಲದೆ ಮನುಷ್ಯ ಇಂದಿನ ನಾಗರಿಕ ಅರ್ಥದಲ್ಲಿ ಬದುಕುವುದು ಕೂಡ ಸಾಧ್ಯವಿಲ್ಲ'' — ಎನ್ನುವುದು ಅವರ ಮಾತು. ಹಾಗಾಗಿ ಹುಸಿಯನ್ನೇ ನಿಜವೆಂದು ಭ್ರಮಿಸಿ ಬಾಳುವ ನಯವಂಚನೆ ನಾಗರಿಕ ಬದುಕಿಗೆ ಅನಿವಾರ್ಯವೆಂದು ಅವರು ಕಾಣುತ್ತಾರೆ.

ಮನುಷ್ಯ ಬದುಕಿನ ಚೆಲುವಿನ ಮುಖಗಳಿಗಿಂತ ಹೆಚ್ಚಾಗಿ ದುಃಖ ಕುರೂಪಗಳನ್ನೇ ವ್ಯಾಸರು ತಮ್ಮ ಕತೆಗಳಲ್ಲಿ ಹೆಚ್ಚಾಗಿ ಏಕೆ ಚಿತ್ರಿಸುತ್ತಾರೆ? — ಎನ್ನುವುದೊಂದು ಪ್ರಶ್ನೆ. ಸಂಸ್ಕೃತಿಯ ನಾನಾ ಮುಖಗಳನ್ನು, ಅದರ ಘನತೆ – ಗಾಂಭೀರ್ಯ– ಮುದ್ದುಗಳನ್ನು ಮಾಸ್ತಿಯಂತಹ ಕತೆಗಾರರು ಚಿತ್ರಿಸಿದ್ದಾರೆ ನಿಜ. ಆದರೆ ಬದುಕಿಗೆ ಇನ್ನೊಂದು ಮುಖವೂ ಇದೆ. ವ್ಯಾಸರು ಅದನ್ನು ಕಾಣುವ ಪ್ರಯತ್ನ ಮಾಡಿದ್ದಾರೆ. ಎರಡೂ ಸೇರಿದರೆ ತಾನೆ ಚಿತ್ರ ಪೂರ್ಣವಾಗುವುದು?

ಮನುಷ್ಯನನ್ನು ಮನೋದೇಹಿಯಾಗಿ ಕಂಡ ಶಿವರಾಮಕಾರಂತರು ಗಂಡು-ಹೆಣ್ಣುಗಳ ಸಂಬಂಧದ ಸೂಕ್ಷ್ಮವನ್ನು ಅವರ ಗಾಢತೆಯಲ್ಲಿ ಚಿತ್ರಿಸುವ ಪ್ರಯತ್ನವನ್ನು ತಮ್ಮ ಅನೇಕ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಮಾಡಿದರು. ಬಹುಶಃ ಕಾರಂತರು ನಿಲ್ಲಿಸಿದಲ್ಲಿಂದ ವ್ಯಾಸರು ತೊಡಗಿದರೆಂದೆನಿಸುತ್ತದೆ. – ''ಮನುಷ್ಯ ಮನಸ್ಸನ್ನು ಅಂಕೆಯಲ್ಲಿಡಲು, ಶಿಸ್ತಿನ ಹದ್ದುಬಸ್ತಿನಲ್ಲಿಡಲು ಇನ್ನೊಂದು ಮನಸ್ಸಿನ ಶಾಸನಗಳಿಂದ ಸಾಧ್ಯವಾಗಲಾರದು. ಬ್ರಹ್ಮಾಂಡ ವಿಸ್ತಾರವಿರುವ ಮನಸ್ಸು ಅದರದೇ ರೀತಿಯಲ್ಲಿ ಸುಖಿಸಲೂ, ದುಃಖಿಸಲೂ ಕಲಿಯುತ್ತದೆ. ಧರ್ಮ ಮತ್ತು ಧರ್ಮಗ್ರಂಥಗಳು ಮನುಷ್ಯ ಮನಸ್ಸನ್ನು ನಿಯಂತ್ರಿಸಲು ರಚಿತವಾಗಿದ್ದು ಇವು ಒಂದರ್ಥದಲ್ಲಿ ಸಾಹಿತ್ಯ ಕೃತಿಗಳೇ'' ಎನ್ನುವ ವ್ಯಾಸರು ''ಸಾಹಿತ್ಯ ಕೃತಿಗಳ ಉದ್ದೇಶವೂ ಹೆಚ್ಚು ಕಡಿಮೆ ಅದೇ'' ಎಂಬುದಾಗಿ ಹೇಳುತ್ತಾರೆ. ಮುಕ್ತಕಾಮ ಅಥವಾ ಸ್ವೇಚ್ಛಾಚಾರದಿಂದ ಬವಣೆಗೊಳಗಾಗುವವಳು, ತಿರಸ್ಕೃತಳಾಗುವವಳು ಹೆಣ್ಣೇ ಆಗಿರುವುದರಿಂದ ಧರ್ಮದ ಕಟ್ಟುಪಾಡುಗಳು ಅವು ಕೃತಕವೇ ಆಗಿದ್ದರೂ ಅನಿವಾರ್ಯ ಎಂಬ ಅನಿಸಿಕೆ ವ್ಯಾಸರದು. ಅವರ ಕತೆಗಳ ಮೇಲ್ನೋಟದ ಓದಿಗೆ ಅವರು ಮುಕ್ತಕಾಮದ ಪ್ರತಿಪಾದಕರೇನೋ ಎಂದು ಅನಿಸಿಬಿಡಬಹುದು. ಆದರೆ ಸಾಮಾಜಿಕ ಕಟ್ಟುಪಾಡುಗಳನ್ನು ಉಲ್ಲಂಘಿಸುವ, ಉಲ್ಲಂಘಿಸಿ ನರಳುವ, ಪಾಡುಪಡುವ ಅನೇಕ ಪಾತ್ರಗಳನ್ನು 'ಅಯ್ಯೋ ಮನುಷ್ಯಾ' ಎಂಬ ಅನುಕಂಪದಿಂದ ಅವರು ಕಾಣುತ್ತಾರೆ ಹೊರತು, ಅದರ ಸಮರ್ಥನೆ ಎಂಬ ನೆಲೆಯಲ್ಲಿ ಅಲ್ಲ. ಪತಿಪತ್ನಿಯರ ಮಧ್ಯೆ ನಿಷ್ಠೆ ಕುಟುಂಬ ವ್ಯವಸ್ಥೆಯ ನೆಲೆಗಟ್ಟು ಭದ್ರವಾಗಿರುವುದು ಸಾಮಾಜಿಕ ವ್ಯವಸ್ಥೆಗೆ ಪೂರಕವೆಂದೇ ಅವರ ನಿಲುವು.

ಸಾಹಿತ್ಯ, ಕಲೆ ಅಥವಾ ಇತರ ಮನೋರಂಜನೆಗಳಲ್ಲಿ ಸ್ತ್ರೀ-ಪುರುಷ ಸಂಬಂಧಗಳಿಗೆ 'ವಜ್ರ ಕಠೋರ ನಿಯಮ'ಗಳಿಲ್ಲ ಎನ್ನುವುದರ ಜೊತೆಗೆ ವಾಸ್ತವ ಬದುಕು ಮಾತ್ರ ಹಾಗಿಲ್ಲ — ಎನ್ನುವುದನ್ನೂ ಅವರು ಮರೆಯಲಾರರು. ''ಒಂದು ಸಹಜಕ್ರಿಯೆಗೆ ಹಲವು ಮುಖಗಳನ್ನೂ, ವರ್ಣಗಳನ್ನೂ, ನಾದಗಳನ್ನೂ, ಅಭಿನಯಗಳನ್ನೂ ಕೊಡುವ ಕೆಲಸ ಸಾಹಿತ್ಯ ಕಲೆಗಳಿಂದ ಜರುಗುತ್ತದೆ'' ಎಂಬ ಮಾತುಗಳ ಮೂಲಕ ಸಾಹಿತ್ಯದಂತಹ ಮಾಧ್ಯಮಗಳ ಸೂಕ್ಷ್ಮ ಆಯಾಮಗಳ ಕುರಿತು ಗಮನ ಸೆಳೆಯುತ್ತಾರೆ.

ನಮ್ಮ ಪರಿಸರದಲ್ಲಿ ಗಂಡು ಹೆಣ್ಣಿನ ಸಂಬಂಧಗಳ ನಿರ್ದಿಷ್ಟ ಬಗೆಗಳು ಸಂಬಂಧ ವಾಚಕಗಳಲ್ಲಿ ಮಾಮೂಲಾಗಿ ಸೂಚಿತವಾದರೂ ನೈತಿಕ/ಅನೈತಿಕ ಪರಿಧಿಯಡಿಯಲ್ಲಿ ಸರಳೀಕರಿಸಿ ನೋಡಲಾಗದ ಸೂಕ್ಷ್ಮಗಳನ್ನೊಳಗೊಂಡ ಎಳೆಗಳನ್ನು ವ್ಯಾಸರು ಗುರುತಿಸುತ್ತಾರೆ. ಮನುಷ್ಯ ಜೀವಿತದ ಈ ಮೂಲಭೂತ ಎಳೆ ಕೆಲವೊಮ್ಮೆ ಹೆದರಿಕೆ ಹುಟ್ಟಿಸಬಹುದು, 'ಇದೇನಿದು ವಿಚಿತ್ರ ಪರಿ!' ಎಂದು ಅಚ್ಚರಿಯನ್ನೋ/ಜಿಗುಪ್ಸೆಯನ್ನೋ ಮೂಡಿಸಬಹುದು. ಈ ವಿಕೃತಗಳೇ ಬದುಕೆಂದಲ್ಲ. ಆದರೆ ಕತೆಯಾಗುವವುಗಳು ಈ ವಿಕೃತಗಳು ಅಥವಾ ವಿಶೇಷಗಳು. ಎಲ್ಲ ಸರಳವಾಗಿ, ನೇರವಾಗಿ, ಇರಬೇಕಾದರೆ ಇದ್ದರೆ ಅದು ಕತೆಯಾಗುವುದು ಹೇಗೆ? ವ್ಯಾಸರ ಬೇರೆ ಬೇರೆ ಕತೆಗಳು ಶೋಧಿಸುವ ಗಂಡು-ಹೆಣ್ಣಿನ ಸಂಬಂಧದ ವಿನ್ಯಾಸಗಳು ಸುದ್ದಿಯಾಗುವ ನಿಜಗಳೇ.

ವ್ಯಕ್ತಿಕೇಂದ್ರಿತ ನೆಲೆಯಲ್ಲಿ ತೊಡಗಿಕೊಳ್ಳುವ ವ್ಯಾಸರ ಕತೆಗಳು ಸಮಷ್ಟಿ ನೆಲೆಯ ಹಬ್ಬ-ಆಚರಣೆ... ಇತ್ಯಾದಿ ಅಂಶಗಳನ್ನು ಅಷ್ಟಾಗಿ ತಮ್ಮ ತೆಕ್ಕೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಮೌಲ್ಯ ಪ್ರತಿಪಾದನೆ ಅಥವಾ ಸಂಸ್ಕೃತಿಯ ಮುಗ್ಧ ಕೀರ್ತನೆ ವ್ಯಾಸರ ಕಾಳಜಿ ಅಲ್ಲ. ಸಂಸ್ಕೃತಿ — ಎಷ್ಟೇ ತಿದ್ದಿದರೂ ತೇಪೆ ಹಾಕಿದರೂ ಮನುಷ್ಯನ ಒಳಗಿನ ಪ್ರವೃತ್ತಿಗಳು ಇದ್ದೇ ಇರುತ್ತವೆ. ಮುಖವಾಡಗಳು, ಶಿಷ್ಟಾಚಾರಗಳು ಸಭ್ಯತೆಯ ಸೋಗನ್ನು ಧರಿಸಬಹುದು. ಆದರೆ ಸ್ವಾರ್ಥ ಪ್ರವೃತ್ತಿ ಜೀವಿಯ ಮೂಲಭೂತ ಗುಣವೆಂಬುದು ಅವರ ಕತೆಗಳ ಆಶಯ. ಮುಖವಾಡಗಳನ್ನು ಹೊತ್ತು ಕಿರಿಕಿರಿಯನ್ನು ಅನುಭವಿಸುವ ಮತ್ತು ಅವುಗಳನ್ನು ಕಳಚಿ ನಿಜವಾಗುವ ಪಾತ್ರಗಳನ್ನು ಅವರ ಕತೆಗಳಲ್ಲಿ ಕಾಣುತ್ತೇವೆ.

ವ್ಯಾಸರ ಹೆಚ್ಚಿನ ಕತೆಗಳಲ್ಲಿ ಪ್ರಾಣಿ ಪ್ರಪಂಚದ ಚಿತ್ರಗಳು, ಚರ್ಯೆಗಳು ಮನುಷ್ಯ ಲೋಕದ ಘಟನೆಗಳಿಗೆ ಸಮಾನಾಂತರವಾಗಿ ದಾಖಲುಗೊಂಡಿರುವ ಬಗೆಗೆ ಈಗಾಗಲೇ ಪ್ರಸ್ತಾಪಿಸಿದೆ. ಇದು ಸಾದೃಶ್ಯ ಮತ್ತು ವೈದೃಶ್ಯ — ಎರಡೂ ಉದ್ದೇಶಗಳಿಗಾಗಿ ಎಂದೆನಿಸುತ್ತದೆ. ಎಷ್ಟೇ ತಿದ್ದಿದರೂ ಪ್ರಾಣಿ ಪ್ರವೃತ್ತಿ ಮರೆಯಾಗುವುದಿಲ್ಲ ಎಂಬ ಸಾದೃಶ್ಯದ ಅಂಶ ಒಂದೆಡೆಯಾದರೆ — ಮನುಷ್ಯರಲ್ಲಿ ಗಂಡುಹೆಣ್ಣಿನ ಸಂಬಂಧದ ಸ್ವರೂಪ ಉಳಿದ ಪ್ರಾಣಿಗಳಂತಿಲ್ಲ ಎಂಬ ವೈದೃಶ್ಯವೂ ಇದೆ. ಪ್ರಾಣಿ ಪ್ರಪಂಚದಲ್ಲಿ ಕ್ರಿಯೆಯೇ ಪ್ರಧಾನವಾದರೆ ಇಲ್ಲಿ ಕ್ರಿಯೆಯ ಹಿಂದೆ ಮುಂದೆ ಮಾತಿದೆ; ಮೌನವಿದೆ; ನಿರೀಕ್ಷೆ ಇದೆ; ಸ್ಮೃತಿ – ವಿಸ್ಮೃತಿಗಳಿವೆ. ವ್ಯಾಸರ ಕತೆಗಳ ನಾಯಕನಿಗೆ ಒಂದು 'ಗತ' (past) ಇರುತ್ತದೆ. ಅವರ ನೆನಪುಗಳಿಂದ ಒಂದಲ್ಲ ಒಂದು ಬಗೆಯಲ್ಲಿ ಜ್ವಲಿಸುವ ಮನಸ್ಸುಳ್ಳವರಾಗಿ ಅವರು ಕಾಣಿಸುತ್ತಾರೆ. ಮನುಷ್ಯನಾದವನಿಗೆ ಮನಸ್ಸಿನಿಂದ ಬಿಡುಗಡೆಯಿಲ್ಲ. ಅದು ಸುಖಕ್ಕೂ ದುಃಖಕ್ಕೂ ಪಾಲುದಾರ ಹಾಗೂ ಸಾಕ್ಷಿ. ಹೀಗಾಗಿ ಅವರ ಕತೆಗಳಲ್ಲಿ ಒಟ್ಟಾಗಿ ಕಾಣಿಸುವ ಮನಸ್ಸಿನ ಪ್ರಾಧಾನ್ಯವನ್ನು ಸೂಚಿಸಲು ಈ

ಬರಹಕ್ಕೆ ಅವರದೇ ಕೃತಿಯ (ರಥ) ಒಂದು ಸಾಲನ್ನು ಶೀರ್ಷಿಕೆಯಾಗಿ ಕೊಡಲಾಗಿದೆ —**'ಮನಸ್ಸಿನ ಮಾರ್ಗದಲ್ಲಿ ನೆನಪಿನ ರಥ.'**

ರೂಪಾತ್ಮಕ ಅಭಿವ್ಯಕ್ತಿ ಭಾಷೆಯ ಕುಸುರಿ, ನಾಜೂಕುಗಳು ವ್ಯಾಸರ ಅನನುಕರಣೀಯ ಹಾಗೂ ಸ್ವೋಪಜ್ಞ ಅಂಶಗಳಾಗಿದ್ದು ಅವರನ್ನು ರಮ್ಯ ಅಥವಾ ನವ್ಯ ಎಂದು ಸರಳೀಕರಿಸಿ ಒಂದು ಗುಂಪಿಗೆ ಸೇರಿಸುವುದು ಸಾಧ್ಯವಾಗದು. ಅವರ ಕತೆಗಳಲ್ಲಿ ಕತೆ (Story)ಯಷ್ಟೇ 'ಕತೆಯಾಗುವ ಕ್ರಿಯೆ'ಯೂ ಮುಖ್ಯವಾಗುತ್ತದೆ. ಅವರ ಕತೆಗಳ ಕತೆ(Story) ಯನ್ನು ಸಂಗ್ರಹಿಸಿ ಹೇಳುವುದು ಕಷ್ಟ. ಕತೆಗಾರ ಕತೆಯೊಳಗಿಂದಲೂ ಹೊರಗಿನಿಂದಲೂ ಮಾತಾಡು ವುದು ಅವರ ಕತೆಗಳ ಇನ್ನೊಂದು ವೈಶಿಷ್ಟ್ಯ.

''ಕತೆಗಾರ ಒಂದಲ್ಲ ಒಂದು ರೀತಿಯಿಂದ ತನ್ನ ಪಾತ್ರಗಳೊಂದಿಗೆ ಬೆರೆಯಬೇಕು. ಇಲ್ಲ ವಾದರೆ ಆ ಪಾತ್ರಗಳು ಸಜೀವವಾಗುತ್ತವೆ ಎಂದೇನೂ ನಾನು ಭಾವಿಸುವುದಿಲ್ಲ'' ಎಂದು 'ಕಂಬನಿ'ಗೆ ಬರೆದ 'ಅಂತರಂಗ'ದಲ್ಲಿ ವ್ಯಾಸರು ಹೇಳಿದ್ದರು. 'ಕತೆಗಾರ ಪಾತ್ರಗಳೊಂದಿಗೆ ಬೆರೆಯುವುದು' ಎನ್ನುವುದನ್ನು ಕತೆಗಾರನ ಭಾವನೆಗಳನ್ನು ಪಾತ್ರಗಳಿಗೆ ಆರೋಪಿಸುವುದು ಎಂಬುದಾಗಿ ಕೂಡ ಅರ್ಥೈಸಿಕೊಳ್ಳಲು ಎಡೆ ಇದೆ. ಆದರೆ ಇಲ್ಲಿ ತಾದಾತ್ಮ್ಯ ಹೊಂದುವುದು ಕತೆಗಾರ ಎನ್ನುವುದರಿಂದ ಇದು ಸೃಜನಶೀಲತೆಗೆ ಸಂಬಂಧಿಸಿದ್ದು ಕವಿ/ಕತೆಗಾರ ತಾನು ಕಂಡು ವರ್ಣಿಸುವ ವಸ್ತುವಿನಲ್ಲಿ ತಾದಾತ್ಮ್ಯ (empathy) ಹೊಂದುವ ವಿಚಾರವಾಗುತ್ತದೆ. ತಾನು ಅದಾಗದೆ ಅದರ ಸಹಜ ಸ್ವರೂಪವನ್ನು ತರುವುದು ಸಾಧ್ಯವಿಲ್ಲ— ಎಂದು ಕತೆಗಾರ ವ್ಯಾಸರ ನಂಬಿಕೆ. ಅವರ ಅನೇಕ ಕತೆಗಳಲ್ಲಿ ನಾಯಕ ಒಬ್ಬ ಕತೆಗಾರನೂ ಆಗಿರುವುದನ್ನು ಗಮನಿಸ ಬೇಕಾಗುತ್ತದೆ. 'ಕಂಬನಿ' ಸಂಕಲನದ ಕತೆಗಳಿಂದ ತೊಡಗಿ ಈಚೆಗೆ ಪ್ರಕಟವಾದ 'ಮರ' ಕತೆಯವರೆಗೆ ಒಮ್ಮೆ ಅವಲೋಕಿಸಿದರೆ ವ್ಯಾಸರ ಕಥಾಸೃಷ್ಟಿಯಲ್ಲಿ ಒಂದು ಮಾಗುವಿಕೆಯ ಬಗೆಯನ್ನು ಗುರುತಿಸಬಹುದು. 'ಕಂಬನಿ'ಯ ಎಲ್ಲ ಕತೆಗಳಲ್ಲೂ ಭಗ್ನ ಪ್ರೇಮದ ಎಳೆ ಯೊಂದು ಉತ್ಕಟವಾಗಿ ಮಿಡಿಯುತ್ತದೆ. ಅದಕ್ಕೊಳಗಾದ ನಾಯಕನ ಕುದಿ, ಅವನ ಮಾನಸಿಕ ತಳಮಳ ಕತೆಯಲ್ಲಿ ಪ್ರಧಾನವಾಗುತ್ತದೆ. ಗುಲಾಬಿ ಹೂವರಳಿ ಬಾಡಿ ಬಚ್ಚಲ ಕೊಚ್ಚೆಯಲ್ಲಿ ಬಿದ್ದು ಅಳಿಯುವುದನ್ನು, ಗುಲಾಬಿ ಜೀಳುವಾಗಿನ ಗಿಡದ ಕಂಪನದ ಸೂಕ್ಷ್ಮತೆಯನ್ನು ಗುರುತಿಸುವ ವ್ಯಾಸರನ್ನು ನಾವು ಈ ಸಂಕಲನದ ಕತೆಗಳಲ್ಲಿಯೇ ಕಾಣುತ್ತೇವೆ.

''ಕತೆಗಳು ನಿಜಜೀವನವನ್ನು ನಿಜಜೀವನದ ಕತೆಯನ್ನು ಲೇವಡಿ ಮಾಡುತ್ತಲೇ ಇರುತ್ತದೆ. ಹಾಗಾದಾಗಲೆಲ್ಲ ನಾನು ನಿಮ್ಮನ್ನು ನೀವು ನನ್ನನ್ನು ಬೇರೆ ವಿಧಾನಗಳಿಂದ ಪರಿಚಯ ಬೆಳೆಸಿ ಕೊಳ್ಳಲು ಹಾತೊರೆಯುತ್ತಿರುತ್ತೇವೆ. ಆದರೂ ನಾವು ಮತ್ತೆ ಅಪರಿಚಿತರಾಗಿ ಉಳಿದು ಬಿಡುತ್ತೇವೆ...'' ಈ ಮಾತುಗಳ ಕತೆಗಾರ ವ್ಯಾಸರು ಸದಾ ಓದುಗರೊಂದಿಗೆ ಸಂವಾದಕ್ಕೆ ತೆರೆದುಕೊಳ್ಳುವವರು ಬೇರೆ ಬೇರೆ ಪತ್ರಿಕೆಗಳಲ್ಲಿ ನಿಯಮಿತವಾಗಿ ಬರೆಯುತ್ತ ಬಂದವರು. ಹೀಗೆ ಪ್ರಕಟವಾದ ಕತೆಗಳಿಂದ ಆಯ್ದು ಸಂಕಲಿಸಿದ 'ಕೃತ' (೧೯೯೮)ವನ್ನು ಗಮನಿಸಿದರೆ ಬದುಕಿನ ಸಂಕೀರ್ಣತೆಯನ್ನು, ಮನುಷ್ಯ ಸ್ವಭಾವದ ಕುರಿತು ಒಂದು ಸರಳೀಕರಣ ತೀರ್ಮಾನಕ್ಕೆ ಬರಲಾಗದ ವಾಸ್ತವವನ್ನು – ಕಾವ್ಯಮಯವಾಗಿ ನಿರೂಪಿಸುವ ಕತೆಗಳನ್ನು ಅಲ್ಲಿ ಕಾಣುತ್ತೇವೆ. ನಮ್ಮ ಸಂವೇದನೆಯನ್ನು ಸೂಕ್ಷ್ಮಗೊಳಿಸುವ, ನಾವು ಕುರುಡರಾಗಿರುವ ಕಡೆಗಳಲ್ಲಿ ನಮ್ಮ ಕಣ್ಣು ತೆರೆಸುವ ಈ ಕತೆಗಳು ಶೀಲ-ಅಶ್ಲೀಲಗಳ ಪ್ರಶ್ನೆ ಮಾನವೀಯತೆಯ ನೆಲೆಯಲ್ಲಿ ಪುನರ್ವ್ಯಾಖ್ಯಾನಗೊಳ್ಳಲು ಒತ್ತಾಯಿಸುತ್ತವೆ.

ಸಣ್ಣಕತೆಯ ಮಾಧ್ಯಮವನ್ನು ತನ್ನ ಅಗತ್ಯಕ್ಕನುಸಾರವಾಗಿ ಬಗ್ಗಿಸುವ, ಒಗ್ಗಿಸುವ ವ್ಯಾಸರು ಈ ಪ್ರಕಾರದ ಕಥನಕ್ರಮದಲ್ಲಿ ಕೆಲವು ಪ್ರಯೋಗಗಳನ್ನು ಮಾಡಿದ್ದಾರೆ. ಉದಾಹರಣೆಗೆ 'ಗರ' ಕತೆ. ಇದರ ಕೊನೆಯ ಅಧ್ಯಾಯದಲ್ಲಿ 'ಮುನ್ನುಡಿ' ಇದೆ. ಉಳಿದ ಆರು ಅಧ್ಯಾಯಗಳಲ್ಲಿ ಒಂದೊಂದರಲ್ಲೂ ಸಾಹಿತ್ಯದ ಭಿನ್ನ ಪ್ರಕಾರಗಳಲ್ಲಿ ರಚನೆಗಳಿದ್ದು ಇವೆಲ್ಲವುಗಳನ್ನು ಜೋಡಿಸುವ ಸೂತ್ರವಾಗಿ ವಸ್ತು ಹಾಗೂ ಪಾತ್ರಗಳು ಇರುವುದು ಗೋಚರವಾಗುತ್ತದೆ. ಮುನ್ನುಡಿಯ ಮೂಲಕ 'ಗರ'ವನ್ನು ಈ ಸೂತ್ರದಲ್ಲಿ ಜೋಡಿಸಿದ ಕತೆಗಾರ ಹೇಳುವಂತೆ 'ನಾಲ್ಕಾರು ವರ್ಷಗಳಿಂದ ಮೊಳೆದ ವಸ್ತು ಸೂಕ್ತ ತಂತ್ರ ದೊರೆಯದೆ ಚಡಪಡಿಸಿದ್ದು ಕತೆ, ಕವನ, ಕಾದಂಬರಿ ಇವು ಯಾವುದೂ ಒಂಟಿಯಾಗಿ ಆ ವಸ್ತುವನ್ನು ಭರಿಸಲಾರವು ಎಂದೆನಿಸಿ ಈ ಚಿತ್ರಕ್ಕೆ ಅಗಾಧವಾದ ಮತ್ತು ಚೌಕಟ್ಟನ್ನು ಮೀರಿ ನಿಲ್ಲುವ ಕ್ಯಾನ್‌ವಾಸ್ ತನಗೆ ಬೇಕಾಗಿದ್ದು ಅದಕ್ಕಾಗಿ ತುಡಿದಾಗ ಇದ್ದಕ್ಕಿದ್ದಂತೆ ಕತೆ ಪ್ರತ್ಯಕ್ಷವಾದದ್ದು, ಸಿಂಗಲ್ ಸಿಟ್ಟಿಂಗ್‌ನಲ್ಲಿ ಅದನ್ನು ಬರೆದು ಮುಗಿಸಿದ್ದು — ಹೀಗೆ ಕತೆಗಾರನ ಕತೆಯ ವೃತ್ತಾಂತವನ್ನು ಹೇಳುತ್ತಾರೆ. 'ಎಂ. ಶಶಿ ದುರ್ಗಾಪುರ' ಎಂಬ ಕಾಲ್ಪನಿಕ ಲೇಖಕನೊಬ್ಬ ಬರೆವ ಕವನ 'ಕ್ರಾಂತಿ'ಯ ಎರಡು ಭಾಗಗಳು ಮೊದಲ ಅಧ್ಯಾಯವಾದರೆ ಎರಡನೆಯ ಅಧ್ಯಾಯದಲ್ಲಿ ಆ ಕವನಕ್ಕೆ ಬಂದ ಓದುಗರ ಭಿನ್ನ ಪ್ರತಿಕ್ರಿಯೆಗಳು ಹಾಗೂ ಕವಿಯ ಸಮರ್ಥನೆ ಇದೆ. ಮೂರನೆಯ ಅಧ್ಯಾಯದಲ್ಲಿ 'ಸೊರೆ' ಶೀರ್ಷಿಕೆಯ ನಾಟಕ ಎರಡೇ ಪಾತ್ರಗಳ ಸಂಭಾಷಣೆಯಲ್ಲಿ ಮುಂದುವರಿಯುತ್ತದೆ. ದುರ್ಗಾಪುರದ ಆವರಣದಲ್ಲಿ, ಶಶಿ ಸೃಷ್ಟಿಸಿದ ಪಾತ್ರಗಳಾಗಿ ಕಾಣಿಸಿಕೊಳ್ಳುವ ಮಂಜುನಾಥ – ಮಿನಿ (ಮಂಜುನಾಥ ಒಬ್ಬ ಕತೆಗಾರನೇ ಆಗಿರುವುದು ಗಮನಿಸಬೇಕಾದುದು) ನಡೆಸುವ ಸಂಭಾಷಣೆಯಲ್ಲಿ ಕಾಮ-ಪ್ರೇಮಗಳ ಮೀಮಾಂಸೆಯೂ ಇದೆ. ಆದರೆ ವಾಸಿಯಾಗದ ಚರ್ಮವ್ಯಾಧಿಯನ್ನು ಹೊಂದಿರುವ ನಾಯಕಿಯ ರಹಸ್ಯ ಬೆತ್ತಲೆಯಾದಾಗ ಅದರೊಡನೆ ಮಂಜುವಿಗೆ ವಿದಾಯವನ್ನು ಹೇಳುವ ಮಿನಿ ಹಾಗೂ ಅದನ್ನು ಕೇಳಿ ದಿಕ್ಕೆಟ್ಟು ಅಳುವ ಮಂಜು – ಇಬ್ಬರೂ ಮನುಷ್ಯನ ಬದುಕಿನ ದಾರುಣತೆಗೆ ಸಾಕ್ಷಿಯಾಗುತ್ತಾರೆ – 'ಮನುಷ್ಯ-ನನ್ನೂ ಸೇರಿಸಿದಂತೆ ಕ್ರೂರಿಯಾಗುತ್ತಾನೆ/ಕ್ರೂರಿಯಾಗಿದ್ದಾಳೆ– ಸ್ವಾರ್ಥಿಯಾಗಿದ್ದಾನೆ/ಸ್ವಾರ್ಥಿಯಾಗಿದ್ದಾಳೆ'. ಮಿನಿಯ ಈ ಮಾತು ಬಹಳ ಮಾರ್ಮಿಕವಾಗಿದೆ. ಕುತೂಹಲದ ವಿಚಾರವೆಂದರೆ ವ್ಯಾಸರು ಉದ್ದೇಶಪೂರ್ವಕವಾಗಿ ಸ್ತ್ರೀವಾದಿಗಳಲ್ಲ. ಆದರೆ ಅವರು ಮನುಷ್ಯ ಎಂದರೆ ಆ ಮನುಷ್ಯಗುಣಗಳು ಗಂಡು-ಹೆಣ್ಣು ಇಬ್ಬರಲ್ಲೂ — ಎಂಬಂತೆಯೇ ನೋಡುತ್ತಾ ಬಂದವರು. ಸ್ತ್ರೀವಾದದ ಬೆಳವಣಿಗೆಯ ಹಿನ್ನೆಲೆಯಲ್ಲಿ ವ್ಯಾಸರ ದೃಷ್ಟಿಕೋನ ಸ್ತ್ರೀವಾದಕ್ಕೆ ಸಮೀಪವಾಗಿ ಕಾಣುತ್ತದೆ. (ಮದುವೆಯ ಮಾರುಕಟ್ಟೆಯಲ್ಲಿ ಕೊಳ್ಳದ ಸರಕಾಗಿ ದಾಂಪತ್ಯ ಸುಖದಿಂದ ವಂಚಿತಳಾಗಿ – ಹೆಣ್ಣು ಇರುವ ಸಂದರ್ಭದಲ್ಲೆಲ್ಲ ಕತೆಗಾರನ ಸ್ತ್ರೀ ಪರ ಸಂವೇದನೆ ಸ್ತ್ರೀವಾದದ ಹೆಸರಿಲ್ಲದೆ ಪ್ರಾಮಾಣಿಕವಾಗಿ ಸ್ಪಂದಿಸಿದೆ) 'ಸೋಲು' ಶೀರ್ಷಿಕೆಯ ಕತೆಯನ್ನು ಹೊತ್ತಿರುವ ನಾಲ್ಕನೆಯ ಅಧ್ಯಾಯ, ಬೃಹದಾಕಾರದ ಮನೆಯೊಡೆಯನಾಗಿದ್ದೂ ದಾರಿದ್ರ್ಯದಲ್ಲಿ ದಿನಗಳೆವ ಕೊಂಗಿಚುಬ್ಬಣ್ಣ ಹಾಗೂ ಅವನ ಮಗ ತೊದಲುವ ಮಂಜುನಾಥ — ಎಂ.ಎ. ಅವರನ್ನು ಪರಿಚಯಿಸುತ್ತದೆ. ಸಾಹಿತ್ಯದ ಹವ್ಯಾಸ ಹೆಚ್ಚಿಸಿಕೊಂಡ, 'ಸೆಂಟಿಮೆಂಟಲ್ ಫೂಲ್' ಎಂದು ಅಧ್ಯಾಪಕರಿಂದ ಕರೆಸಿಕೊಂಡ ಮಂಜುನಾಥ ನಾಟಕದಲ್ಲಿ ಪರಿಚಿತಳಾದ ಮೀನಾಕ್ಷಿಯನ್ನು ಪ್ರೇಮಿಸಿದ ವಿಚಾರ ಬರುತ್ತದೆ. ಐದನೆಯ ಅಧ್ಯಾಯ 'ಕ್ರಾಂತ'ವೆಂಬ

ಕಿರುಕಾದಂಬರಿ (ವಾಸ್ತವದಲ್ಲಿ 'ಸೋಲು' ಕತೆಯ ಮುಂದುವರಿಕೆಯೇ) ಮೀಸಲಾತಿಯ ಕಾರಣದಿಂದ ಕೆಲಸ ಸಿಗದ ಮಂಜುನಾಥ, ಎಲುಬಿನ ಹಂದರವಾದ ಕೊಂಗಿ ಚುಬ್ಬಣ್ಣನ ಮಡದಿ ಎಚ್ಚಿಮಿ, ಕೊಂಗಿ ಚುಬ್ಬಣ್ಣನ ವಿಶಾಲವಾದ ಮನೆಯ ಶಿಥಿಲ ಕೋಣೆಗಳು, ಹಾರಾಡುವ ಬಾವಲಿಗಳು, ಬಾವಲಿಯ ಹಿಕ್ಕೆ ವಾಸನೆ ಅಭ್ಯಾಸವಾಗಿ ಹೋದ ಮನೆ ಮಂದಿ — ಇತ್ಯಾದಿಗಳನ್ನು ಕುರಿತು ಹೇಳುತ್ತದೆ. ದೇವಸ್ಥಾನದಲ್ಲಿ ನಡೆಸಲಿರುವ ಯಾಗಕ್ಕೆ ಎಲ್ಲ ಮನೆಯವರೂ ಹತ್ತರಿಂದ ನೂರರವರೆಗೆ ವಂತಿಗೆ ಕೊಡಬೇಕೆಂಬ ನಿರ್ಣಯದಿಂದ ಕಸಿವಿಸಿಗೊಳ್ಳುವ ಚುಬ್ಬಣ್ಣನಿಗೆ, ಹೆಣೆದ ಮಡಲಿಗೆ ಏಳು ಪೈಸೆ ಹೆಚ್ಚಿಸುವಲ್ಲಿ (ಆಸ್‌ನಾರೆಗೆ ಮಾರಾಟ ಮಾಡುವ ವ್ಯವಹಾರದಲ್ಲಿ) ಸಾಕೋ ಸಾಕಾಗುತ್ತದೆ. ಮಿನಿಯ ಜೊತೆಗಿನ ಭಗ್ನ ಪ್ರಣಯದ ಹಿನ್ನೆಲೆಯಲ್ಲಿ ಹುಚ್ಚುಹಿಡಿದ ಮಂಜುನಾಥನಿಗೆ ಆ ಸಂಬಂಧದ ನೆನಪುಗಳು ಕಾಡುವುದು — ಈ ಎಲ್ಲ ವಿವರಗಳನ್ನು ದಾಖಲಿಸುವಲ್ಲಿ ನಿರ್ಲಿಪ್ತತೆ ಇದ್ದರೂ — ಇದು ಭಾವನಾರಾಹಿತ್ಯವಲ್ಲ. ಉದಾಹರಣೆಗೆ ಈ ವಾಕ್ಯ — ''ಕಾಲ ಎರಡು ಕೈಗಳಿಂದಲೂ ರಪರಪನೆ ಏಟು ಹಾಕಿದ ಆ ಮನೆ ಮಂದಿ ಈ ದುರಂತವನ್ನು ಸಹಜ ಕರ್ಮವೆಂಬಂತೆ ಒಪ್ಪಿಕೊಂಡು ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲು ಸರ್ವಸಿದ್ಧತೆಗಳನ್ನು ಮಾಡಿಕೊಂಡರು...'' ಭೂಮಸೂದೆಯ ಕಾರಣದಿಂದ ಬಡತನಕ್ಕೆ ಒಳಗಾದ ಕುಟುಂಬ ಮೀಸಲಾತಿಯ ಕಾರಣ ದಿಂದಲೂ ತನ್ನನ್ನು ಮೀರಿದ ಇತರ ಕಾರಣದಿಂದಲೂ ಜರ್ಜರಿತವಾಗುವ ಈ ಸನ್ನಿವೇಶದಲ್ಲಿ ಅಂತಹ ಪಾತ್ರಗಳ ಬಗ್ಗೆ ಮಿಡಿಯುವ ಭಾವ ಅಸ್ಪಾದೃಶ — ಆದರೆ 'ಗರ' ಕತೆ ಇಲ್ಲಿಗೆ ಮುಗಿಯದೆ ಏಳನೆಯ ಅಧ್ಯಾಯ ಪ್ರಬಂಧ ರೂಪದಲ್ಲಿದ್ದು ಮನುಷ್ಯ ಬಂಧಗಳ ಸ್ವರೂಪ ವನ್ನು ಕುರಿತು ಹೇಳುತ್ತದೆ. ವಿಜ್ಞಾನ, ಧರ್ಮಗ್ರಂಥಗಳು, ವೇದಪುರಾಣಗಳು ಏನೇ ಹೇಳಿದರೂ ಮನುಷ್ಯ ಜೀವಿತದಲ್ಲಿ ಗಂಡು-ಹೆಣ್ಣಿನ ಬಂಧ, ಬಂಧನ ರಹಸ್ಯ ಇನ್ನೂ ಅಸ್ಪಷ್ಟ ವಾಗಿಯೇ ಉಳಿದಿದೆ — ಎಂಬುದು ಮೂಲವಾಕ್ಯವಾಗಿ, 'ಮನುಷ್ಯರಲ್ಲಿ ಮಾತ್ರ ಹೆಣ್ಣು ಗಂಡಿನ ಅಡಿಯಾಳಾಗಿರುವುದರ ಕುರಿತು ವಿಸ್ಮಯ ಪ್ರಕಟವಾಗುತ್ತದೆ. ಹಾಗೆಯೇ ಮನುಷ್ಯ ಸಂಬಂಧಗಳಲ್ಲಿ ರೂಪ, ಸ್ವರೂಪ, ಪ್ರೀತಿಗಳು ಪ್ರಧಾನ ಪಾತ್ರವಹಿಸುತ್ತವೆಯೆಂದೂ ಸೌಂದರ್ಯ ದೃಷ್ಟಿ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುವುದರಿಂದಲೇ ಪ್ರೀತಿ-ದ್ವೇಷ ಗಳು ಪ್ರಕಟವಾಗುತ್ತವೆ ಎಂದೂ ಇದರಿಂದಲೇ ಸಂಬಂಧಗಳು ಬೆಸೆಯುತ್ತವೆ ಹಾಗೂ ಕುಸಿಯುತ್ತವೆ.' ಎಂಬ ಈ ಮಾತುಗಳನ್ನೊಳಗೊಂಡ ಅಧ್ಯಾಯವು ಒಟ್ಟು ಸಂವಿಧಾನದಿಂದ ಪ್ರತ್ಯೇಕ ನಿಲ್ಲುವುದಿಲ್ಲ. ಯಾಕೆಂದರೆ ಮಂಜುನಾಥ ಮತ್ತು ಮಿನ್ನಿಯ ಸಂಬಂಧ ಕುಸಿದ ಘಟನೆ ಇದರ ಹಿನ್ನೆಲೆಗಿದೆ. ಹಾಗೆ ನೋಡಿದರೆ ಈ ಎಲ್ಲ ಅಧ್ಯಾಯಗಳು ಕಾರ್ಯ ಕಾರಣ ವಿನ್ಯಾಸ ದಿಂದ ಪರಸ್ಪರ ಸಂಬಂಧಿಸಿವೆ. ಇವುಗಳನ್ನೆಲ್ಲ ಬೆಸೆಯುವ ತಂತುವಿನ ಮೂಲ ಎಳೆಯನ್ನು ಕೊನೆಗೆ ಬರುವ ಕತೆಗಾರನ ಮುನ್ನುಡಿಯಲ್ಲಿ ಕಾಣಬಹುದು.

ಒಂದು ಕಾದಂಬರಿಯ ವ್ಯಾಪ್ತಿಯೊಳಗೆ ನೀಡಲು ಸಾಧ್ಯವಾಗುವ ಬದುಕಿನ ಬೃಹದ್ದರ್ಶನ ವನ್ನು ಅವರ ನಾಯಕಕೃತಿ (master pice) ಎಂದು ಕರೆಯಬಹುದಾದ ಕತೆ 'ಕೂಪ'ದಲ್ಲಿ ಕೊಡುತ್ತಾರೆ. ಈ ಭೂಮಿ, ಸೃಷ್ಟಿ ಇಲ್ಲಿನ ಪ್ರಾಣಿ ಪ್ರಪಂಚ, ಮನುಷ್ಯರು — ಎಲ್ಲವನ್ನೂ ಒಳಗೊಂಡ ಅಖಂಡತೆ — ಇದರ ವಿಶೇಷ. ಈ ಭೂಮಿಯ ಕುರಿತಾದ ವ್ಯಾಸರ ಕಲ್ಪನೆಗೆ ವೈಜ್ಞಾನಿಕ ಹಿನ್ನೆಲೆಯೂ ಇದೆ. ವೈಜ್ಞಾನಿಕ ಜಗತ್ತು ಸೇರಿದಂತೆ ಸಾಹಿತ್ಯೇತರ ಕ್ಷೇತ್ರಗಳ

ಬೆಳವಣಿಗೆಯ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನು ಹೊಂದಿದ up to date ಆಗಿರುವ ಅಪರೂಪದ ಬರಹಗಾರರು ಎಂ. ವ್ಯಾಸರು ಎನ್ನುವುದನ್ನು ಇಲ್ಲಿ ಪ್ರಸ್ತಾಪಿಸಬೇಕು. (ಅವರ ಅಂಕಣ ಬರಹಗಳಲ್ಲಿ ಇನ್ನಿತರ ಲೇಖನಗಳಲ್ಲಿ ಕಂಡುಬರುವ ಚಿಂತನೆ ಅವನ ಜ್ಞಾನಸಂಪತ್ತಿಗೆ ಸಾಕ್ಷಿ ನುಡಿಯುತ್ತವೆ.) 'ಸೂರ್ಯ ಪ್ರಸವಿಸಿದ ಭೂಮಿಯ ದೇಹಭಾಗ'ವೆಂದು ಕತೆಯ ಊರನ್ನು ಪರಿಚಯಿಸುವಲ್ಲಿ ಕತೆಯ ಪ್ರಾತಿನಿಧಿಕ ಸ್ವರೂಪ ಸ್ಪಷ್ಟವಾಗುತ್ತ ಸಾಗುತ್ತದೆ. ವೈಜ್ಞಾನಿಕ ತಿಳುವಳಿಕೆ ಮತ್ತು ಕಲಾವಿದನ ಸಂವೇದನೆ ವ್ಯಾಸರ ಕಥಾಸೃಷ್ಟಿಯಲ್ಲಿ ಜೊತೆಜೊತೆಯಾಗಿ ಭಾಗವಹಿಸುತ್ತವೆ. ಸವೆಯದ ಕಾಲುದಾರಿಯನ್ನು ಆರಂಭದಲ್ಲಿ ಪರಿಚಯಿಸುತ್ತ ನಲ್ಕನೆಂಬ ಬೈರ ಜಾತಿಯ ಯುವಕನ ಮನೆಗೆ ಓದುಗನನ್ನು ತಂದುಬಿಡುವಲ್ಲಿ 'ಆ ಗುಡಿಸಲುಗಳಲ್ಲಿ ಅಳುಗಳು, ನಗುಗಳು, ಉನ್ಮಾದಗಳು, ಬದುಕುಗಳು, ಸಾವುಗಳು, ಲಾಲಸೆಗಳು, ವೈರಾಗ್ಯಗಳು ಉರುಳು ಉರುಳಾಗಿ ಬರುತ್ತವೆ, ಬಂದಿವೆ, ಬರಲಿವೆ...' ಈ ನಿರೂಪಣೆಯಲ್ಲಿಯೇ ಒಟ್ಟು ಕತೆಯಲ್ಲಿ ವ್ಯಕ್ತವಾಗುವ ದಾರ್ಶನಿಕತೆ ಸುವ್ಯಕ್ತ. ಅಲ್ಲಿಂದ ಪೇಟೆಯ ದಾರಿಗೆ ತಿರುಗುವಲ್ಲಿ 'ಕಾಲುದಾರಿಯ ಮೇಲುಮೈ ಕೆದರಲ್ಪಡುವ ಹುಲ್ಲುಗಳು ಸಾವಿನ ಮತ್ತೊಂದು ಮತ್ತೊಂದು ಮಾರಕ ತುಳಿತಗಳನ್ನು ಸದ್ದುಗದ್ದಲವಿಲ್ಲದೆ, ಅಳುವಿಲ್ಲದೆ ಸ್ವೀಕರಿಸುತ್ತವೆ...' ಎನ್ನುವ ವಾಕ್ಯಗಳಲ್ಲಿ ಕೂಡ ಅದೇ ದಾರ್ಶನಿಕತೆ.

ಕಸಾಯಿಖಾನೆಯ ದಾರಿಗೆ ಕರೆದೊಯ್ಯುವ ಮುಂದಿನ ಭಾಗದಲ್ಲಿ ಸೂಕ್ಷ್ಮಾವಲೋಕನ (observation) ಕೂಡ ಬಹಳ ವಿಶಿಷ್ಟವಾದುದು. 'ಜೀವಿತದ ಕೊನೆಯ ಕ್ರಿಯೆಯ ಯಾತನೆಯಲ್ಲಿ ಬಂದ ಕಣ್ಣೀರು (ಬಲಿಪಶುಗಳ) ರಕ್ತದೊಂದಿಗೆ ಬೆರೆತು ಹಿಂಸೆಯೊಂದಿಗೆ ಸೇರಿದ ದಯೆಯಂತೆ ನಿಶ್ಚಲವಾಗಿ ಸಿಮೆಂಟಿನ ಕಿರುಚರಂಡಿಗಳಿಗೆ ಹನಿಹನಿಯಾಗಿ ಬಿದ್ದು ಹರಿಯುವ ಮಣ್ಣಿಗೆ ಹಿಂಗಿ ಹೋಗುವ ವಿಚಾರ ಹಾಗೂ ಮಣ್ಣಿನಲ್ಲಿ ಆಹಾರ ಹುಡುಕುತ್ತ ಚಲಿಸುವ ಮರ ಗಿಡಗಳ ಬೇರುಗಳಿಗೆ ಆಹಾರವಾಗುವ ವಿಚಾರ' — ಎರಡನ್ನೂ ನಿರ್ಲಿಪ್ತತೆಯಿಂದ ದಾಖಲಿಸುತ್ತದೆ. ಸಾವಿನಲ್ಲಿ ಬದುಕು, ಬದುಕಿನಲ್ಲಿ ಸಾವು ಬೆರೆತಿರುವ ಈ ವ್ಯಂಗ್ಯವನ್ನು ಗುರುತಿಸಿದ ಬಗೆ ಬಹಳ ಮನೋಜ್ಞ.


ಕಥನ ಮಾಧ್ಯಮದಲ್ಲಿ ವ್ಯಾಸರಿಗೆ ಮತ್ತೆ ಮತ್ತೆ ಹೇಳಬೇಕೆನಿಸಿದ್ದು – ಗಂಡು-ಹೆಣ್ಣಿನ ಸಂಬಂಧದ ಮುಗಿಯದ ಆಯಾಮಗಳ ಕುರಿತಾಗಿ, ಮನುಷ್ಯ ಪ್ರವೃತ್ತಿಗಳಲ್ಲಿ ಕಾಣಿಸುವ ಪಶು ಸಾಮ್ಯದ ಕುರಿತಾಗಿ, ಮನುಷ್ಯ ಮನಸ್ಸಿನ ರೂಪ- ಕುರೂಪಗಳ ಕುರಿತಾಗಿ — ಒಟ್ಟಿನಲ್ಲಿ ಮನುಷ್ಯನಾಗಿ ಮನುಷ್ಯನ ಕುರಿತಾಗಿ. ಸೃಷ್ಟಿ-ಸ್ಥಿತಿ-ಲಯಗಳ ಅನಿವಾರ್ಯ ಸುಳಿಯಲ್ಲಿ ಸಿಲುಕಿ ನಲುಗುವ ಮನುಷ್ಯನ ಪಾಡು ಅವರ ಅದಮ್ಯ ಕುತೂಹಲವನ್ನು ಕೆರಳಿಸಿದಂತೆಯೇ ಅವರ ಅಪಾರ ಅನುಕಂಪವನ್ನೂ ಮೀಟಿದೆ. ಕಾಮದ ವಿಕೃತ ಮುಖಗಳ ಬಹುರೂಪವನ್ನು ಅನಾವರಣಗೊಳಿಸಿದಂತೆಯೇ, ಕ್ರೌರ್ಯ ಹಿಂಸೆಗಳ ನಗ್ನ ವಾಸ್ತವಗಳನ್ನೂ ಮರೆಮಾಚಲಿಲ್ಲ. ಹೀಗಿದ್ದೂ ವ್ಯಾಸರನ್ನು ನೆಗೆಟಿವ್ ಚಿಂತಕರೆಂದು ತೀರ್ಮಾನಿಸಿದರೆ ಅದು ತಪ್ಪು ಗ್ರಹಿಕೆಯಾಗ ಬಹುದು. ಚೆಲುವಿನ ಒಲವಿನ ಮುಖಗಳು, ಸೌಂದರ್ಯದ ಗಾಢ ಪ್ರಜ್ಞೆಯ ಅಭಿವ್ಯಕ್ತಿಯ ಬಗ್ಗೆ ಸಮೃದ್ಧ ನಿದರ್ಶನಗಳು (Refernce) — ಅವರ ಕತೆಗಳಲ್ಲಿ ಸಾಂದರ್ಭಿಕವಾಗಿ ಬಂದೇ ಬರುತ್ತವೆ. ಜೀವಿತದ ಪರಿಮಳವನ್ನು ಆಘ್ರಾಣಿಸುವಂತೆ ಪ್ರೇರಿಸಲು ಅವರು ಆಸಕ್ತರೇ. ಸುದ್ದಿಯಾಗುವ ನಿಜಗಳನ್ನು, ನಿಜವ್ಯಕ್ತಿಗಳನ್ನು ನಾವು ಚೆನ್ನಾಗಿ ಅರ್ಥೈಸಿಕೊಳ್ಳಲು ವ್ಯಾಸರ

ಕತೆಗಳು ಸಹಾಯಕವಾಗುತ್ತವೆ. ಮನುಷ್ಯ ಸ್ವಭಾವದ ಕುರಿತಂತೆ ಅವು ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸುತ್ತವೆ.


ಬದುಕು ನಾವು ಭಾವಿಸಿದಷ್ಟು ಸರಳ ಅಲ್ಲ ಎಂಬುದನ್ನು ವ್ಯಾಸರ ಕತೆಗಳ ಓದು ಕಲಿಸಿಕೊಡುತ್ತದೆ. ಬದುಕಿನ ಹೊಣೆಗಾರಿಕೆಯ ಬಗ್ಗೆ ಮನವರಿಕೆ ಮಾಡಿಕೊಡುತ್ತದೆ. ಮೇಲ್‌ಸ್ತರದ ಓದಿಗೆ ದಕ್ಕುವ ಭಾವಾನಾವಶತೆಯನ್ನು ಮೀರಿ ನಾವು ನೋಡಬೇಕು — ಆಗ ಮನುಷ್ಯ ಸಹಜಪ್ರವೃತ್ತಿಗೆ ಹೊರೆಯೆಂದು ಕಾಣಿಸುವ ಹೊಣೆಗಾರಿಕೆಯ ಅನಿವಾರ್ಯತೆಯನ್ನು ಈ ಕತೆಗಳು ಅಡಿಗೆರೆ(underline) ಹಾಕಿ ತೋರುವುದನ್ನು ನೋಡಬಹುದು. ಮನುಷ್ಯನಾದವನಿಗೆ ಹೊಣೆಗಾರಿಕೆ ತಪ್ಪಿದ್ದಲ್ಲ, ಆದರೆ ಸರ್ವದಾ ಸುಖವನ್ನು ಬಯಸುವ ಮನಸ್ಸು ಯಾವುದೇ ಬಗೆಯ ಬಂಧವನ್ನು ಸಹಿಸಲಾರದು — ಕತೆಗಾರ ವ್ಯಾಸರ ಸಂವೇದನೆ ಮನುಷ್ಯನ ಈ ಮೂಲಗುಣವನ್ನು ಚೆನ್ನಾಗಿ ಅರ್ಥೈಸಿಕೊಳ್ಳುತ್ತದೆ. ಹೀಗಾಗಿ ವ್ಯಾಸರ ಕತೆಗಳ ಅಭ್ಯಾಸ ಬದುಕಿನ ಕುರಿತು ಪ್ರಬುದ್ಧ ನೋಟವನ್ನು ಹೊಂದಲು ಸಹಾಯಕವಾಗುತ್ತದೆ.

ಅನೇಕ ಬಾರಿ ಏಕತಾನತೆಯ ಅನುಭವವನ್ನು ನೀಡಿದರೂ ಸೃಷ್ಟಿ-ಸ್ಥಿತಿ-ಲಯಗಳನ್ನೊಳಗೊಂಡ ಬದುಕಿನ ಗತಿಯ ಕುರಿತಾದ, ತಲಸ್ಪರ್ಶಿಯಾದ ಚಿಂತನೆ — ಒಂದು ಸಮಗ್ರ ನೋಟ ವ್ಯಾಸರ ಒಟ್ಟಾರೆ ಬರಹದಲ್ಲಿ ಕಾಣಿಸುವುದರಿಂದಲೇ ಅದು ಮೌಲಿಕವಾಗುತ್ತದೆ. ಅವರ ಬರವಣಿಗೆ ನಿರುದ್ದಿಶ್ಯವಲ್ಲ, ಬದುಕಿನ ಕುರಿತಾದ ಅವರ ಗ್ರಹಿಕೆಯನ್ನು ನಮಗೆ ಮನದಟ್ಟು ಮಾಡುವ (convince) ತುರ್ತು ಅವರ ಬರಹಗಳಿಗಿದೆ. ಹೊಣೆಗಾರಿಕೆಯ ಪ್ರಜ್ಞೆ, ಹುಟ್ಟಿನ ಪಾವಿತ್ರ್ಯದ ಕುರಿತಾದ ಜಿಜ್ಞಾಸೆ ಆಧುನಿಕರಾದ ಕಾರ್ನಾಡರಿಂದ ತೊಡಗಿ ದೇವನೂರು ಮಹಾದೇವರವರೆಗೆ ವಿಭಿನ್ನ ಬರಹಗಳಲ್ಲಿ ಕಂಡುಬಂದರೂ ವ್ಯಾಸರ ಜೀವನ ದರ್ಶನಕ್ಕೆ ಅವರದೇ ಅನನ್ಯತೆ ಇದೆ.

ವಿಳಾಸ : ಉಪನ್ಯಾಸಕಿ, ಸರಕಾರೀ ಕಾಲೇಜು
ವಿದ್ಯಾನಗರ, ಕಾಸರಗೋಡು - ೬೭೧ ೧೨೩



ಅವನು ಎಂಬ ನಾನು



✦ ಎಂ. ವ್ಯಾಸ

ನಾನು ಮತ್ತು ನನ್ನ ಕತೆಗಳ ಅಥವಾ ಕೃತಿಗಳ ಕುರಿತು ಬರೆಯಲು ಕುಳಿತಾಗ ಅಗಾಧವೋ ಅನ್ನಿಸುವಷ್ಟು ಕ್ರಮಿಸಿದ ದಾರಿಯನ್ನು ತಿರುಗಿ ನೋಡಲೇಬೇಕಾಗುತ್ತದೆ. ನಲವತ್ತು ಪ್ಲಸ್ ವರುಷಗಳು; ಮನುಕುಲದ, ಭೂಮಿಯ ಆಯುಷ್ಯದೊಂದಿಗೆ ಹೋಲಿಸಿದರೆ ನಗಣ್ಯವಾಗುವ ವರುಷಗಳು; ನನ್ನ ಪಾಲಿಗೆ ಮುಗಿದೇ ಹೋದ ಒಂದು ಪೂರ್ತಿ ಆಯುಷ್ಕಾಲವಾಗಿದೆ. ನನ್ನ ಬದುಕು ಬರಹದೊಂದಿಗೆ ಹಾಸುಹೊಕ್ಕಾಗಿ ನೇಯ್ದುಕೊಂಡಿದೆ. ಒಂದು ಮನಸ್ಸಿನ ನಿರಂತರ ಚಡಪಡಿಕೆ, ದಾಹ ಇನ್ನಷ್ಟು ದಾಹವನ್ನು ಹೆಚ್ಚಿಸಿಕೊಳ್ಳಲು ಪಟ್ಟ ಪರದಾಟ. ಹೆಚ್ಚು ದಾಹವನ್ನು ಹೆಚ್ಚಿಸಿಕೊಂಡರೆ ಹೆಚ್ಚು ಸುಖವನ್ನು ಪಡೆಯಬಹುದೆಂಬ ನಂಬಿಕೆ(ಸತ್ಯ). ಹಸಿವನ್ನು ನೀಗಿಸಿಕೊಳ್ಳಲು ಮನಸ್ಸಿನೊಂದಿಗೂ, ಸಮಾಜ ವ್ಯವಸ್ಥೆಗಳೊಂದಿಗೂ ಮಾಡಿಕೊಂಡ ಸರಸ, ವಿರಸಗಳು ನೆನಪಾಗುತ್ತವೆ. ಖಾಸಗೀ ಅನ್ನಿಸಿಕೊಳ್ಳುವಂತಹ ಪ್ರತಿ ಮತ್ತು ಪ್ರತ್ಯೇಕ ದಾಹಗಳು ಪ್ರತಿಯೊಬ್ಬನಲ್ಲೂ ಇರುತ್ತವೆ. ಮತ್ತು ಅಂತಹಾ ದಾಹಗಳು ನನಗೊಬ್ಬನಿಗೇ ಇವೆ ಎನ್ನುವಂತಹ ಭ್ರಮೆಗಳೂ ಪ್ರತಿಯೊಂದು ಮನಸ್ಸಿನಲ್ಲೂ ಇದ್ದೇ ಇರುತ್ತವೆ. ಹಾಗಾಗಿ ನಾನು ಇನ್ನೊಂದು ಕತೆ ಬರೆದಾಗ, ಇನ್ನೊಂದು ಪಾತ್ರವನ್ನು ಸೃಷ್ಟಿಸಿದಾಗ, ಅದರೊಳಗೆ ನಾನೂ ಇರುತ್ತೇನೆ. ಕಥಾವಸ್ತುಗಳು ಮನುಕುಲದಷ್ಟು ಹಳತಾಗಿರುತ್ತವೆ; ಕಥಾಪಾತ್ರಗಳು ವರ್ತಮಾನದ ಇದೇ ಈಗ ಮಗುಚುತ್ತಿರುವ, 'ನಿಮಿಷ'ದಷ್ಟು ಹೊಸತಾಗಿರುತ್ತವೆ. ನನ್ನ ಬದುಕನ್ನು, ನನ್ನ ಕಥಾಪಾತ್ರಗಳ ಬದುಕಿಗಿಂತ ಪ್ರತ್ಯೇಕವಾಗಿ ನೋಡಲೂ ಈ ಕ್ಷಣದಲ್ಲಿ ನನಗೆ ಭಯವಾಗುತ್ತದೆ. ಖಾಸಗೀ ನೋವು-ನಲಿವುಗಳು ಅಷ್ಟು ಖಾಸಗೀ ನೋವು-ನಲಿವುಗಳಲ್ಲ, ಹುಟ್ಟಿದ ಪ್ರತಿಯೊಂದು ಜೀವಿಯೂ ಅದರ ಸಂಕಟ, ಸಂತೋಷ, ಹೋರಾಟಗಳೊಂದಿಗೇ ಹುಟ್ಟುತ್ತದೆ. ಪ್ರತಿ ಸ್ಥಾವರ! ಜಂಗಮ ಜೀವಿಗಳ ಮಟ್ಟಿಗೂ ಇದು ಅನ್ವಯಿಸುತ್ತದೆ. ಈ ಸತ್ಯ ನನಗೆ ನನ್ನೊಳಗಿಂದಲೇ ಗೋಚರವಾಗಿದೆ. ಬಹುಶಃ ಜಗತ್ತಿನ ಸರ್ವಧರ್ಮ ವಾಕ್ಯಗಳೂ ಅದನ್ನೇ ಹೇಳುತ್ತಿವೆ. ಜಗತ್ತಿನ ಸಾಹಿತ್ಯ ಕೂಡ.

ಗಾಳಿಗೆ ಸ್ವಂತ ಶಬ್ದಗಳಿಲ್ಲ. ರಾಗಗಳಿಲ್ಲ. ಆದರೆ ಅದು ಕೊಳಲಿನ ತೂತುಗಳಿಂದ ಒಳಗಾಗಿ, ಹೊರಗಾದಾಗ ಸಂಗೀತವಾಗುತ್ತದೆ. ವಿವಿಧ ರಾಗಗಳ ಹೆಸರಿನಿಂದ ಕರೆಸಿಕೊಳ್ಳುತ್ತದೆ. ಮನುಷ್ಯನೊಳಗಿನ ಉಸಿರೂ ಹಾಗೆ. ಮನುಷ್ಯನ ಮನಸ್ಸಿನ ಧ್ವನಿಗಳೂ ಹಾಗೆ. ಮನಸ್ಸು ಸದಾ ಮಾತನಾಡುತ್ತಿರುತ್ತದೆ. ಭೂತ, ವರ್ತಮಾನ, ಭವಿಷ್ಯತ್ ಕಾಲಗಳಲ್ಲಿ ಸಂಚರಿಸುತ್ತಿರುತ್ತದೆ.

ಅದು ಗುರುತಿಸುತ್ತಿರುವ ಭಾವಗಳು, ಧ್ವನಿಗಳು, ಭಯ ಅಭಯಗಳು, ಕಲ್ಪನೆಗಳು, ಕ್ರಿಯೆಗಳು, ಕನಸುಗಳು ಪಾತ್ರಗಳ ವೇಷ ಧರಿಸಿದಾಗ ಅವು ಸಾಹಿತ್ಯವಾಗುತ್ತವೆ. ಹಾಗೆಂದು ನಾನು ನಂಬಿದ್ದೇನೆ. ಹಾಗಾಗಿ ನನ್ನ ಕೃತಿಗಳು ಯಾವಯಾವುದೋ ವೇಷದಲ್ಲಿ, ಗತಿಯಲ್ಲಿ ಹೊರಬಂದಿವೆ. ನಾನವುಗಳನ್ನು ಯಾವುದೇ ಚೌಕಟ್ಟಿನ ಆವರಣದೊಳಗೆ ಬಂಧಿಸಿಡಲು ಯತ್ನಿಸಲಿಲ್ಲ. ಹಾಗಾಗಿ ನಾನು ಏನು ಬರೆದರೂ ಅವು ಒಂದು 'ಕತೆ'ಯನ್ನು ಹೇಳುತ್ತಿರುತ್ತವೆ. ಕತೆಗಳು, ಕಾದಂಬರಿಗಳು, ಲೇಖನಗಳು, ಕವಿತೆಗಳು, ಎಲ್ಲ ಕತೆಗಳೇ. ಹತ್ತೊಂಬತ್ತನೇ ವಯಸ್ಸಿನಲ್ಲಿ ನಾನು ಬರೆಯಲಾರಂಭಿಸಿದಾಗ ನನಗೆ ಜಗತ್ತಿನ ಅಥವಾ ನನ್ನ ದೇಶದ ಅಥವಾ ನನ್ನ ಭಾಷೆಯ ಸಾಹಿತ್ಯದ ಪೂರ್ತಿ ಪರಿಚಯ ಇರಲಿಲ್ಲ. ನಾನು ಬರೆಯಲಾರಂಭಿಸಿದ ಮೇಲೆ, ನನ್ನನ್ನೇ ನಾನು 'ಆರಾಧಿಸಲಾರಂಭಿಸಿದೆ'. ಪ್ರತಿ ಓದಿಗೂ ನನ್ನ ಶಬ್ದಗಳಲ್ಲಿ ಇನ್ನೊಂದು, ಮತ್ತೊಂದು, ಅರ್ಥ ನನಗೇ ಹೊಳೆಯಲಾರಂಭಿಸುತ್ತಿತ್ತು. ಹಾಗೆ ಒಂದು ಕೃತಿ ಇನ್ನೊಂದು ಕೃತಿ ಕಡೆಗೆ ಒಂದು ಕೊಂಡಿಯನ್ನು ನೀಟಿ ಸದಾ ಸಂಪರ್ಕ ಸಾಧಿಸುತ್ತಿತ್ತು. ನಾನು ನನ್ನಷ್ಟಕ್ಕೇ ಮಹಾ ಅಹಂಕಾರಿಯಾಗಿದ್ದೇನೆ. ಕೃತಿ ರಚನೆಗೆ ತೊಡಗಿರುವಾಗ ನಾನೇ ಜಗತ್ತಿನ ಅತ್ಯಂತ ಶ್ರೇಷ್ಠ ಲೇಖಕ ಎಂದು ನಂಬಿಕೊಂಡಿರುತ್ತೇನೆ. ನಾನು ಹಾಗೆ ನಂಬಿರದೇ ಇದ್ದಿದ್ದರೆ ಈ ನಲವತ್ತು ಪ್ಲಸ್ ವರುಷಗಳಲ್ಲಿ ಈ ಕ್ಷೇತ್ರದಲ್ಲಿ ಇರಲಾಗುತ್ತಿರಲಿಲ್ಲ. ಆದರೆ ಯಾವಾಗ ಒಂದು ಕೃತಿ ಬರೆದು ಮುಗಿಸಿರುತ್ತೇನೋ ಆಗಿನಿಂದ ನಾನು ಬಹಳ ಕುತೂಹಲಿ ಓದುಗನಾಗಿರುತ್ತೇನೆ. ಕೃತಿಗಳು ಯಾರದಿದ್ದರೂ, 'ಹೆಣ್ಣು, ಗಂಡು, ಪ್ರಸಿದ್ಧ-ಅಪ್ರಸಿದ್ಧ'ರೆಂದು ಗಮನಿಸದೆ ಓದುತ್ತಿರುತ್ತೇನೆ. ಹಾಗೆ ಓದಿದಾಗ ಒಂದು ಮನಸ್ಸಿನ ಚಡಪಡಿಕೆ, ಆರ್ತೋತ್ತರ, ಅದು ಗಳಿಸಿಕೊಂಡಿರುವ ಜ್ಞಾನದ ಮಿತಿ, ಎಲ್ಲ ಅರ್ಥವಾಗಿ ಪುಳಕಗೊಳ್ಳುತ್ತೇನೆ. ವಿಮರ್ಶಕ ಈ ರೀತಿಯಲ್ಲಿ ಸಾಹಿತ್ಯ ಓದಬೇಕು ಎಂದು, ಕಟು ವಿಮರ್ಶೆಗಳನ್ನು ಓದಿದಾಗ, ಅನ್ನಿಸುತ್ತಿರುತ್ತದೆ. ಸಾಹಿತಿ ಎಲ್ಲ ತಿಳಿದಿದ್ದೇನೆ ಎಂಬ ಅಹಂಕಾರದಿಂದ ಬರೆಯಬೇಕು, ಓದುಗ ಏನೂ ತಿಳಿದಿಲ್ಲ ಎಂಬ ಮುಗ್ಧ ಕುತೂಹಲದಿಂದ ಓದಬೇಕು. ಇದು ಸಾಹಿತ್ಯವನ್ನು ನಾನು ಅರ್ಥಮಾಡಿಕೊಂಡ ರೀತಿ ಅಥವಾ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವ ರೀತಿ.

ನನ್ನ ಕೃತಿಗಳಲ್ಲಿ ಕಥಾವಸ್ತುಗಳು ಅಷ್ಟು ಮುಖ್ಯವಾಗಿರೋದಿಲ್ಲ. ಬದುಕಿನ ಅಗಾಧ ಕ್ಯಾನ್‌ವಾಸಿನಲ್ಲಿ ಪಾತ್ರಗಳು ಚಿತ್ರಗಳಾಗಿ ಮೂಡಿಬರುತ್ತಿರುತ್ತವೆ. ಪಾತ್ರಗಳು ಅತಿಯೋ ಎಂಬಷ್ಟು ಬೆಳೆದು, ಅವುಗಳ ಕತೆಯನ್ನು ಅವೇ ನಿರ್ಮಿಸುತ್ತವೆ. ಪಾತ್ರಗಳು ಹೀಗೆ ಪ್ರಕೃತಿ ಸಹಜವಾಗಿ ಸ್ಫೋಟಿಸುತ್ತ, ಬದುಕುತ್ತ, ಬದುಕುವಂತೆ ಭ್ರಮಿಸುತ್ತಿರುತ್ತವೆ. ದುಃಖ, ಹತಾಶೆ, ನೋವುಗಳು 'ಮನುಕುಲ'ದಲ್ಲಿವೆ. 'ತನಗೊಂದು ಸಾವು ಇದೆ' ಎಂದು ತಿಳಿದುಕೊಳ್ಳುವ ಶಕ್ತಿ ಮನುಷ್ಯನ ಮನಸ್ಸಿಗೆ ಮಾತ್ರ ಇದೆ. ಹೀಗಿರೋದರಿಂದಲೇ 'ಕೃಷ್ಣ, ಕ್ರಿಸ್ತ, ಅಲ್ಲಾ'ರಂತಹ ದೇವರುಗಳನ್ನು ಮನುಷ್ಯ ಕಂಡುಹಿಡಿದಿದ್ದಾನೆ. ಬುದ್ಧ, ಜಿನ, ಗಾಂಧಿ ಮನುಷ್ಯರ ಮಧ್ಯೆ ಮಹಾತ್ಮರಾಗಿ ಹುಟ್ಟಿ ಬಂದಿದ್ದಾರೆ. ದುಃಖಕ್ಕೆ ಸಾಂತ್ವನವಾಗಿ ಸುಖ ಇರುತ್ತದೆಯೇ ಹೊರತು, ಸುಖ ಸ್ಥಾಯೀಭಾವವಾಗಿ ಮನುಷ್ಯನ ಮನಸ್ಸಿನಲ್ಲಿರೋದು ಸಾಧ್ಯವಿಲ್ಲ. ದೇವರು ಮತ್ತು ದೇವಮಾನವರ ಉಪದೇಶಗಳನ್ನು ಗಮನವಿಟ್ಟು ವಿಶ್ಲೇಷಿಸಿದರೆ ಈ ಮಾತು ನಮ್ಮ ಅರಿವಿಗೆ ಬರುತ್ತದೆ. ಒಂದು ಜೀವ ಹುಟ್ಟಿತು ಎಂದಾಗಲೇ, ಪ್ರತಿ ಕ್ಷಣವೂ, ಪ್ರತಿ ಹೆಜ್ಜೆಯೂ, ಸಾವಿನೆಡೆಗಿನ ಪ್ರಯಾಣ ಎಂಬುದನ್ನು ಎಲ್ಲ ಧರ್ಮಗಳೂ ಸೂಚ್ಯಾರ್ಥದಲ್ಲಿ ಸಾರಿವೆ.

ಹತಾಶೆಯ ನೋವಿನ ಆಳವನ್ನು ತಿಳಿದಾತನೇ ಸುಖದ ಸ್ವರ್ಗಾನಂದವನ್ನು ಸರಿಯಾದ ಅರ್ಥದಲ್ಲಿ ಅನುಭವಿಸಬಲ್ಲ. ಹಾಗಾಗಿ ದುರಂತದ ಪ್ರಜ್ಞೆ ಇನ್ನೊಂದು ಅರ್ಥದಲ್ಲಿ ಸುಖದ ಸೃಷ್ಟಿಯೇ. ಇದನ್ನು ನಾನು ಮಧುರ ವ್ಯಸನ ಎಂದೇ ಕರೆಯುತ್ತಿದ್ದೇನೆ. ಹಾಗಾಗಿ ನನ್ನ ಹೆಚ್ಚಿನ ಕತೆಗಳು ದುರಂತ ಕತೆಗಳಾಗಿವೆ.

ಮಾತುಗಳಿಂದಲೇ ಈಗಿರುವ ಈ ಪ್ರಪಂಚ ಸೃಷ್ಟಿಯಾಗಿವೆ. ಈಗಿರೋ ಪ್ರಪಂಚ ಮನುಷ್ಯ ಸೃಷ್ಟಿಸಿದ ಪ್ರಪಂಚ. ಆಕಾಶದಲ್ಲಿ ಸ್ವರ್ಗವನ್ನೂ ಪಾತಾಳದಲ್ಲಿ ನರಕವನ್ನೂ ಅವನು ಮಾತುಗಳಿಂದಲೇ ನಿರ್ಮಿಸಿದ್ದಾನೆ. ಸಾಹಿತ್ಯ ಅಂದರೆ ಮನುಷ್ಯ ಮನಸ್ಸಿನ ಭಾವ ಭ್ರಮೆ ಮತ್ತು ಆಯಾ ವರ್ತಮಾನದಲ್ಲಿ ಕಂಡು ಹುಡುಕಲಾದ ಸತ್ಯಗಳು. ಬೈಬಲ್, ಕುರಾನ್, ರಾಮಾಯಣ, ಭಗವದ್ಗೀತೆ ಇತ್ಯಾದಿಗಳು ಬರೆಯಲ್ಪಡದಿದ್ದರೆ ಈ ಜಗತ್ತು ಖಂಡಿತಾ ಈಗಿರು ವಂತಿರುತ್ತಿರಲಿಲ್ಲ (ಆಸ್ತಿಕತೆ, ನಾಸ್ತಿಕತೆ ಮತ್ತು ದೇವಸತ್ಯದ ಕುರಿತಾಗಿ ಈ ಮಾತುಗಳಲ್ಲ ಎಂಬುದನ್ನು ಗಮನಿಸುವಿರಾಗಿ ನಂಬುತ್ತೇನೆ). ದೃಶ್ಯ ಪ್ರಪಂಚದಿಂದ ಅದೃಶ್ಯ ಪ್ರಪಂಚಕ್ಕೆ ಮನುಷ್ಯ ಮನಸ್ಸನ್ನು ಸಾಹಿತ್ಯ ಜೋಡಿಸುತ್ತದೆ. ಗಾಳಿಯಷ್ಟು ಅವಕಾಶ(Space)ದಷ್ಟು ವ್ಯಾಪಕ ಚಿಂತಾಗತಿ ಇರುವ ಮನುಷ್ಯ ಮನಸ್ಸಿಗೆ ಒಂದು ಶಿಸ್ತು ಒಂದು ದಾರಿ, ಒಂದು ಗುರಿಯನ್ನು ಸಾಹಿತ್ಯ ಕೊಡುತ್ತದೆ. ಸಾಹಿತ್ಯ ಅಂದರೆ ತಿಳುವಳಿಕೆಯ ಭಂಡಾರ. ಮನುಕುಲದ ಸಂಪತ್ತು. ಎಲ್ಲಾ ದಿಕ್ಕುಗಳಿಂದಲೂ ಇಲ್ಲಿ 'ಶಬ್ದ'ಗಳು ಬಂದು ಸೇರಬೇಕು. ಮನುಷ್ಯ ಭಾವನೆಗಳು ತಿರಸ್ಕೃತವಾಗಬಾರದು. ಸಾಹಿತ್ಯ ಮನುಷ್ಯನ ಕತೆ. ಅದು ಸುಳ್ಳಾಡಬಾರದು. ಇದು ಸಾಹಿತ್ಯದ ಬಗೆಗಿರುವ ನನ್ನ ದೃಷ್ಟಿ.

ನಾನು ಇದೇ ಎಂದು ಬೊಟ್ಟು ಮಾಡಿ ನನ್ನನ್ನು ತೋರಿಸಿಕೊಳ್ಳಲು ಭಯಪಡುತ್ತಿದ್ದೇನೆ. ನಾನು ಇದೇ ಎಂದು ಹೇಳಿದರೆ ಆ ಅದಲ್ಲ, ಈ ಇನ್ನೊಂದಲ್ಲ ಎಂದು ನಾನೇ ಹೇಳಿದ ಹಾಗಾಗಿ ಅದು ಇದು ಇನ್ನೊಂದಿಗೆ, ಕಾಲಗತಿಯಲ್ಲಿ ಬದಲಾದ ನನ್ನನ್ನು ನಾನೇ ನಿರಾಕರಿಸಿದ ಹಾಗಾಗಿ ನನಗೆ ಅತಿ ಸಂಕೋಚವಾಗುತ್ತದೆ. ನನ್ನ ಊನ ಮನಸ್ಸಿನ, ಕ್ಷತ ಮನಸ್ಸಿನ ವಿವಿಧ ಮಗ್ಗುಲುಗಳೂ ನಾನಲ್ಲ ಮತ್ತು ನಾನೇ ಆಗಿದ್ದೇನೆ. ಹೀಗೆ ಬಹುರೂಪಿಯಾಗಿ, ಬಹುಮುಖಿ ಯಾಗಿ ನನ್ನನ್ನೇ ನನ್ನ ಕೃತಿಗಳಲ್ಲಿ ನಾನು ತೋರಿಸಿಕೊಳ್ಳುತ್ತಿದ್ದೇನೆ.

ಶಂಕರೀ ನದಿ ನನ್ನ ಸುಖದ ಹೊಳೆ, ದುಃಖದ ಹೊಳೆ, ಪ್ರಶಾಂತ ಸರೋವರ, ನನ್ನ ಉಗಮ, ನನ್ನ ಅಲ್ಲೋಲಕಲ್ಲೋಲ ಸಮುದ್ರ. ಶಂಕರೀ ನದಿಯಲ್ಲಿ ನೀರು ಬತ್ತಿದರೆ ಇನ್ನೊಂದು ಕ್ಷಣದಲ್ಲಿ ನೆರೆ ಬರುತ್ತದೆ. ಶಂಕರ ಗುಡ್ಡ ನನ್ನ ಅಹಂಕಾರ, ನನ್ನ ಎತ್ತರ, ನನ್ನ ಕೀರ್ತಿ, ನನ್ನ ನಿಶ್ಚಲತೆ. ದುರ್ಗಾಪುರ ನನ್ನ ರಂಗ, ರಣರಂಗ, ನನ್ನ ಕ್ರಿಯಾಕ್ಷೇತ್ರ, ನನ್ನ ರುದ್ರ ಭೂಮಿ, ನನ್ನ ತೊಟ್ಟಿಲು. ನನ್ನ ಮಡಿಲು. ವಾಸ್ತವವಾಗಿ ಇವೆಲ್ಲ ಇಲ್ಲ, ನಾನು ಕೂಡ ನನ್ನ ಕಲ್ಪನೆ. ನನ್ನ 'ಕ್ರಿಯೇಶನ್'. ನನ್ನ ಕೃತ.

ಇದು ನನ್ನ ಮತ್ತು ನನ್ನ ಕತೆ.

ವಿಳಾಸ : 'ಕೃಪಾನಿಧಿ', ಆರ್.ಡಿ. ನಗರ
ಕಾಸರಗೋಡು - ೬೭೧ ೧೨೪

ನಿಜಗುರು

ಪ.ಸ. ಕುಮಾರ್



ನಾನು ಹಡಪದ್‌ರವರ ವಿದ್ಯಾರ್ಥಿಯಾದಾಗಿನಿಂದ ಇದುವರೆಗೂ ಅಂದರೆ, ಸುಮಾರು ಮೂವತ್ತು ವರ್ಷಗಳ ದೀರ್ಘಾವಧಿಯಿಂದ ಗಮನಿಸುತ್ತಿದ್ದೇನೆ. ಅವರನ್ನು ಕಂಡಾಗಲೆಲ್ಲ ನನ್ನ ಜ್ಞಾಪಕಕ್ಕೆ ತಟ್ಟನೆ ಹೊಳೆಯುವುದು ನನ್ನ ರಾಮಚಂದ್ರಪುರದ ಮನೆಯ ಹತ್ತಿರವಿದ್ದ 'ಡೈನಾಮೈಟ್' ಬಾವಿ. ಈ ಹೆಸರು ಬಾವಿಗೆ ಏಕೆ ಬಂತು ನನಗೆ ಸ್ಪಷ್ಟವಾಗಿ ತಿಳಿದಿಲ್ಲ. ಈಗ ಅದು ಇದೆಯೋ ಇಲ್ಲವೋ ಗೊತ್ತಿಲ್ಲ (ನಾನು ಈಗ ಅಲ್ಲಿಂದ ದೂರ ಬಂದಿದ್ದೇನೆ) ಬಾವಿಯ ಬಳಿ ನನ್ನ ಗೆಳೆಯರೊಡನೆ, ನಾನು ಗೋಲಿ ಬುಗುರಿ ಆಡುತ್ತಿದ್ದ ಸ್ಥಳ.

ಬಾವಿ ನೆಲಮಟ್ಟದಲ್ಲಿದ್ದು ವಿಶಾಲವಾಗಿಯೂ ಇತ್ತು. ಅಲ್ಲಿ ಬಾವಿ ಇದೆಯೆಂದು ತಿಳಿಯಲು ಅದರ ಸುತ್ತ ಸಣ್ಣಪುಟ್ಟ ಕಲ್ಲುಗಳನ್ನು ಇಟ್ಟದ್ದು ಬಿಟ್ಟರೆ ಬೇರಾವ ಬಂಧನವೂ ಅದಕ್ಕಿರಲಿಲ್ಲ. ಗರಿಕೆ ಹುಲ್ಲಿನ ರಂಗೋಲಿ ಮಾತ್ರ ಸುತ್ತ ಹರಡಿತ್ತು.

ಹುಡುಗರು ಬಾವಿ ಹತ್ತಿರ ಹೋಗದಿರಲೆಂದು 'ಬಾವಿಯಲ್ಲಿ ಭೂತವಿದೆ' ಎಂದು ಹೆದರಿಸಿದ್ದುಂಟು. ಭೂತವನ್ನು ಕಾಣಲು ಇಣುಕಿದಾಗ ನಾನು ಕಾಣುತ್ತಿದ್ದುದು ಹೆಬ್ಬಂಡೆಗಳ ನಡುವೆ ನಗುತ್ತಿದ್ದ ತಿಳಿನೀರನ್ನು.

ಈ ಬಾವಿಗೆ ರಾತ್ರಿ, ಹಗಲಿನ ಪರಿವೆಯಿರಲಿಲ್ಲ. ಬಟಾಬಯಲಿನಲ್ಲಿ ಬದುಕಲು ಭಯ, ನಾಚಿಕೆ ಇವು ಯಾವುದು ಕಾಡಿರಲಿಲ್ಲ. ಯಾವ ಋತುವಿನೊಡನೆಯೂ ವೈರತ್ವವಿರಲಿಲ್ಲ. ಬೇಸಿಗೆಯಲ್ಲಿ ಉರಿವ ಸೂರ್ಯನೊಡನೆ, ಬೆಳದಿಂಗಳಿನಲ್ಲಿ ಚಂದ್ರನೊಡನೆ, ಕತ್ತಲಲ್ಲಿ ತಾರೆಗಳೊಡನೆ, ಚಳಿಯಲ್ಲಿ ಹಿಮದೊಡನೆ, ಮಳೆಯ ಹನಿಯೊಡನೆ ಆಟವಾಡುತ್ತಿತ್ತು.

ಮಟಮಟ ಮಧ್ಯಾಹ್ನದಲ್ಲಿ ಸೂರ್ಯ ತಿಳಿನೀರಿನಲ್ಲಿ ತೇಲುತ್ತಿದ್ದರೆ, ರಾತ್ರಿಯಲ್ಲಿ ಚಂದ್ರ ತಾರೆಯರು ಜಳಕವಾಡುತ್ತಿದ್ದರು. ಆದರೆ ಸೂರ್ಯನನ್ನಾಗಲಿ ಚಂದ್ರ ತಾರೆಯರನ್ನಾಗಲಿ ಅಂಟಿಸಿಕೊಳ್ಳಲಿಲ್ಲ. ತೇಲಿಸಿ ನಲಿಸಿ, ಸರಿಸಿದ್ದು ಮಾತ್ರ. ತಮ್ಮ ನಿಜ ರೂಪ ನೋಡಿಕೊಳ್ಳಲು ಬಾವಿಗೆ ಇಣುಕಿದವರು ನೂರಾರು. ತಿಳಿನೀರಿನ ಸೊಗಸಿಗೆ ಸೋತವರು ಕೆಲವರು. ಕಸಕಡ್ಡಿ ಹಾಕಿ ರಾಡಿ ಎಬ್ಬಿಸಿದವರು ಹಲವರು.

ಬಾವಿ ಮಾತ್ರ ಎಂದಿಗೂ ನಿರ್ಲಿಪ್ತ. ಬಿದ್ದ ಕಸ ಕಡ್ಡಿಯನ್ನು ಮೆಲ್ಲನೆ ದಡಕ್ಕೆ ಸರಿಸಿ ಎಂದಿನಂತೆ ತಿಳಿಯಾಗಿ ನಗುವ ಹುಟ್ಟುಗುಣ.

ಬೇಲಿಯಿಲ್ಲದ, ಬಾಗಿಲಿಲ್ಲದ ಬಾವಿಗೆ ಮಡಿ ಮೈಲಿಗೆಯಿರಲಿಲ್ಲ, ಬಳಲಿ ಬಂದವರು ಮೊಗೆದಷ್ಟು ನೀರು ಕೊಟ್ಟು ದಾಹ ತಣಿಸಿದ ತೃಪ್ತಿ. ನಾನು ಕಂಡಂತೆ ಎಂದೂ ಬತ್ತಿಲ್ಲ.

ಬದಲಾದ ಋತುವಿನೊಡನೆ ಹರಿದುಬರುವ ಹೊಸನೀರು ಹಳೆನೀರಿನೊಡನೆ ಸೇರಲು ಯಾವ ನಾಯಕನ ಅಪ್ಪಣೆಯೂ ಪಡೆಯಬೇಕಿರಲಿಲ್ಲ. ಬಾವಿ, ಭೂಮಿ ನೇರ ಕಡಿದುಕೊಂಡಿರಲಿಲ್ಲ. ಎಂದೂ ಆಕಾಶದಲ್ಲಿ ತೇಲಿದ್ದು ನಾ ಕಂಡಿಲ್ಲ.

ಹಡಪದ್‌ರವರನ್ನು ಕಂಡಾಗಲೆಲ್ಲಾ ಈ ಬಾವಿ ನನ್ನ ಸ್ಮೃತಿ ಪಟಲದಲ್ಲಿ ಮಿಂಚುತ್ತೆ. ಕಾರಣ ಸ್ಪಷ್ಟವಾಗಿಲ್ಲ. ಗುಣ ಸಾಮ್ಯವಿರಬಹುದು, ಅದೇನೇ ಇರಲಿ,

ಹಡಪದ್‌ರವರ ಜೀವನ ಜಾಕ್ಸನ್ ಪೊಲಾಕ್‌ರವರ ವಿಶಾಲ Abstract ಚಿತ್ರಗಳಿದ್ದಂತೆ. ನಿರ್ದಿಷ್ಟ ಆಕಾರವಿಲ್ಲದೆಯೂ ಆಕರ್ಷಕವಾಗಿ ಕಾಣುವ, ಅಡ್ಡಾದಿಡ್ಡಿ ಬಣ್ಣ ಎರಚಿದ ಕ್ರಮವೇ ಅಪ್ತವಾಗಿಬಿಡುವ, ಪಂಥ ಫಿಲಾಸಫಿಗಳ ಸೋಂಕು ರೋಗದಿಂದ ದೂರ ನಿಂತು ತನ್ನತನವನ್ನು ಕಾಪಾಡಿಕೊಳ್ಳುವ ಈ ಕೃತಿಯಂತೆಯೇ ನನ್ನ ಗುರುವಿನ ಜೀವನ.

ಮುಗ್ಧತೆ, ಸರಳತೆ, ಮಾನವೀಯತೆ, ಇವು ಹಡಪದ್‌ರವರು ಇಂದಿಗೂ ರೂಢಿಸಿಕೊಂಡು, ಉಳಿಸಿಕೊಂಡು ಬಂದಿರುವ ಜೀವನ ಕ್ರಮ. ಇದರಿಂದಾಗಿಯೇ ಕಲಾಕ್ಷೇತ್ರದಲ್ಲಿ ಅವರು ಅಜಾತಶತ್ರು ಮತ್ತು ನಿಜಗುರು.


ಇವರು ಪ್ರಚಾರಪ್ರಿಯರಲ್ಲ, ಸ್ವಾರ್ಥ ಪ್ರಿಯರಲ್ಲ, ಆದರೆ, ಜ್ಞಾನದಾಹಿ, ಸೂಕ್ಷ್ಮಗ್ರಾಹಿ. ದುಶ್ಚಟಗಳಿಗೆ ಬಲಿಯಾಗದ ಪ್ರಕೃತಿ ಪ್ರಿಯ ಈ ಪುರುಷ. ಶಿಸ್ತು ಮತ್ತು ಸಮಯ ಪ್ರಜ್ಞೆ ಇವರಿಂದ ಸ್ವಲ್ಪ ದೂರ. ನೇರ ಮಾತಿನ ಸರದಾರ. ಇದರಿಂದಾಗಿಯೇ ಇವರು ಕಟ್ಟಿದ್ದು ಕುಟೀರ ಮಾತ್ರ.

ಈ ಕುಟೀರಕ್ಕೆ ಯಾವ ವಿದ್ಯೆಯೂ ಮೈಲಿಗೆಯಲ್ಲ. ಹಾಗಾಗಿ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ವಿಜ್ಞಾನ ಮತ್ತು ಇತರ ಪ್ರಕಾರಗಳಿಗೆ ಇದು ತೆರೆದ ವೇದಿಕೆ. ಚರ್ಚೆ, ಗೋಷ್ಠಿ ಭಾಷಣಗಳು ಇಲ್ಲಿ ಸಾಮಾನ್ಯ. ಎಲ್ಲ ಕ್ಷೇತ್ರದ ಅಸಾಮಾನ್ಯರೊಡನೆ ವಿದ್ಯಾರ್ಥಿಗಳಿಗೆ ಬೆರೆತು ಕಲಿಯುವ ಅವಕಾಶ. ಇಲ್ಲಿ ಗಳಿಸಿದ ಮೂಲದ್ರವ್ಯವೇ ವಿದ್ಯಾರ್ಥಿಗಳ ಬಂಡವಾಳ. ಬತ್ತಳಿಕೆಯಲ್ಲಿ ಬಹು ವಿಧದ ಅಸ್ತ್ರಗಳು. ಇದರಿಂದಾಗಿ ರಾಷ್ಟ್ರೀಯಮಟ್ಟದ ಪ್ರಶಸ್ತಿ, ಪುರಸ್ಕಾರ, (Scholarship)ಗಳಲ್ಲಿ ಸಿಂಹಪಾಲು ಇವರದ್ದೇ.

ಹಡಪದ್‌ರವರು ಯಾವೊಂದು ಶೈಲಿ, ಪಂಥ, ಮಾಧ್ಯಮಗಳಿಂದ ಬಂಧಿತರಾಗಲಿಲ್ಲ. ಇದು ವಿದ್ಯಾರ್ಥಿಗಳ ಅದೃಷ್ಟ-ಋಷಿಕೊಡುವ ಶೈಲಿಯನ್ನು ಕಲಿಯುವ ಸ್ವಾತಂತ್ರ್ಯ. ರಾಷ್ಟ್ರ ಅಂತರರಾಷ್ಟ್ರ ಮಟ್ಟದಲ್ಲಿ ನಡೆಯುವ ಪ್ರಯೋಗಗಳು ಈ ಕುಟೀರದಲ್ಲಿ ಕೂಡಲೇ ಪ್ರತಿಬಿಂಬಿಸುವಂತೆ ಕಾರ್ಯಶೈಲಿ. ಇದು ಗುರುಗಳ ಜಾಗೃತ ಮನಸ್ಸಿನ ಫಲ.

ಕೃಪೆ : ಎಂ.ಆರ್. ಹಡಪದ್ ಅವರ ಅಭಿನಂದನಾ ಗ್ರಂಥ
ಸಂ : ಎನ್. ಮರಿಶಾಮಾಚಾರ್.

ಪುಸ್ತಕ ಪರಿಚಯ



ವ್ಯಕ್ತಮಧ್ಯದ ವಿಷಾದದ ಸಾಲುಗಳು

ಹೊಸ್ತಿಲು ಹಿಮಾಲಯದ ಮಧ್ಯೆ (ಕವನ ಸಂಕಲನ)

ಕವಿ : ವಾಸುದೇವ ನಾಡಿಗ್

ಬೆಲೆ : **ರೂ. 40/-**

ಪ್ರಕಾಶನ : 'ಸಂಚಯ', ನಂ. 100, 2ನೇ ಮೇನ್, 6ನೇ ಬ್ಲಾಕ್, 3ನೇ ಹಂತ, ಬನಶಂಕರಿ, ಬೆಂಗಳೂರು - 560 085

ದೂರದ ಛತ್ತೀಸಗಢದ ರಾಜಧಾನಿ ರಾಯಪುರದಲ್ಲಿ ಕನ್ನಡದ ಪಾಠ ಹೇಳುತ್ತಲೇ ಪತ್ರಿಕೆಗಳಲ್ಲಿ ತಮ್ಮ ಕವಿತೆಗಳನ್ನು ಪ್ರಕಟಿಸುವುದರ ಮೂಲಕ ನಮ್ಮ ಹತ್ತಿರದಲ್ಲೇ ಇದ್ದಂತೆನಿಸುವ ವಾಸುದೇವ ನಾಡಿಗ್ ಮೂವತ್ತು ಕವಿತೆಗಳುಳ್ಳ 'ಹೊಸ್ತಿಲು ಹಿಮಾಲಯದ ಮಧ್ಯೆ' ಶೀರ್ಷಿಕೆಯ ಎರಡನೆಯ ಸಂಕಲನ ಪ್ರಕಟಿಸಿದ್ದಾರೆ.

'ವೃಷಭಾಚಲದ ಕನಸು' ಎಂಬ ತಮ್ಮ ಮೊದಲ ಸಂಕಲನದಲ್ಲಿ ಸಾಕಷ್ಟು ಭರವಸೆ ಮೂಡಿಸಿದ್ದ ನಾಡಿಗ್, ವೃಷಭಾಚಲವನ್ನು ಮೀರುವ ಕನಸುಗಳನ್ನು ನೇಯ್ದವರು. ಬದುಕಿನ ಅಷ್ಟೂ ಅನಿವಾರ್ಯ ಸತ್ಯಗಳನ್ನು ಈ ಸಂಕಲನದಲ್ಲಿ ಹಿಡಿಯಹೊರಟಿದ್ದಾರೆ. ಮುನ್ನುಡಿ, ಬೆನ್ನುಡಿಗಳ ಹಂಗಿಗೂ ಬೀಳದೇ ಇಡಿಇಡಿಯಾಗಿ ಕವಿತೆಗಳನ್ನು ಓದುಗರಿಗೆ ಹಾಗೇ ಬಿಡುವುದು ತುಂಬ ಧೈರ್ಯದ ಕೆಲಸವೆಂದು ಒಪ್ಪುವ ಮಾತಾದರೂ, ಮುನ್ನುಡಿಕಾರರ/ ಬೆನ್ನುಡಿಕಾರರ ಕಿವಿಮಾತುಗಳಿಂದಾದರೂ ಕವಿ ಸಂಕಲನದ ಕೆಲ ಕವಿತೆಗಳನ್ನು ಮತ್ತಷ್ಟು ಓರಣಗೊಳಿಸಬಹುದಾಗಿದ್ದ ಸಾಧ್ಯತೆಗಳಿಂದಲೂ ವಂಚಿತರಾಗಿದ್ದಾರೆ.

ಆಪ್ತವೆನಿಸುವ ಆಕರ್ಷಕ ಮುಖಪುಟ, ಹುಡುಕಿದರೂ ತಪ್ಪು ಸಿಗದಂಥ ಅಕ್ಷರ ಜೋಡಣೆ, ಉತ್ತಮ ಗುಣದ ಕಾಗದದ ಬಳಕೆ, ಪುಸ್ತಕ ವಿನ್ಯಾಸದ ಸೊಗಸುಗಳು ಗಮನ ಸೆಳೆಯುತ್ತವೆ.

ಹೊಸ್ತಿಲು ದಾಟುವುದಕ್ಕೂ ಹಿಂದೆಮುಂದೆ ನೋಡುತ್ತ ಪರದಾಡುತ್ತಿರುವ ನಮ್ಮೆಲ್ಲರ ಎದುರಿಗೆ ಹಿಮಾಲಯದೆತ್ತರದ ಬದುಕು ನಿಂತಿದೆ. ಎಲ್ಲ ದೌರ್ಬಲ್ಯಗಳನ್ನು ಮೆಟ್ಟಿ ಹಿಮಾಲಯವನ್ನೇರಿ ಬದುಕ ಗೆಲ್ಲಬೇಕೆಂಬ ಆರ್ತತೆಯನ್ನು ಸಂಕಲ್ಪ ಧ್ಯಾನಿಸುತ್ತಿದೆ. ಅಡಿಗರನ್ನು ಶಿವಪ್ರಕಾಶರನ್ನು ಹಾಗೆ ತಿರುಮಲೇಶರನ್ನು ಕವಿ ಓದಿಕೊಂಡಿರುವುದು ಇಲ್ಲಿನ ಕವಿತೆಗಳ 'ಅರ್ಥವ್ಯವಸ್ಥೆ'ಯಿಂದ ಗುರುತಿಸಬಹುದು.

ಅಜ್ಜೀಮನೆಯಿಂದ ಬೀಜ ಕೊಂಡೊಯ್ದು ಅಮೇರಿಕೇಲಿ ಕೊತ್ತಂಬರಿ ಬೆಳೆದ ಅತ್ತೆ ಮಗಳು (ಕೂತ ಕೂತಲ್ಲೇ ಕವಿತೆ), 'ನೀರು – ಹರಿದರೆ ಹೊಳೆ, ನಿಂತರೆ ಕೆರೆ, ಮಡುಗಟ್ಟುವ ಜೀವ, ನಿರಾಶೆ'(ನೀರು), ಕೊಳಲು ಊದಲು ಸೋತ ಹುಡುಗನ ಶಿಳ್ಳೆಗೆ ಹುಡುಗಿಯೊಬ್ಬಳು ತಪಿಸುತ್ತಾಳೆ ಅಥವಾ ಶಪಿಸುತ್ತಾಳೆ (ಕೊಳಲ ವ್ಯಾಪಾರ), ಕಣ್ಣಲ್ಲಿ ಹೊಳೆಯುತ್ತದೆ ಸಾವಿರ ಹುಡುಗಿಯರ ಕನಸುಗಳು(ಅಕ್ಕ ಮತ್ತು ಮಲ್ಲಿಗೆ ಬಳ್ಳಿ) ಎನ್ನುವುದೆಲ್ಲ ವಾಚಾಳಿತನದಂತೆ ಕಂಡರೂ ಕವಿತೆಯ ಕಂಪು ಅರಳಿಸುವಲ್ಲಿ ಸಾರ್ಥಕವಾದ ಸಾಲುಗಳಾಗಿವೆ.

'ಲೊಚಗುಟ್ಟುತ್ತ ನಡೆವ ಮನುಷ್ಯರು ನಾಳಿನ ಪತ್ರಿಕೆಗಾಗಿ ಕಾಯುತ್ತಾರೆ'(ಜಡನಗರದಲ್ಲೊಂದು ಸಂಜೆ) ಕಣ್ಣಂಗಳದಲ್ಲಿ ಕುಣಿವ ಬೆಳಕು ಹೊರಬರಲು ರೆಪ್ಪೆಯನುಮತಿ ಬೇಕು (ಚಲಿಸು ಬದುಕೇ), ಹೊಂದಾಣಿಕೆಯೊಂದೇ ಗತಿ, ಬೇಡವೆನಿಸಿದಾಗೆಲ್ಲ ಬಿಚ್ಚಿಡುವುದಕ್ಕೆ ಬದುಕು ಶೂಗಳಲ್ಲ(ಹೊಸ ಶೂಗಳು) ಎನ್ನುವ ಸಾಲುಗಳಲ್ಲಿ ಕವಿ ನಿಜದ ಬದುಕು ನಮಗೆಲ್ಲ ಕಲಿಸುತ್ತಿರುವ ಪಾಠಗಳನ್ನು ಪುನಃ ನೆನಪಿಸುತ್ತ ವಾಸ್ತವವನ್ನು ಬಿಚ್ಚಿಡುವುದರಲ್ಲಿ ಮೆಚ್ಚುಗೆ ಗಳಿಸುತ್ತಾರೆ.

ಆದರೆ ಹಟಕ್ಕೆ ಕೂತು ಬರೆದಂತೆ ಕಾಣುವ ಕೆಲ ಕವಿತೆಗಳು, ಆ ಕ್ಷಣಕ್ಕೆ ಹೊಳೆದ ಅಮೂರ್ತಚಿತ್ರಗಳಂತೆ, ಹೊಸದನ್ನು ಹೇಳುವುದರಲ್ಲಿ ಎಡವಿವೆ. ಖಾಲಿ ಸೈಟು, ಹುಬ್ಬೇರಿಸುವ ಸಂಗತಿ, ಯಂತ್ರ, ನಾಯಿಪಾಡು ಕವಿತೆಗಳೆಂದು ಕರೆಯಲ್ಪಟ್ಟ ಶುದ್ಧ ಹಳಹಳಿಕೆಗಳಾಗಿವೆ.


ಪುರಾಣದ ಪಾತ್ರಗಳನ್ನು ವರ್ತಮಾನಕ್ಕೆ ಸಿಕ್ಕಿಸಿ ಸಂಬಂಧಗಳನ್ನು ವಿವೇಚಿಸುವ ರಚನೆಗಳಾದ 'ಭಾನುಮತಿಗೆ ಕರ್ಣ', 'ಹುಟ್ಟು' ಭೇಷ್ ಎನಿಸುವಂತಿವೆ.

ಕವಿ ಅವಸರಕ್ಕೆ ಬೀಳದೆ ಇನ್ನೂ ಧ್ಯಾನಿಸಿದ್ದರೆ ಸಾರ್ಥಕ ಕವಿತೆಗಳಾಗಬಹುದಿದ್ದ 'ವಿಸ್ಮಯ ಗೀತೆ', 'ಅವಿಶ್ರಾಂತ ಪಥ', 'ದಾರಿಗಳು' ತತ್ವ ಬೋಧಿಸಲು ಹೊರಟ ಆಚಾರ್ಯರು ಸಂದರ್ಭವನ್ನು ಮರೆತು ಹರಿಕತೆಗೆ ತೊಡಗಿದಂತೆ ಕಾಣುತ್ತವೆ.

ಪುಸ್ತಕದ ಶೀರ್ಷಿಕೆಯ ಕವಿತೆ ಸಂಕಲನದಲ್ಲಿಲ್ಲದೇ ಅದೊಂದು ಕವಿತೆಯೊಳಗಿನ ಸಾಲಾಗಿರುವುದು ಇಲ್ಲಿನ ವಿಶೇಷ. ಮುನ್ನುಡಿ-ಹಿನ್ನುಡಿಗಳ ಪರಿಮಾಣ ಸೂಚನೆಗಳಿಲ್ಲದೆ ಹಿಮಾಲಯದೆತ್ತರ ಗೊತ್ತಾಗದೆ ಅದರ ತಪ್ಪಲಲ್ಲಿ ಅಟಕ್ಕಿರುವ ಸಾಧ್ಯತೆಗಳನ್ನೂ ಮರೆತು, ಗಿರಿ ನೆತ್ತಿಯ ಕನಸಲ್ಲಿ ವಾಸ್ತವವನ್ನು ಸಮೀಕರಿಸುತ್ತ ಅನ್ಯಮನಸ್ಕನಾದ ತಾತ್ವಿಕನಂತೆ ಕವಿ ಕಾಣತೊಡಗುತ್ತಾರೆ.

ಕೂತಕೂತಲ್ಲೇ ಕವಿತೆ, ಕೊಳಲ ವ್ಯಾಪಾರ, ಕಣ್ಣೀರಲ್ಲದಿದ್ದ ಕವಿತೆ ಮತ್ತು ಗೂಳಿ ಇಡೀ ಸಂಕಲನ ಧ್ಯಾನಿಸುವ ಪ್ರಾತಿನಿಧಿಕ ಅಂಶಗಳನ್ನೊಳಗೊಂಡಿವೆ. ಬಂಡಾಯದ ಆರ್ಭಟ, ಕಿಚ್ಚು ಹೊತ್ತಿಸುವ ಉದ್ವಿಗ್ನತೆ, ಕತೆಯೊಂದನ್ನು ಕವಿತೆಯಾಗಿಸುವ ಕಲೆ ಇಲ್ಲಿನ ಕವಿತೆಗಳಲ್ಲಿಲ್ಲದೆಯೂ ವ್ಯಕ್ತ ಮಧ್ಯದ ವಿಷಾದದ ಸಾಲುಗಳನ್ನು ಸಮರ್ಥವಾಗಿ ಹಿಡಿದ ಸಂಕಲನ ಇದಾಗಿದೆ.

ಡಿ.ಎಸ್. ರಾಮಸ್ವಾಮಿ



ಸಾಂಸ್ಕೃತಿಕ ಸಂಘರ್ಷಕ್ಕೊಂದು ತೊದಲು ನುಡಿ

ಕನ್ನಡದ ಹಾಡು ಪಾಡು

ಲೇಖಕ : ಡಾ. ಕೆ.ಸಿ. ಶಿವಾರೆಡ್ಡಿ

ಪುಟ : xvi + 304

ಬೆಲೆ : **ರೂ. 125/-**

ಪ್ರಕಾಶನ : ಅಧ್ಯಯನ ಮಂಡಲ, 13/85, ಆರ್.ವಿ.ರಸ್ತೆ ಬಸವನಗುಡಿ, ಬೆಂಗಳೂರು - 560 004

'ಕನ್ನಡದ ಹಾಡು ಪಾಡು' ಗ್ರಂಥದ ಕೊನೆಯಲ್ಲಿ ಕೆ.ಸಿ. ಶಿವಾರೆಡ್ಡಿ ಹೀಗೆ ಬರೆದಿದ್ದಾರೆ:

'ಅಧಿಕಾರಶಕ್ತಿಯ ಬಹುಮುಖಿ ನೆಲೆಗಳು ಹಾಗೂ ಅದರ ದಮನವನ್ನು ಮೀರುವ ಬಹುಮುಖಿ ನೆಲೆಗಳು ಇಡೀ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಕ್ರಿಯಾಶಾಲಿಯಾಗಿ

ಅಭಿವ್ಯಕ್ತಿಗೊಳ್ಳುತ್ತ ಬಂದಿದೆ. ಅಧಿಕಾರ ಕೇಂದ್ರವನ್ನು ಒಂದು ಖಚಿತ ವಿಧಿಯೆಂದು ಕನ್ನಡ ಸಂಸ್ಕೃತಿ ಭಾವಿಸಿಲ್ಲ... ಅಧಿಕಾರ ಕೇಂದ್ರವನ್ನು ಕನ್ನಡ ಸಂಸ್ಕೃತಿಯು ಏಕಪಕ್ಷೀಯವಾಗಿ ತಿಳಿಯದೆ, ಅದಕ್ಕೆ ಅನೇಕ ಸವಾಲುಗಳನ್ನು ಕೂಡ ಒಡ್ಡುತ್ತ ಬಂದಿದೆ. ಇದು ಕನ್ನಡ ಸಂವೇದನೆಯ ಮಹತ್ವದ ಸಾಂಸ್ಕೃತಿಕ ರಾಜಕಾರಣದ ನೆಲೆಯಾಗಿದೆ.' (ಪು. ೨೩೮). ಬೇಂದ್ರೆ, ಕುವೆಂಪು, ಅಡಿಗ, ಕಂಬಾರರು ಕಳೆದ ಒಂದು ನೂರು ವರ್ಷಗಳಲ್ಲಿ ಬ್ರಿಟಿಷರ ವಸಾಹತುಶಾಹಿ ಮತ್ತು ಸ್ವಾತಂತ್ರ್ಯಾನಂತರದ 'ನಮ್ಮವರ' ವಸಾಹತುಶಾಹಿಗೆ ತಮ್ಮ ಕಾವ್ಯದ ಮೂಲಕ ತೋರಿಸಿದ ಸೂಕ್ಷ್ಮ ಪ್ರತಿಕ್ರಿಯೆ, ಪ್ರತಿರೋಧವನ್ನು ಕಣ್ಣಿಗೆ ಕಟ್ಟುವಂತೆ ಈ ಪುಸ್ತಕ ತೆರೆದಿಟ್ಟಿದೆ.

ನಮ್ಮಲ್ಲಿ ಒಂದು ಪಿಎಚ್.ಡಿ. ಮಹಾಪ್ರಬಂಧ ಹೊರಬಿದ್ದಾಗ ಕೇಳುವ ಮೊದಲ, ಸಹಜ ಪ್ರಶ್ನೆ 'ಇದರಿಂದ ಏನು ಪ್ರಯೋಜನ?' ಎಂದು. ನಾಡಿನ ಬೌದ್ಧಿಕ ಪ್ರಜೆಗಳ ('ಬುದ್ಧಿ ಜೀವಿಗಳ') ಆಸಕ್ತಿ ಕುತೂಹಲ ತಣಿಸುವ ಜತೆಜತೆಗೇ ಕೆರಳಿಸುವ ಕೆಲಸವನ್ನಂತೂ ಈ ರೀತಿ ಬರಹ ಮಾಡಲೇಬೇಕೆಂಬುದು ಒಂದು ಅಪೇಕ್ಷೆಯಾದರೆ, ನಾಡಿನ ವರ್ತಮಾನದ ತವಕ ತಲ್ಲಣಗಳಿಗೆ ಈ ಕೃತಿ ಏನಾದರೂ ಬೆಳಕಿನ ಕಡ್ಡಿಗೀರುತ್ತದೆಯೇ ಎಂಬ ದೂರದ ಆಸೆಯೂ ಇದ್ದೇ ಇರುತ್ತದೆ. 'ಕನ್ನಡದ ಹಾಡುಪಾಡು' ಇಪ್ಪತ್ತೊಂದನೆಯ ಶತಮಾನದಲ್ಲಿ ನಾಡು ಅನುಭವಿಸುತ್ತಿರುವ ಹಾಡುಪಾಡಿಗೆ, ನೋವಿಗೆ ಧ್ವನಿಯಾಗುವ ಶಕ್ತಿ ಹೊಂದಿದೆ. ಬಹುರಾಷ್ಟ್ರೀಯ ಕಂಪೆನಿಗಳು, ಜಾಹೀರಾತುಗಳ ನಡುವೆ ಹುದುಗಿಹೋಗುತ್ತಿರುವ ನಾಡಿನ ಸಂಸ್ಕೃತಿ, ಆಳದ ಧ್ವನಿ ಪ್ರತಿಭಟನೆಯ ಸ್ವರಗಳನ್ನೆತ್ತಲೇಬೇಕಾದ ಸಂದರ್ಭದಲ್ಲಿ — ಸ್ವಲ್ಪಮಟ್ಟಿಗೆ ಇಂದಿನಂಥದ್ದೇ ಕಾಲದಲ್ಲಿ ಬದುಕಿದ್ದ ಸ್ವಾತಂತ್ರ್ಯಪೂರ್ವದ ನಾಗರಿಕರು, ಸ್ವಾತಂತ್ರ್ಯಾನಂತರದ ಪ್ರಜೆಗಳು ಅನುಭವಿಸಿದ ತಲ್ಲಣಕ್ಕೆ ನಮ್ಮ ಕವಿಗಳು ಸೃಜನಾತ್ಮಕವಾಗಿ ನೀಡಿದ ಅಭಿವ್ಯಕ್ತಿಯ ಶೋಧನೆ ತುಂಬ ಪ್ರಾಮಾಣಿಕವಾಗಿದೆ.

ಸ್ವಾತಂತ್ರ್ಯದಾಹ, ಪ್ರಜಾಪ್ರಭುತ್ವ, ಸರ್ವಾಧಿಕಾರದ ವಿಮರ್ಶೆ, ಜಾತಿ-ಪುರೋಹಿತ ಶಾಹಿಯ ಟೀಕೆ, ವಿಜ್ಞಾನದ ಸರ್ವಾಧಿಕಾರ ವಿರುದ್ಧ ಧ್ವನಿ ಈ ಸಂಗತಿಗಳ ಚರ್ಚೆಯನ್ನು ಶಿವಾರೆಡ್ಡಿಯವರು ಬೇಂದ್ರೆ, ಕುವೆಂಪು, ಅಡಿಗ, ಕಂಬಾರರ ಕಾವ್ಯದ ಮೂಲಕ ಹುಡುಕಿದ್ದಾರೆ. ಅವರೇ ಹೇಳಿರುವಂತೆ ಇದು, 'ನಮ್ಮ ಕಾವ್ಯ ಪರಂಪರೆಯ ಜೀವಂತ ಪ್ರಕರಣಗಳ ನೆಲೆಗಳ' ಚಿತ್ರಣವೂ ಹೌದು (ಪು. ೫೦).

ಕಾವ್ಯ ಮತ್ತು ವಸಾಹತುಶಾಹಿಯ ಮುಖಾಮುಖಿಯಲ್ಲಿ ಅನೇಕ ಹೊಸ ಸಂಗತಿಗಳು ಬೆಳಕಿಗೆ ಬಂದಿರುವುದು ಶ್ಲಾಘನೀಯ. ಕ್ರೈಸ್ತ ಮಿಷನರಿಗಳು, ಪಾಶ್ಚಾತ್ಯ ವಿದ್ವಾಂಸರು, ಕನ್ನಡ ಸಂಸ್ಕೃತಿಯ ಅಧಿಕೃತ ವಕ್ತಾರರಾಗುತ್ತ ಹೋದ ಬಗೆ (ಪು. ೪೬), ನವೋದಯ ಸಾಹಿತ್ಯವು ತತ್ವಪದಕಾರರಿಂದ ಪುಷ್ಟಿ ಪಡೆದದ್ದನ್ನು ಹೇಳಿದಂತೆಯೇ ಪಾಂಡಿತ್ಯದ ಹೊರೆಯಿಂದ ತತ್ವಪದಕಾರರು ಬಳಲಿದ್ದನ್ನು ಖಚಿತವಾಗಿ ತೋರಿಸಿಕೊಟ್ಟಿದ್ದಾರೆ (ಪು. ೫೨). ಕುವೆಂಪು ಅವರ 'ಕುಮಾರವ್ಯಾಸ ಹಾಡಿದನೆಂದರೆ' ಕವಿತೆಯ ಹೊಸ ಓದು ತುಂಬ ಅರ್ಥಪೂರ್ಣ ವಾಗಿದೆ (ಪು. ೧೨೬). ಇಷ್ಟಾಗಿಯೂ ಶಿವಾರೆಡ್ಡಿಯವರು ತೀರಾ ಗಮನಿಸಲೇಬೇಕಾದ ಕೆಲವು ಅಂಶಗಳಿವೆ.

ಲಾವಣಿಗಳು, ತತ್ವಪದಕಾರರನ್ನು 'ನವೋದಯ ಪೂರ್ವ ಕಾವ್ಯ'ದಲ್ಲಿ ಗುರುತಿಸುವಾಗಲೂ ದೇವಚಂದ್ರನ 'ರಾಜಾವಳಿ ಕಥಾಸಾರ', ಕಣ್ತಪ್ಪಿ ಹೋಗುವುದೇಕೆ? ಕನ್ನಡ ನಾಡಿನಲ್ಲಿ ಬ್ರಿಟಿಷ್ ವಸಾಹತುಶಾಹಿ ಕಾಲಿಡುವುದನ್ನು ಸಂಕೀರ್ಣ ನೆಲೆಯಲ್ಲಿ ದಾಖಲಿಸಿರುವ ಕನ್ನಡದ

ಒಂದು ಪ್ರಮುಖ ಸಾಂಸ್ಕೃತಿಕ ಪತ್ಯವು ಗಂಭೀರ ಸಂಶೋಧನೆಯಲ್ಲೂ ಸುಳಿಯದಿರುವುದು ಸರಿಯಲ್ಲ. ಆಶ್ಚರ್ಯದ ಸಂಗತಿಯೆಂದರೆ ವಸಾಹತುಶಾಹಿಯು ಉಂಟುಮಾಡುವ ವೈಚಾರಿಕ ಆಕೃತಿಗಳ ವಿರೂಪ, ವಿಸ್ಮೃತಿಗಳೆರಡನ್ನೂ ಎಲ್ಲೂ ಪ್ರಸ್ತಾಪಿಸದಿರುವುದು.

'ಭಾರತೀಯ ಸಂಸ್ಕೃತಿ' ಪದ ಗ್ರಂಥದಲ್ಲಿ ವ್ಯಾಖ್ಯಾನಕ್ಕೆ ಒಳಪಡದೆ ಉದ್ದಕ್ಕೂ ಬಳಕೆಯಾಗಿದೆ (ಪು. ೨೫-೨೭, ೨೦೨, ೨೫೨). 'ಭಾರತೀಯ ಕಾವ್ಯಮೀಮಾಂಸೆ' ಪರಿಕಲ್ಪನೆಯನ್ನು ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ವಿಶ್ಲೇಷಿಸಿ, ಅನುಮಾನಿಸಿ ನೋಡುತ್ತಿರುವ ಸಂದರ್ಭದಲ್ಲಿ 'ಭಾರತೀಯ' ವಿಶೇಷಣದ ಪದ-ಪರಿಕಲ್ಪನೆಗಳ ಮರುವ್ಯಾಖ್ಯಾನದ ಅಗತ್ಯವಿದೆ. ಗ್ರಂಥದ ದೊಡ್ಡ ಕೊರತೆಯೆಂದರೆ ನವೋದಯದ ಸಂದರ್ಭದಲ್ಲಿ ಕನ್ನಡ ನಾಡನ್ನು ಸಾಹಿತ್ಯ, ನಾಟಕ, ನಾಯಕತ್ವದ ಮೂಲಕ ಪ್ರಭಾವಿಸಿದ್ದ ಮರಾಠಿ ಪ್ರಭಾವವನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದು. ಗೊಡ್ಡು ಪಾಂಡಿತ್ಯವನ್ನು ಮೀರಿದ ಮಹಾಪ್ರಬಂಧ ವರ್ತಮಾನದ ಬೇಗುದಿಗೆ ಆಸರೆಯಾಗುವ ಶಕ್ತಿ ಪಡೆದಿದೆ.

ಜಿ.ಬಿ. ಹರೀಶ



ಬಯಲ ಬಾಗಿಲು

ಬಯಲ ಬಾಗಿಲು (ಕವನ ಸಂಕಲನ)

ಲೇಖಕ : **ಉಗಮ ಶ್ರೀನಿವಾಸ**

ಪುಟ : **66**

ಬೆಲೆ : **ರೂ. 50/-**

ಪ್ರಕಾಶನ : ನೆನಪು ಪ್ರಕಾಶನ, ಶಿವಮೊಗ್ಗ.

ತಮ್ಮ ಮೊದಲ ಕವನ ಸಂಕಲನ 'ಬಯಲ ಬಾಗಿಲು'ವಿನಲ್ಲಿ ಉಗಮ ಶ್ರೀನಿವಾಸ ಹೊಸ ಮಾತುಗಳಿಂದ ಮನಮುಟ್ಟುವ ಕವಿತೆಗಳನ್ನು ಬರೆದಿದ್ದಾರೆ.

ಶ್ರೀನಿವಾಸರ ಕವಿತೆಗಳಲ್ಲಿ ನಾವು ಅದನ್ನು ಕೇಳಲೇಬೇಕೆಂಬ ಮಾತಿನ ತೀವ್ರತೆ ಇದೆ. ಉದಾಹರಣೆಗೆ ಅವರ ಕವಿತೆಯ ಕೆಲ ಭಾಗಗಳನ್ನು ನೋಡಿ.

ಆಳೆತ್ತರದಲ್ಲಿ ನಿಂತ
ಗೊಮ್ಮಟನೆದುರು
ಕುಬ್ಜ ವಿಕಲಾಂಗ
ಮೊರೆಯಿಡುತ್ತಾನೆ
ದೇವರೇ ನನ್ನ
ಕೂಗಿನ ಅಳತೆಯೆಷ್ಟು *(ಹಾಯಕುಗಳು ಪುಟ - ೩೫)*

ಹುತ್ತದೊಳಗಿನ ಮೌನ
ನನ್ನ ಸುತ್ತ
ಬಾಯಿ ತೆರೆಯುವುದು ಹೇಗೆ ಗುರುವೆ?

(ಹುತ್ತದೊಳಗಿನ ಸದ್ದು ಪುಟ - ೧೨)

ಜಾರಿದ ಸೆರಗನ್ನು ಲೆಕ್ಕಿಸದೆ
ಆತನ ಕಣ್ಣಿಗೆ ಎವೆಯಿಕ್ಕುತ್ತಾಳೆ
ಹುಡುಗ ಬೆನ್ನು ತಿರುಗಿಸುತ್ತಾನೆ

(ಸೆರಗ ಜೋಕಾಲಿಯಾಟ, ಪುಟ - ೮)

ಇವರ ಕವಿತೆಗಳಲ್ಲಿ ಮಿಂಚುವ ಕಾವ್ಯಾತ್ಮಕ ಸಾಲುಗಳು ಸಿಕ್ಕುವುದಿಲ್ಲ. ಬದಲು ಇಡೀ ಕವಿತೆಯನ್ನೇ ಒಂದು ಅನುಭವವಾಗಿಸುವಿಕೆ, 'ಚಿತ್ರಕತೆ'ಯ ಅನುಭವದ ನಿರೂಪಣೆ ಇದೆ.

ಈ ಸಂಕಲನದ ಕವಿತೆಗಳಲ್ಲಿ ಹೊಸ ಕವಿಗಳು ಬರೆಯಲು ಆಶೆ ಪಡುವ ಸಾಮಾನ್ಯ ಅನ್ನಿಸುವ ಕವಿತೆಗಳಿವೆ. 'ಡಯಾನಾಳಿಗೆ' 'ನವಿಲುಗರಿ', 'ಮೋನಾಲಿಸಾಳಿಗೆ', 'ಬೆನ್ನ ಹೆಜ್ಜೆ', 'ಕವಿತೆ', 'ಬರಿಯಲೇಬೇಕಾದ ತುರ್ತಿಗೆ' ಈ ಬಗೆಯ ಕವಿತೆಗಳು ಮತ್ತು ಸಂಕಲನದ ದುರ್ಬಲ ಕವಿತೆಗಳು ಇಂಥವು. ಆದರೆ ಎಲ್ಲ ಕವಿಗಳು ಮುಟ್ಟಿರುವ ವಸ್ತುಗಳಾದ 'ಅಪ್ಪ', 'ಅವ್ವ'ದಂಥ ಕವಿತೆಗಳಲ್ಲಿ ಹೀಗಾಗಿಲ್ಲ. ಈ ಕವಿತೆಗಳಲ್ಲಿನ ತೀವ್ರತೆ ಮನಮುಟ್ಟುವಂತಿದೆ.

ಕವಿತೆ ಕಟ್ಟುವ ಪ್ರಯತ್ನದಲ್ಲಿ ಉಗಮ ಶ್ರೀನಿವಾಸ ಪ್ರಯೋಗಗಳನ್ನು ಮಾಡುವ ಹಂಬಲ ಉಳ್ಳವರು. ಹೊಸ ಮಾತುಗಳನ್ನು ಆಡಿ ತೋರಿಸಬೇಕೆನ್ನುವ ಆಶೆ ಉಳ್ಳವರು. 'ಧ್ಯಾನ ನೇಯ್ದ ಬಲೆ', 'ಅಜ್ಞಾತ ಎದೆಯ ಮುದುಕ', 'ತುಂಬಿಕೊಳ್ಳುವ ಬಗೆ', 'ಬಯಲ ಬಾಗಿಲು', 'ಗುರುವಿನ ಹಣ್ಣು'ವಿನಂತಹ ಸಂಕಲನದ ಮುಖ್ಯ ಕವಿತೆಗಳಲ್ಲಿ ಶ್ರೀನಿವಾಸರ ಕಾವ್ಯದ ಕ್ಷಣಗಳು ಇವೆ.

ಈ ಸಂಕಲನದ ಕವಿತೆಗಳು ಗದ್ಯಲಯದ ಕಡೆ ವಾಲುತ್ತವೆ. ಕೆಲ ಕವಿತೆಗಳು ನಿರುದ್ದೇಶ್ಯವಾಗಿ ಬರೆದಂತಿವೆ. (ಹೋಗಿ ಬಂದ ಬೈರಾಗಿ, ಹಣ್ಣಾಗಲು ಹೆದರಿಕೆ, ಕವಿತೆ ಬರೆಯಲೇಬೇಕಾದ ತುರ್ತಿಗೆ) 'ರಿಚಿ ಸೈಕಲ್' ಇಟಾಲಿಯನ್ ಚಿತ್ರದ ಚಿತ್ರಕತೆ 'ಬೈಸಿಕಲ್ ಥೀವ್ಸ್' ಪ್ರೇರಣೆಯಿಂದ ಬರೆದ ಕವಿತೆ ಸಿನಿಮಾ ಕತೆಯೊಂದರ ಮರುನಿರೂಪಣೆಯ ಸಿಕ್ಕುಗಳಲ್ಲಿ ಈ ಕವಿ ಸಿಕ್ಕಿಕೊಳ್ಳಬಾರದು. ಇಂತಹ ಆಟಗಳು ಕೇವಲ ಭಾಷೆಯ ರಂಜಕ ಆಟಗಳಾಗಿ ಮಾತ್ರ ಉಳಿದುಕೊಳ್ಳುತ್ತವೆ.

'ಒಂದು ಇರುಳಿಗಾಗಿ ಹಗಲು ಸವೆಸುವ ಕಷ್ಟ' ಗೊತ್ತಿರುವ ಶ್ರೀನಿವಾಸರಿಂದ ಮತ್ತಷ್ಟು ಒಳ್ಳೆಯ ಕವಿತೆಗಳನ್ನು ನಿರೀಕ್ಷಿಸಬಹುದು.



ಮುಗಿಲ ಸಾಲು

ಮುಗಿಲ ಸಾಲು (ಲೇಖನಗಳು)

ಲೇಖಕ : ಡಾ. ವಸಂತಕುಮಾರ ಪೆರ್ಲ
ಪುಟ : xvi + 304
ಬೆಲೆ : ರೂ. 90/-
ಪ್ರಕಾಶನ : ಸಾಹಿತ್ಯ ಸಂಘ (ರಿ.)
ಬದಿಯಡ್ಕ, ಕಾಸರಗೋಡು

ಈಗಾಗಲೇ ಕಥಾಸಂಕಲನ, ಕಾದಂಬರಿ, ಕವನ ಸಂಕಲನ, ಅಂಕಣ ಸಂಕಲನ, ಸಂಶೋಧನಾ ಪ್ರಬಂಧಗಳನ್ನೆಲ್ಲ ಪ್ರಕಟಿಸಿರುವ ವಸಂತಕುಮಾರ ಪೆರ್ಲ ಅವರ ಮತ್ತೊಂದು ಪುಸ್ತಕ 'ಮುಗಿಲ ಸಾಲು' ಪ್ರಕಟಗೊಂಡಿದೆ. ಇದನ್ನು ಸಾಹಿತ್ಯಿಕ ಮತ್ತು ಸಂಸ್ಕೃತಿ ಸಂಬಂಧ ಲೇಖನ ಮಾಲೆ ಎಂದು ಕರೆಯಲಾಗಿದೆ. ಸಾಹಿತ್ಯಕ್ಕೆ ಸಂಬಂಧಿಸಿದ ಬರಹಗಳೊಂದಿಗೆ ಈ

ಪುಸ್ತಕದಲ್ಲಿ 'ಮಹಿಳಾ ಸಶಕ್ತೀಕರಣ – ಒಂದು ನೋಟ', 'ಮೈಸೂರು ಪರಿಸರ ಪ್ರೇಕ್ಷಣೀಯ ಸ್ಥಳಗಳು', 'ಭಾರತದಲ್ಲಿ ಬಾನುಲಿ ವ್ಯವಸ್ಥೆ, 'ಮೈಸೂರು ಆಕಾಶವಾಣಿ' ತರಹದ ಲೇಖನಗಳೂ ಇವೆ. ಇಂಥ ಲೇಖನಗಳಲ್ಲಿನ ಮಾಹಿತಿಯ ಬಗ್ಗೆ ಓದುಗರಿಗೆ ಈಗಾಗಲೇ ಗೊತ್ತಿರುವುದರಿಂದ ಅವನ್ನು ಹೊರತುಪಡಿಸಿ, ಸಾಹಿತ್ಯಕ್ಕೆ ಸಂಬಂಧಿಸಿದ ಕೆಲ ಬರಹಗಳನ್ನು ಗಮನಿಸಬಹುದು. 'ಯು.ಆರ್. ಅನಂತಮೂರ್ತಿಯವರ ಕವನಗಳು – ಒಂದು ಪರಿಶೀಲನೆ' ಲೇಖನದಲ್ಲಿ ಅವರ ಕಾವ್ಯದ ಕುರಿತು ಪರ್ಲರು ವಿಶೇಷವಾದುದೇನನ್ನೂ ಹೇಳಿಲ್ಲ. ಅನಂತಮೂರ್ತಿಯವರ ಕವನಗಳ ಬಗ್ಗೆ ಚರ್ಚಿಸುತ್ತ ಅಡಿಗರ 'ಪ್ರಾರ್ಥನೆ' ಕವಿತೆಯೊಂದಿಗೆ ಅನಂತಮೂರ್ತಿಯವರ 'ಮಿಥುನ' ಕವಿತೆಯನ್ನು ಹೋಲಿಸಿದರೂ, ಅವರ ಕವಿತೆಗಳು ಎ.ಕೆ. ರಾಮಾನುಜನ್‌ರ ಕಾವ್ಯಕ್ಕೆ ಹತ್ತಿರವಾದ ರಚನೆಗಳಾಗಿವೆ. ರಾಮಾನುಜನ್‌ರ ಕಾವ್ಯದ ಮಾದರಿಯನ್ನು ಅನುಸರಿಸಿ, ಅದರಲ್ಲಿ ವಿಫಲವಾದುದಕ್ಕೆ ಉದಾಹರಣೆಯಂತಿದೆ ಅನಂತಮೂರ್ತಿಯವರ ಕಾವ್ಯ. ಅನಂತಮೂರ್ತಿ ಯವರ ಬುದ್ಧಿವಂತಿಕೆಯ ಕಾವ್ಯವನ್ನು ಈ ನೆಲೆಯಿಂದ ಶ್ರೀಯುತರು ಪರಿಶೀಲಿಸಿದ್ದರೆ ಮಹತ್ವದ ಒಳನೋಟಗಳು ಸಿಗುತ್ತಿದ್ದವು ಎಂದು ಅನಿಸುತ್ತದೆ. ಸಂಗೀತದ ಹಿನ್ನಲೆಯಲ್ಲಿ ಪು.ತಿ.ನ. ಕಾವ್ಯವನ್ನು ವಿಶ್ಲೇಷಿಸಿರುವ ಲೇಖನದಲ್ಲಿ ಸಂಗೀತವೇ ಪು.ತಿ.ನ. ಕಾವ್ಯದ ಸಮಸ್ಯೆ ಎಂಬುದು ಲೇಖಕರಿಗೆ ಹೊಳೆಯುವುದಿಲ್ಲ.

'ಎರವಲು ಸಂಸ್ಕೃತಿಯಿಂದ ಮೂಡಿಬಂದ ರೇಖೆ – ಚಿತ್ತಾಲರ ಶಿಕಾರಿ' ಲೇಖನದಲ್ಲಿ 'ಎರವಲು ಸಂಸ್ಕೃತಿ' ಎಂದು ಲೇಖಕರು ಯಾವುದನ್ನು ಸೂಚಿಸುತ್ತಿದ್ದಾರೆಂದು ಸ್ಪಷ್ಟವಾಗು ವುದಿಲ್ಲ. ಚಿತ್ತಾಲರ 'ಶಿಕಾರಿ' ಪಾಶ್ಚಾತ್ಯ ಸಾಹಿತ್ಯದ ಓದಿನ ಪರಿಣಾಮವೆಂದೆ? ಪ್ರಭಾವವೆಂದೆ? ಇದನ್ನೇ ಅವರು ಹೇಳುವಂತೆ 'ಎರವಲು ಚಿಂತನೆ' ಎಂದೆ? (ಪುಟ ೩೯) ಆದರೆ ಇದು ಎರವಲು ಸಂಸ್ಕೃತಿ ಹೇಗಾಗುತ್ತದೆಂದು ಓದುಗರಿಗೆ ಲೇಖನ ಓದಿದ ಮೇಲೆ ಗೊತ್ತಾಗುವು ದಿಲ್ಲ. 'ಶಿಕಾರಿ'ಯನ್ನು ಕನ್ನಡದ ಮಹತ್ವದ ಕಾದಂಬರಿಯೆಂದು ಒಪ್ಪಿಕೊಳ್ಳುವ ಶ್ರೀಯುತರಿಗೆ ಸಾಹಿತ್ಯದ ಮೂಲಭೂತ ತತ್ವಗಳ ಬಗ್ಗೆ ಸರಿಯಾದ ಕಲ್ಪನೆ ಇದ್ದಂತಿಲ್ಲ.

ಇಲ್ಲಿನ ಬಹಳಷ್ಟು ಲೇಖನಗಳು ಪರಿಚಯಾತ್ಮಕವಾದವುಗಳು. ಸಂಸ್ಮರಣ ಗ್ರಂಥ, ಅಭಿನಂದನ ಗ್ರಂಥಗಳಿಗೆ ಬರೆದವುಗಳಾಗಿವೆ. ಈಗ ಬೇಕಾಬಿಟ್ಟಿಯಾಗಿ ಬರುತ್ತಿರುವ ಅಭಿನಂದನ ಗ್ರಂಥಗಳಿಗೆ ಅಗತ್ಯವಾದ ಸಿದ್ಧಶೈಲಿ ಇಲ್ಲಿದೆ. 'ಅಡಕ ಬಂಧ ಮತ್ತು ತಾಂತ್ರಿಕ ಕೌಶಲ್ಯದ 'ಅನಂತ' (ಡಾ. ನಾ. ಮೊಗಸಾಲೆ ಕಾದಂಬರಿ), ರಾಜತರಂಗಣಿಯ ನೀರ್ಪಾಜೆ ಭೀಮಭಟ್ಟರು, ಏಕಾಂಗ ಸಾಹಸಿ ಸಾಹಿತಿ (ಎಸ್.ವಿ. ಶ್ರೀನಿವಾಸರಾವ್), ಭಾಷೆ ಮತ್ತು ವರ್ಣನೆಯ ಮೋಡಿಗಾರ – (ಬೇಕಲ ರಾಮ ನಾಯಕ) – ಇಂಥ ಇಲ್ಲಿನ ಬರಹಗಳಲ್ಲಿ ಮೇಲಿನ ಲೇಖಕರ ಸಾಹಿತ್ಯ ಮತ್ತು ವ್ಯಕ್ತಿತ್ವವನ್ನು ಸ್ಪರ್ಶಿಸಿದ ಅನುಭವ ಓದುಗರಿಗೆ ಆಗುವುದಿಲ್ಲ. ಇವೆಲ್ಲ ಮಾಹಿತಿಗಳನ್ನಷ್ಟೇ ಒಳಗೊಂಡಿರುವ ಜಡಬರಹಗಳಾಗಿವೆ.

ಬೇಟೆ ಸಾಹಿತ್ಯದ ಕುರಿತಾದ ವಿವರವಾದ ಮಾಹಿತಿ 'ಆಧುನಿಕ ಕನ್ನಡದಲ್ಲಿ ಸೃಜನಾತ್ಮಕ ಬೇಟೆ ಸಾಹಿತ್ಯ' ಲೇಖನದಲ್ಲಿದೆ. ಇಂತಹ ಅಡಿ ಟಿಪ್ಪಣಿಗಳ ಅಕಡೆಮಿಕ್ ಬರಹಗಳಿಂದ ನಾವು ಬಹಳಷ್ಟನ್ನು ನಿರೀಕ್ಷಿಸುವುದು ತಪ್ಪೆಂದು ಕಾಣುತ್ತದೆ. ದೇವರೇ ಈ ಎಲ್ಲ ಬರಹಗಳ ಅರ್ಥ ವೇನು? ಎಂದು ಓದುಗರು ಕೇಳಿಕೊಳ್ಳದೆ ಸುಮ್ಮನೆ ಇಲ್ಲಿನ ಬರಹಗಳ ಮೇಲೆ ಕಣ್ಣು ಹಾಯಿಸಿ ದರೆ ಕೆಲ ವಿವರಗಳು, ಮಾಹಿತಿಗಳು ಸಿಗುತ್ತವೆ. ಆ ಬಗ್ಗೆ ಯಾವುದೇ ಅನುಮಾನವಿಲ್ಲ.

ಸಂದೀಪ ನಾಯಕ

ಪ್ರತಿಕ್ರಿಯೆ



✦ 'ಸಂಚಯ'ವನ್ನು ನಿಲ್ಲಲು ಬಿಡದೇ ನಡೆಸಿಕೊಂಡು ಬರುತ್ತಿರುವ ನಿಮ್ಮ ಸಾಹಸವನ್ನು ಮೆಚ್ಚಿಕೊಳ್ಳುತ್ತ ಬಂದವರಲ್ಲಿ ನಾನೂ ಒಬ್ಬ. ಸಂಚಯ ೬೧ರಲ್ಲಿ ನನ್ನ ಪ್ರೀತಿಯ ತರುಣಕವಿ ವಿಕ್ರಮ ವಿಸಾಜಿ ಮತ್ತು ರಾಜೇಶ್ವರಿ ಚಟರ್ಜಿಯವರ ಲೇಖನಗಳು ಮತ್ತು ಪುಸ್ತಕ ಪರಿಶೀಲನೆಯ ವಿಭಾಗ ನನಗೆ ಇಷ್ಟವಾದವು. ನನ್ನ ಕಾಗದಗಳ ಸಂಗ್ರಹದ ಕತ್ತಲಲ್ಲಿ ಕುಳಿತಿದ್ದ ರಾಮಾನುಜನ್ನರ ಅಪ್ರಕಟಿತ ಕವಿತೆಯನ್ನು ನೀವು ಬೆಳಕಿಗೆ ತಂದದ್ದರಿಂದ 'ಸಂಚಯ'ದ ಬರೀ ಓದುಗನಾಗಿ ಹೊರಗಿದ್ದ ನನ್ನನ್ನು 'ಸಂಚಯ'ದ ಒಳಗೆ ಬಂದಂತಾಗಿದೆ. ರಾಮಾನುಜನ್ ಚಿತ್ರ ಹಳೆಯ ನೆನಪುಗಳನ್ನೆಲ್ಲ ಕರೆದುಕೊಂಡು ಬಂತು.

ಸುಮತೀಂದ್ರ ನಾಡಿಗ, ಬೆಂಗಳೂರು

✦ 'ಸಂಚಯ'-೬೧ ಸಿಕ್ಕಿತು. ಚೆನ್ನಾಗಿದೆ. ಜಿ.ಕೆ. ರವೀಂದ್ರಕುಮಾರ್ ಕುರಿತು ಕಾವ್ಯಾಭ್ಯಾಸ ಇಷ್ಟವಾಯಿತು. ಅವರ ಒಂದೆರಡು ಸ್ವಂತ ಕವಿತೆಗಳನ್ನು ಪ್ರಕಟಿಸಬಹುದಿತ್ತು ಅನ್ನಿಸಿತು. ಹಾಗೆಯೇ ಇತರ ಲೇಖನಗಳೂ ಇಷ್ಟವಾಯ್ತು. ಗಂಭೀರ ಓದುಗರು ಸ್ವಲ್ಪ ಪೋಷಿಸಿದರೆ ಸಂಚಯ ಇನ್ನಷ್ಟು ಹೆಚ್ಚು ಜನರನ್ನು ತಲುಪೀತು. ಮಹತ್ವ ಲಭ್ಯವಾಗಿದೆ. ಪ್ರಚಾರ-ಪ್ರಸಿದ್ಧಿ ಇನ್ನಷ್ಟು ಬೇಕಾಗಿದೆ.

ಪುಸ್ತಕ ಪರಿಶೀಲನೆ ವ್ಯಕ್ತಿನಿಷ್ಠವಾಗಿರಲಿಲ್ಲ. ವಸ್ತುನಿಷ್ಠವಾಗಿತ್ತು. ಬೇಳೂರು ಸುದರ್ಶನರು 'ಬತ್ತಳಿಕೆ'ಯತ್ತ ಸಾಕಷ್ಟು ಶಕ್ತ ಅರ್ಥಪೂರ್ಣ ಬಾಣಗಳನ್ನೆಸೆದಿದ್ದಾರೆ. ಕೃತಿಯನ್ನು ಹರಸಿದವರಿಗೆ ಕಸಿವಿಸಿಯಾದೀತು – (ಗೃಹಸ್ಥ ಹೊರಗಿನ ಸಂಬಂಧವನ್ನಿಟ್ಟುಕೊಂಡು ಅದು ಧರ್ಮಪತ್ನಿಗೆ ಗೊತ್ತಾದಾಗ ಬೆಚ್ಚಿಬೀಳುವುದಿಲ್ಲವೆ ಹಾಗೆ!) ಸುದರ್ಶನರ ನಿರ್ಭಯ, ಪ್ರಾಮಾಣಿಕ ಸತ್ಯಕ್ಕೆ/ಸತ್ವಕ್ಕೆ ಅಭಿನಂದನೆಗಳು. ಉಳಿದ ಪರಿಶೀಲನೆಗಳು ಚಿಕಿತ್ಸಕವಾಗಿದ್ದವು. ಇಂತಹ ಹಾದಿಗಳು (ನಾನೂ ಈ ಹಾದಿಯ ಪಥಿಕ) ಕವಿರಾಜಮಾರ್ಗವಾಗಲಿ ಎಂದೂ ಇಂತಹ ವಿಮರ್ಶಕರ ಸಂತತಿ ಸಾವಿರವಾಗಲಿ ಎಂದೂ ಹಾರೈಸುತ್ತೇನೆ.

ಬಾಲಸುಬ್ರಹ್ಮಣ್ಯ ಕಂಜರ್ಪಣೆ, ಮಡಿಕೇರಿ

✦ ನಮ್ಮ ಹೊಸ ಕವಿಗಳಲ್ಲಿ ತುಂಬಾ ಮುಖ್ಯರೆಂದು ಭಾವಿಸುವ ಜಿ.ಕೆ.ಯವರ ಕುರಿತಾದ ಲೇಖನಗಳು... ಅದಕ್ಕಿಂತಲೂ ಜಿ.ಕೆಯವರ ಲೇಖನ ನನಗೆ ಇಷ್ಟವಾದವು. ನನ್ನ ಮುಖ್ಯ ಅನುಮಾನವೆಂದರೆ ತಮ್ಮ ಲೇಖನದಲ್ಲಿ ಅಷ್ಟೊಂದು ಆರ್ದ್ರರಾಗಿರುವ ಅವರು, ತಮ್ಮ ಕಾವ್ಯದಲ್ಲಿ ಯಾಕೆ ಅದನ್ನು ತರದೆ ಬೌದ್ಧಿಕ ಮಟ್ಟದಲ್ಲೇ ಉಳಿದುಬಿಡುತ್ತಾರೆ ಎಂಬುದು. ಉಷಾ ಅವರು ಹೇಳುವಂತೆ ಅವರ ಕವಿತೆಗಳಲ್ಲಿನ ಸುಂದರ ರೂಪಕಗಳನ್ನು ಜೋಡಿಸುವ ಸೂಕ್ಷ್ಮ ಆರ್ದ್ರತೆಯ ದಾರ ಯಾಕೆ ಕಾಣಿಸುತ್ತಿಲ್ಲ? ನನ್ನ ಸಂವೇದನೆಯೇ ಜಡವಾಗಿದೆಯೆ ತಿಳಿಯುತ್ತಿಲ್ಲ.

'ಬತ್ತಳಿಕೆ' ಕುರಿತು ಸುದರ್ಶನ್ ಬರೆದದ್ದು ನೂರಕ್ಕೆ ನೂರು ನಿಜ. ಅಲ್ಲಿ ಅಕ್ಷರ ಕವಿತೆಯಿಲ್ಲ, ಅವುಗಳ ಅಸ್ಥಿಪಂಜರಗಳ ಅವಶೇಷಗಳು ಮಾತ್ರಾ ಇವೆ! ಒಟ್ಟಿನಲ್ಲಿ ಈ ಸಲದ ಸಂಚಿಕೆ ತುಂಬ ಹಿಡಿಸಿತು.

ಸುಬ್ರಾಯ ಚೊಕ್ಕಾಡಿ, ಚೊಕ್ಕಾಡಿ, ದ.ಕ.

✦ ನಿಮ್ಮ ಮ್ಯಾಗಜಿನ್ ನನ್ನ ಪತ್ರಿಕೆಯಂತಲ್ಲ. ನಿಧಾನವಾಗಿ ಮತ್ತೆ ಮತ್ತೆ ಓದುವಂಥದ್ದು. ನಿಮ್ಮ ಸಂಪಾದಕೀಯವನ್ನೂ ಒಳಗೊಂಡಂತೆ ಎಲ್ಲ ಬರಹಗಳೂ ಚೆನ್ನಾಗಿವೆ.

ರಾಜೇಶ್ವರಿ ಚಟರ್ಜಿಯವರ ಲೇಖನ ಕುರಿತು ಕೆಲವು ಮಾತುಗಳು; ಅವರು ತಮ್ಮ ಮಾತಿನ ಮಧ್ಯೆ ರಾಜಲಕ್ಷ್ಮಿ ಎನ್. ರಾವ್ ಅವರ ಹೆಸರನ್ನು ಉಲ್ಲೇಖಿಸದೇ ಇರುವ ಬಗ್ಗೆ ನನಗೆ ಉಂಟಾಗಿರುವ ಆಶ್ಚರ್ಯ. ರಾಜೇಶ್ವರಿ ಅವರಿಗೆ ರಾಜಲಕ್ಷ್ಮೀ ಒಬ್ಬ Cousin, ಕನ್ನಡ ಓದುಗರಿಗೆ ಇವರು ತುಂಬ ಮುಖ್ಯ ಅಂತ ನಿಮಗೂ ಅನ್ನಿಸಬಹುದು ಅಲ್ವಾ? ಪ್ರಾಯಶಃ ಬಿ.ಎಂ.ಶ್ರೀಯವರಿಗೆ ರಾಜಲಕ್ಷ್ಮಿ ಹೆಮ್ಮೆ ಪಡಬಹುದಾದಂಥ 'ಉತ್ತರಾಧಿಕಾರಿ!' ರಾಜೇಶ್ವರಿ ಚಟರ್ಜಿ ಅನವಶ್ಯಕವಾಗಿ ಕೆಲವು ಸಂಗತಿಗಳನ್ನು ಹೇಳಿದ್ದಾರೆ, ಓದುಗರಿಗೆ ಗೊಂದಲವಾಗುವಂತೆ ಸಂಬಂಧಗಳನ್ನು ಹೆಸರುಗಳನ್ನು ಹೇಳಿದ್ದಾರೆ ಎನ್ನಿಸಿತು.

ವೆಂಕಟಲಕ್ಷ್ಮಿ ಬಿ.ಎಸ್., ಬೆಂಗಳೂರು

✦ ಸಂಚಯದ ೬೧ನೇ ಸಂಚಿಕೆ ನೋಡಿದೆ. ನನ್ನ ಮನಸ್ಸು ತುಂಬಿ ಬಂತು. ಇಲ್ಲಿಯ ಲೇಖನಗಳು, ನಿಮ್ಮ ಸಂಪಾದಕೀಯ, ಅಲ್ಲಲ್ಲಿರುವ ಟಿಪ್ಪಣಿಗಳು ಬಹು ಗಂಭೀರವಾಗಿವೆ. ನಿಮ್ಮ ದೃಷ್ಟಿ ಆತೀಕವಾದುದು. ಅಷ್ಟೇ ಮಟ್ಟಿಗೆ ನಿಷ್ಠುರವಾದುದು. ಇದು ತುಂಬ ಅಗತ್ಯ. ಇಲ್ಲಿಯ ಲೇಖನಗಳಲ್ಲೂ ನಿಮ್ಮ ಬರಹಗಳಲ್ಲೂ ಈ ಆತ್ಮೀಯತೆ ಮತ್ತು ನಿಷ್ಠುರ ಪ್ರೀತಿ ಎರಡೂ ಗುಣಗಳೂ ಹದವಾಗಿವೆ. ಕಠೋರವಾದ ನಿಷ್ಠುರತೆ ಆತೀಕಕ್ಕೆ ವಿರುದ್ಧ; ನಿಷ್ಠುರ ಪ್ರೀತಿ ಮಾತ್ರ ಬೇಕು. ಇದು ಜೀವನದಲ್ಲಿ ಹೇಗೋ ಸಾಹಿತ್ಯ ಜೀವನದಲ್ಲೂ ತುಂಬ ಅಗತ್ಯ.

ನಾನು ತುಂಬಾ ಗಂಭೀರವಾಗಿ ಪರಿಗಣಿಸುವ ಜಿ.ಕೆ. ರವೀಂದ್ರಕುಮಾರ್ ಅವರ ಕವನ ಸಂಕಲನಗಳ ಬಗೆಗೆ ಮೂವರು ಬೇರೆ ಬೇರೆ ನೋಟಗಳಿಂದ ದೃಷ್ಟಿ ಹರಿಸಿದ್ದಾರೆ. ಅವು ಹಾಳತವಾಗಿವೆ. ಕೆದಕಿವೆ. ಅಂತರಂಗದಲ್ಲಿಟ್ಟು ನೋಡಿವೆ. ವಿಕ್ರಂ ವಿಸಾಜಿಯ ಲೇಖನ ಗಹನತೆಯನ್ನು ಹುಡುಕುತ್ತದೆ. 'ಶಬ್ದ' ಮೀಮಾಂಸೆಯ ಸಾಂಸ್ಕೃತಿಕ ತರ್ಕದ ರಹಸ್ಯ ತಿಳಿದಂತಾಗಿಲ್ಲ. ಕುರ್ತಕೋಟಿಯವರ ಬಗೆಗೆ ನೈಷ್ಠುರ್ಯವಾಗಿ ನೋಡುತ್ತದೆ. ಆದರೆ, ಆದೇ ನೈಷ್ಠುರ್ಯ ಬಲವಾದ ಅಧ್ಯಯನವನ್ನು ಬಯಸುತ್ತದೆ!

ಇರಲಿ, ನಮ್ಮ ಮನಸ್ಸಿನಲ್ಲಿ ವಿವೇಕವನ್ನು ಆತ್ಮೀಯತೆಯನ್ನೂ ನೈಷ್ಠುರ್ಯವನ್ನೂ ಏಕಕಾಲಕ್ಕೆ ಮೂಡಿಸುವ ಆಶಯ ಹೊತ್ತಿರುವ ನಿಮ್ಮ ಗುಣಗಣಗಳಿಗೆ ನನ್ನ ಶುಭಾಕಾಂಕ್ಷೆಗಳು, ಎಳೆಯರ ಬರೆಹಗಳು ಸಂಚಯದ ತುಂಬಾ ಸಂಚಿತಗೊಳ್ಳುತ್ತಿರಲಿ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಬೆಂಗಳೂರು

✦ 'ಸಂಚಯ' ಪತ್ರಿಕೆಯ ೬೧ನೇ ಸಂಚಿಕೆಯನ್ನು ಓದಿ ಬರೆಯಲೇಬೇಕು ಎನ್ನಿಸಿದ್ದರಿಂದ ಬರೆಯುತ್ತಿದ್ದೇನೆ. ಈ ಸಂಚಿಕೆಯು ಇಷ್ಟವಾಗಿದ್ದಕ್ಕೆ ಎರಡು-ಮೂರು ಕಾರಣಗಳಿವೆ. ವಸ್ತು ವೈವಿಧ್ಯದಲ್ಲಿ ಮತ್ತು ಪರಿವಿಡಿಯ ಹೊಸತನದ ನಿರ್ವಹಣೆಯಲ್ಲಿ 'ಸಂಪಾದನೆ'ಯ ಅಚ್ಚುಕಟ್ಟುತನ ಎದ್ದು ಕಾಣುವಂತಿದೆ.

ಕವಿಯೊಬ್ಬನ ಬಗ್ಗೆ ಚಿಕ್ಕ ಸಂಕಿರಣ ಹಾಗೂ ಆತನದೇ ಒಂದು ಬರಹ, ಕವನ ಅಡಕವಾಗಿರುವ ಅಂಕಣ ಕನ್ನಡ ಪತ್ರಿಕೋದ್ಯಮಕ್ಕೆ ಹೊಸದು. ಒಂದು ಸಂಪ್ರದಾಯವನ್ನೇ ಅದು ಹುಟ್ಟಿಹಾಕಿದೆ. ರವೀಂದ್ರಕುಮಾರರ ಕಾವ್ಯ ಕುರಿತು ಎಲ್ಲ ಲೇಖನಗಳೂ ಲಕ್ಷಣವಾಗಿವೆಯಾದರೂ ಶ್ರೀಮತಿ ಉಷಾರವರ ಲೇಖನ ಎಲ್ಲಕ್ಕಿಂತಲೂ ಸ್ಪಷ್ಟವಾಗಿದೆ.

ಸಂದೀಪನಾಯಕರ ವಿಮರ್ಶೆಯಲ್ಲಿನ ಖಾರ ಮತ್ತು ಧೈರ್ಯ ಈಗ ಅಪೇಕ್ಷಣೀಯ. ಇದರ

ಜತೆಗೆ ಸಿದ್ಧತೆಯೂ ಸೇರಿಕೊಂಡರೆ ಈಗ ವಿನಾಕಾರಣವಾಗಿ ಹೆಸರಾಗಿರುವವರ ಬರಹಗಳನ್ನು ಸಮರ್ಪಕವಾಗಿ ಪೃಥಕ್ಕರಿಸಿ ವಿಮರ್ಶೆಗೆ ನವೀನ ಸ್ವರೂಪವನ್ನು ಕೊಡಬಹುದು ಎಂದು ತೋರುತ್ತದೆ. ಆದರೆ ಖಾರ ಮತ್ತು ಧೈರ್ಯ ಉಳಿಯುವುದು ತುಸು ಕಷ್ಟವೇ.

ಶತಮಾನದ ಕನ್ನಡ ನಾಟಕ (ಒಂದು ಅವಲೋಕನ)ವನ್ನು ಕಿರುನಗೆಯಿಂದ ಓದಿಕೊಂಡೆ. 'ಶತಮಾನದ ಕನ್ನಡ ಕಾವ್ಯ'ವನ್ನು ಕುರಿತು ನಾನು ಬರೆದ ಲೇಖನಕ್ಕೆ ಪೂರಕವಾಗಿದೆ ಈ ಲೇಖನ. ಶತಮಾನದ ಕನ್ನಡ ವಿಮರ್ಶೆಗೂ ಇಂಥ ಚಿಕಿತ್ಸೆ ಬೇಕು.

ನಾವೆಲ್ಲ ಹೈಸ್ಕೂಲು-ಕಾಲೇಜುಗಳಲ್ಲಿ ಶ್ರೀರಂಗ- ಕೈಲಾಸಂ - ಪರ್ವತವಾಣಿಯವರ ನಾಟಕಗಳನ್ನು ಓದಿ, ಆನಂದಿಸಿ, ಅಭಿನಯಿಸಿದವರು. ಆ ನಾಟಕಗಳಿಗೆ ನಾಟಕಾಂಶ ಬಂದಿರುವುದು ನಾಟಕಕಾರರಿಂದ. ಅದೇ ಅದರ ಹೆಚ್ಚುಗಾರಿಕೆ. ಅವು ನಾಟಕಕಾರರ ನಾಟಕಗಳು. ಆದರೆ ಆಮೇಲೆ ಬಂದ ನಾಟಕಗಳು ನಿರ್ದೇಶಕನ ಚಮತ್ಕಾರದಿಂದ ರಂಗಭೂಮಿಯ ಮೇಲೆ ವಿಜೃಂಭಿಸಿದಂಥವು. ಅವುಗಳಲ್ಲಿಯ ಸತ್ವ ನಿರ್ದೇಶಕನದೇ ಹೊರತು ನಾಟಕಕಾರನದಲ್ಲ. ಆಂತಾಲಜಿಯೋ ಸಂಕಿರಣವೋ ಮಾಡುವವರು ಲೋಪ ಮಾಡುವದು ಇಲ್ಲಿಯೇ. ರಾಮಮೂರ್ತಿಯವರು ಇದನ್ನು ಸರಿಯಾಗಿ (ಆದರೆ ಪರೋಕ್ಷವಾಗಿ) ಗುರುತಿಸಿದ್ದಾರೆ. ವಾರ್ಷಿಕೋತ್ಸವದಂಥ ನಾಟಕವನ್ನು ಬರೆಯುವ ಈಗ ಯಾರಿಗೂ ಸಾಧ್ಯವಿಲ್ಲ.

ವೈಯಕ್ತಿಕವಾಗಿ ನನ್ನದೊಂದು ಸಣ್ಣ ದೂರು : ನನ್ನ ಕವನ (ಮೂರು ಬೈ ಆರು)— ಚೌಪದಿಯಲ್ಲಿ ಬರೆದಿದ್ದೆ. ಆದರೆ ಅದು ಈಗ ಮುದ್ರಿತವಾಗಿರುವ ಆಕಾರ ನೋಡಿದರೆ ಹಳ್ಳ ತೋಡಿದಾಗ ಮಣ್ಣನ್ನು ಎತ್ತಿ ಎತ್ತಿ ಅದರ ಬದಿಯಲ್ಲೇ ರಾಶಿ ರಾಶಿಯಾಗಿ ಎಸೆದಂತಿದೆ. ಬಹುಶಃ ಕಂಪಾಸಿಟರನು ಕವನದ ಅಂತರಾರ್ಥವನ್ನು ಗ್ರಹಿಸಿ ಹೀಗೆ ಮಾಡಿರಬಹುದೆ?

ದೇಶ ಕುಲಕರ್ಣಿ, ಬೆಂಗಳೂರು

✦ 'ಸಂಚಯ' ಓದುತ್ತಿರುವೆ. ಕಳೆದ ಎರಡು ವರ್ಷಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಏನನ್ನೂ ಮಾಡಲಾಗಲಿಲ್ಲ. ಈಗ ಆರೋಗ್ಯ ಸುಧಾರಿಸಿದೆ. ಮತ್ತೆ ಏನಾದರೂ ಕೆಲಸ ಮಾಡುವ ಆಸೆ ಚಿಗುರುತ್ತಿದೆ.

ಈಚೆಗೆ ಎರಡು ಕನ್ನಡ ಪುಸ್ತಕ ಓದಿದೆ. ಶಿವಪ್ರಕಾಶರ 'ಬತ್ತೀಸರಾಗ' ಮತ್ತು 'ಮನು' ಅವರ 'ಮಹಾಸಂಪರ್ಕ' ಇವನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೋ ತಿಳಿಯದೆ ಒದ್ದಾಡುತ್ತಿದ್ದೇನೆ. ಆಧ್ಯಾತ್ಮವನ್ನು ಸರಳೀಕರಿಸಿ, ಅದನ್ನು ಮೂಢನಂಬಿಕೆಗಳ ತಕ್ಕೆಯಲ್ಲಿರಿಸಿ, ಜೀವನ ಶೋಧಕ್ಕಾಗಿ ಹಪಹಪಿಸುತ್ತಿರುವ ಬರೆಹಗಾರರು ಈಗೇಕೆ ಹೆಚ್ಚಾಗುತ್ತಿದ್ದಾರೆ? ಇಂಥ ಬರೆಹಗಳನ್ನು ಬೌದ್ಧಿಕವಾಗಿ ಇದಿರಿಸುವ ಚೈತನ್ಯವನ್ನು ಕನ್ನಡ ಕಳಕೊಂಡಿದೆಯೇ ಅಥವಾ ಅದು ಹೊಸ ಹಾದಿಯತ್ತ ಹೊರಳಿಕೊಳ್ಳುತ್ತಿದೆಯೆ? ನಾನಂತೂ ತುಂಬಾ ನಿರಾಶನಾಗಿದ್ದೇನೆ.

ಡಾ|| ಪುರುಷೋತ್ತಮ ಬಿಳಿಮಲೆ, ದೆಹಲಿ



ಸಾಹಿತ್ಯ ಅಕಾಡೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - ೫೬೦ ೦೦೧

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

೧) **ಕಾಡಿನ ದಾವೇದಾರ** — ರೂ. ೧೫೦/-
(ಬಂಗಾಳಿ ಮೂಲ : ಮಹಾಶ್ವೇತಾ ದೇವಿ, ಅನುವಾದ : ಜಿ. ಕುಮಾರಪ್ಪ)

೨) **ಉಮರಾವ್ ಜಾನ್ ಅದಾ** — ರೂ. ೧೦೦/-
(ಉರ್ದು ಮೂಲ : ಮಿರ್ಜಾ ರುಸ್ವಾ, ಅನುವಾದ : ಶಾಂತರಸ)

೩) **ಹಾವಿನ ಡೊಂಕು** — ರೂ. ೫೦/-
(ಸ್ವೀಡಿಷ್ ಮೂಲ : ಟೋರ್‌ಗ್ನಿ ಲಿಂಡ್‌ಗ್ರೆಯನ್)

೪) **ಕಾರ್ಮೆಲೀನ** — ರೂ. ೧೦೦/-
(ಕೊಂಕಣಿ ಮೂಲ : ದಾಮೋದರ ಮಾವಜೊ, ಅನುವಾದ : ಶಾ.ಮಂ. ಕೃಷ್ಣರಾಯ)

ಕಥೆಗಳು

೧) **ಕೊಂಕಣಿ ಕಥಾ ಸಂಗ್ರಹ** — ರೂ. ೧೨೫/-
(ಸಂಪಾದಕ : ಚಂದ್ರಕಾಂತ ಶ್ರೆಣೆ, ಅನುವಾದ : ಶಾ.ಮಂ. ಕೃಷ್ಣರಾಯ)

೨) **ಒಂದು ಪೀಳಿಗೆಯ ತೆಲುಗು ಕಥೆಗಳು** — ರೂ. ೧೫೦/-
(ಸಂಪಾದಕ : ಡಿ. ರಾಮಲಿಂಗಂ, ಅನುವಾದ : ಕುಂ. ವೀರಭದ್ರಪ್ಪ)

೩) **ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು** — ರೂ. ೧೫೦/-
(ಸಂಪಾದಕ : ಗೋಪಿಚಂದ್ ನಾರಂಗ್, ಅನುವಾದ : ಡಿ. ಎ. ಶಂಕರ್)

೪) **ಮಧುರಾಂತಕಂ ರಾಜಾರಾಂ ಕಥೆಗಳು** — ರೂ. ೧೫೦/-
(ತೆಲುಗು ಮೂಲ : ಮಧುರಾಂತಕಂ ರಾಜಾರಂ, ಅನುವಾದ : ಲಕ್ಷ್ಮೀಪತಿ ಕೋಲಾರ)

೫) **ದಕ್ಷಿಣ ಕಾಮರೂಪದ ಒಂದು ಕಥಾನಕ**
(ಅಸ್ಸಾಮಿ ಮೂಲ : ಇಂದಿರಾ ಗೋಸ್ವಾಮಿ, ಅನುವಾದ : ಆರ್.ಎಲ್. ಅನಂತರಾಮಯ್ಯ)

ನಾಟಕಗಳು

೧) **ಯಕೃತ್ತು** — ರೂ. ೫೦/-
(ಮರಾಠಿ ಮೂಲ : ಶ್ಯಾಮ ಮನೋಹರ, ಅನುವಾದ : ವೀಣಾ ಶಾಂತೇಶ್ವರ)

೨) **ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು** — ರೂ. ೫೦/-
(ಬಂಗಾಳಿ ಮೂಲ : ರವೀಂದ್ರನಾಥ್ ಟಾಗೋರ್, ಅನುವಾದ : ಶ್ರೀನಿವಾಸ್ ವಿ. ಸುತ್ರಾವೆ)

ಕಾವ್ಯ

೧) **ಆಡು ಹಾವೇ** — ರೂ. ೮೦/-
(ತಮಿಳು ಮೂಲ : ಡಾ. ಕಾರ್ಲೋಸ್, ಅನುವಾದ : ಡಾ. ಬಸವರಾಜ ಕಲ್ಗುಡಿ)

೨) **ಶ್ರೀರಾಧಾ** — ರೂ. ೬೦/-
(ಒಡಿಯಾ ಮೂಲ : ಶ್ರೀ ರಮಾಕಾಂತ ರಥ, ಅನುವಾದ : ಸಂಧ್ಯಾ ಎಸ್.)



೩) **ಶ್ರೀ ಬಸವಣ್ಣನವರ ವಚನ ಸಂಗ್ರಹ** — ರೂ. ೬೫/-
(ಸಂಪಾದಕ : ಸ.ಸ. ಮಾಳವಾಡ)

೪) **ಎರಡು ದಶಕದ ಕವಿತೆ** — ರೂ. ೬೫/-
(ಸಂಪಾದಕ : ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ)

೫) **ತೆಲುಗು ಕಾವ್ಯಮಾಲೆ** — ರೂ. ೧೨೫/-
(ಸಂಪಾದಕ : ದೇವುಲಪಲ್ಲಿ ರಾಮಾನುಜರಾವ್, ಅನುವಾದ : ಗುರುಮೂರ್ತಿ ಪೆಂಡಕೂರು)

ಸಂಚಯದ ಪ್ರಕಟಣೆಗಳು











1)	ಗಾಜು (ಕವಿತೆಗಳು)	ವಿವಿಧ ಕವಿಗಳು	ರೂ. 8-00*
2)	ಎ.ಕೆ. ರಾಮಾನುಜನ್ ಹೆಜ್ಜೆ ಗುರುತು	ವಿವಿಧ ಲೇಖಕರು	ರೂ. 1500*
3)	ಸಿಕಾಡ (ಕವನ ಸಂಕಲನ)	ಜಿ. ಕೆ. ರವೀಂದ್ರಕುಮಾರ್	ರೂ. 35-00
4)	ಡ್ರೀಮರ್ (ಕವಿತೆಗಳು)	ಡಿ. ವಿ. ಪ್ರಹ್ಲಾದ್	ರೂ. 18-00
5)	ಅಭಿಮುಖ (ಲೇಖನಗಳು)	ಎನ್.ಎಸ್. ಶ್ರೀಧರಮೂರ್ತಿ	ರೂ. 20-00
6)	ಬಗೆ ತೆರೆದ ಬಾನು (ಸಾಹಿತಿಗಳ ಸಂದರ್ಶನಗಳು)	ಸಂ. ಡಿ. ವಿ. ಪ್ರಹ್ಲಾದ್	ರೂ. 60-00
7)	ಚೌಕಟ್ಟು (ಸಮಕಾಲೀನ ದೃಶ್ಯಕಲೆ ಕುರಿತು)	ಸಂ. ಎಚ್.ಎ.ಅನಿಲ್‌ಕುಮಾರ್	ರೂ. 25-00
8)	ಮೌನದ ಹೊತ್ತು (ಅನುವಾದಿತ ಕವಿತೆಗಳು)	ಸು. ರಂ. ಎಕ್ಕುಂಡಿ	ರೂ. 20-00
9)	ಕನಸು ಕೋಲಿಯ ಕತ್ತು (ಕವನಗಳು)	ಗೋವಿಂದ ಹೆಗಡೆ	ರೂ. 30-00
10)	ನಾಟಕ ಅಂತರಂಗ	ಎ.ಆರ್. ನಾಗಭೂಷಣ	ರೂ. 40-00
11)	ಮುಕ್ತಚಂದ	ಶಾಂತಿನಾಥ ದೇಸಾಯಿ ನೆನಪಿನ ಸಂಪುಟ	ರೂ. 85-00
12)	ಕಂಬಾರರ ನಾಟಕಗಳು	ಸಂ. ವಿಕ್ರಮ ವಿಸಾಜಿ	ರೂ. 45-00
13)	ಅವಧೂತನೊಬ್ಬನ ರೂಪಾಂತರ	ಕಥಾ ಸಂಕಲನ	ರೂ. 30-00
14)	ಮರೆತ ಮಾತು (ಕವಿತೆಗಳು)	ಡಿ.ಎಸ್. ರಾಮಸ್ವಾಮಿ	ರೂ. 45-00
15)	ಎರಡು ಏಕಾಂಕಗಳು	ಟಿ. ಶ್ರೀನಿವಾಸರಾಜು	ರೂ. 20-00


















*ಪ್ರತಿಗಳು ಮುಗಿದಿವೆ.

ಂಚಯ ಗ್ಯಾಲರಿ





ಆರ್.ಎಂ. ಹಡಪದ್ ಅವರು ರಚಿಸಿದ ಭಾವಚಿತ್ರ

SANCHAYA (Quarterly)
MAG (2) PRB-DECL : 309/94-95

Edited, Printed & Published by
D.V. Prahalad
No. 100, 2nd Main, 6th Block
3rd Stage, 3rd Phase,
Banashankari, Bangalore - 560 085
Ph : 080-679 1925